MOTION OF THANKS TO THE GOVERNOR'S ADDRESS.

(Debate continued)

ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಸ್ವಾಮಿ, ನಿನ್ನೆ ನಾನು ಮಾತನಾಡುವ ಕಾಲಕ್ಕೆ, ರಾಜ್ಯಪಾಲರು ಭ್ರಷ್ಟಾಚಾರದ ನಿವಾರಣೋಪಾಯದ ಬಗ್ಗೆ ಏನೂ ನಿರ್ದಿಷ್ಟವಾದ ಸೂಚನೆಯನ್ನು ತಮ್ಮ ಭಾಷಣದಲ್ಲಿ ಮಾಡಲಿಲ್ಲ ಎಂದು ಹೇಳಿದೆ. ನಮ್ಮ ದೇಶದಲ್ಲಿ ಈ ಭ್ರಷ್ಟಾಚಾರದ ನಿವಾರಣೆಯ ಬಗ್ಗೆ ಸಾಕಷ್ಟು ಉಪಾಯಗಳು ಕೇಂದ್ರದಿಂದ ಕೈಗೊಳ್ಳಲ್ಪಟ್ಟಿವೆ. ಭ್ರಷ್ಟಾಚಾರದ ನಿವಾರಣೋಪಾಯಗಳನ್ನು ಕೇಂದ್ರದವರು ಕೈಗೊಂಡಿದ್ದಾರೆ. ಕೇಂದ್ರದವರು ಕೈಗೊಂಡ ಈ ನಿವಾರಣೋಪಾಯಗಳು ಸಾಕಷ್ಟು ತೃಪ್ತಿಕರವಾಗಲಿಲ್ಲ ಎನ್ನುವ ಮಾತನ್ನು ಅವರು ಹೇಳಬಹುದಾಗಿತ್ತು. ಸರ್ಕಾರದವರು ಈ ದಿಶೆಯಲ್ಲಿ ಯಾವ ನಿರ್ಧಾರಕ್ಕೆ ಬಂದಿದ್ದಾರೆ ಎನ್ನುವುದು ನಿಶ್ಚಿತವಿಲ್ಲ. ನಿನ್ನೆ ಪ್ರಶ್ನೋತ್ತರ ಕಾಲದಲ್ಲಿ ಗೃಹ ಮಂತ್ರಿಗಳು ರಾಜಕೀಯ ಭ್ರಷ್ಟಾಚಾರದ ಬಗ್ಗೆ ಒಂದು ಸಮಿತಿಯನ್ನು ನೇಮಿಸಬೇಕು ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆಂದು ಹೇಳಿದರು. ಅಧಿಕಾರಿಗಳ ಭ್ರಷ್ಟಾಚಾರಕ್ಕಿಂತಲೂ ಅಧಿಕಾರೇತರ ಭ್ರಷ್ಟಾಚಾರ ಬೃಹತ್ ಸ್ವರೂಪ ತಾಳಿದೆ ಎಂದು ಹಲವು ಸಲ ಈ ಸಭೆಯಲ್ಲಿ ನಾನು ಹೇಳಿದ್ದೇನೆ. ಅಧಿಕಾರೇತರರು ಸ್ಪಷ್ಟವಾಗಿ, ನಿರ್ಮಲಚಿತ್ತರಾಗಿ, ಸಚ್ಚರಿತ್ರರಾಗಿ ರಾಜಕೀಯ ಭ್ರಷ್ಟಾಚಾರವನ್ನು ನಿವಾರಿಸಿದರೆ ಅಧಿಕಾರಿಗಳ ಭ್ರಷ್ಟಾಚಾರವನ್ನು ನಿವಾರಿಸುವುದರಲ್ಲಿ ವೇಳೆ ಹಿಡಿಯುವುದಿಲ್ಲ ಎನ್ನುವ ಮಾತನ್ನು ಹೇಳುವುದು ಸಹ ತಮಗೆಲ್ಲರಿಗೂ ಒಪ್ಪಿಗೆಯ ಮಾತಾಗಿದೆ. ಆ ಬಗ್ಗೆ ಸಹ ಅವರು ನಿರ್ದಿಷ್ಟವಾಗಿ ಹೇಳಬೇಕಾಗಿತ್ತು.

ಈ ಬಗ್ಗೆ ಅವರು ನಿರ್ದಿಷ್ಟವಾಗಿ ಹೇಳಬೇಕಾಗಿತ್ತು. ಇದನ್ನೇಕೆ ಹೇಳುತ್ತಿದ್ದೇನೆಂದರೆ, ನಮ್ಮ ದೇಶದ ಹೊರಗಿರುವ ನಮ್ಮ ಶತ್ರುಗಳಾದ ಚೈನ ಮತ್ತು ಪಾಕಿಸ್ತಾನಗಳಿಂದ ನಮಗಾಗಬಹುದಾದ ತೊಂದರೆಗಿಂತ ಹೆಚ್ಚಾಗಿ ನಮ್ಮ ದೇಶದೊಳಗಿರುವ ಅನಾಚಾರ ಮತ್ತು ಭ್ರಷ್ಟಾಚಾರಗಳಿಂದ, ಅಶುದ್ಧ ನಡನಳಿಕೆಯಿಂದ ಹೆಚ್ಚಿನ ಅನಾಹುತ ಆಗುವ ಸಂಭವವಿದೆ. ಈ ಕಾರಣಕ್ಕಾಗಿ ಇದಕ್ಕೆ ಹೆಚ್ಚು ಗಮನ ಕೊಡಬೇಕು. ನಾವು ಎಷ್ಟೋ ವೇಳೆ ಭ್ರಷ್ಟಾಚಾರದ ವಿಷಯವನ್ನು ಮಾತನಾಡುತ್ತೇವೆ, ಆದರೆ ಸಾಧಾರಣವಾಗಿ ನಮಗೆ ತಿಳಿಯೋ ತಿಳಿಯದೆಯೋ ಇದನ್ನು ತಡೆಗಟ್ಟುವ ಪ್ರಯತ್ನದಲ್ಲಿ ನಮಗೆ ಸೋಲಾಗಿದೆ. ನಾವು ನಮ್ಮ ದೇಶವನ್ನು ರಕ್ಷಣೆ ಮಾಡುವುದಕ್ಕಾಗಿ ದೇಶದಲ್ಲಿ ಭ್ರಷ್ಟಾಚಾರವನ್ನು ನಿವಾರಿಸಲು ಒಂದು ಸರಿಯಾದ ವ್ಯವಸ್ಥೆ ಮಾಡುವುದು ಅಗತ್ಯ. ಈ ದೃಷ್ಟಿಯಿಂದ ಪ್ರಯತ್ನ ಮಾಡಿದರೆ ಇನ್ನು ಕೆಲವು ದಿವಸಗಳಲ್ಲಿ ಯಾವುದೇ ಪಕ್ಷ ಅಥವಾ ವ್ಯಕ್ತಿ ಎಂಬ ಭೇದವಿಲ್ಲದೆ ರಾಜಕೀಯದಲ್ಲಿ ಭ್ರಷ್ಟಾಚಾರಕ್ಕೆ ತುತ್ತಾಗಲು ಅವಕಾಶವಿಲ್ಲದಾಗುವುದು...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಸದಸ್ಯರು ನಾವು ನಾವು ಎನ್ನುತ್ತಾರೆ. ಈ ಸಭೆಯ ಸದಸ್ಯರೆಲ್ಲರಿಗೂ ಅನ್ವಯಿಸಿ ಹಾಗೆ ಹೇಳುತ್ತಾರೋ ಅಥವಾ ಬರಿಯ ಕಾಂಗ್ರೆಸ್‌ನವರಿಗೆ ಅದು ಅನ್ವಯಿಸುತ್ತದೆಯೊ ಗೊತ್ತಿಲ್ಲ. ನಾನಂತೂ ಆ ಗುಂಪಿಗೆ ಸೇರಿಲ್ಲ. ಈ ಸಭೆಯ ಸದಸ್ಯರಲ್ಲಿ ನಾನೂ ಸೇರಿದ್ದೇನೆಂದು ಅಧ್ಯಕ್ಷರು ಹೇಳಿದರು. ನಾನು ಎನ್ನುವ ಪದದ ವ್ಯಾಪ್ತಿ ಬಹಳವಾಗಿದೆ. ನಾವು ಎಂದರೆ ಅಧಿಕಾರದಲ್ಲಿರುವವರಲ್ಲದೆ ಈ ಸಭೆಯ ಸದಸ್ಯರು ಎಂದಾದರೆ ಅವರಲ್ಲಿ ಅಧ್ಯಕ್ಷರೂ ಸೇರುತ್ತಾರೆ. ಆದುದರಿಂದ ಈಗ ಮಾತನಾಡುತ್ತಿರುವ ಸದಸ್ಯರು ಸ್ವಲ್ಪ ಎಚ್ಚರಿಕೆಯಿಂದ ಮಾತನಾಡಬೇಕು.—ಇಂಥವರಿಗೇ ಅನ್ವಯಿಸುತ್ತದೆ ಎಂದು ಹೇಳಬೇಕು.

9-30 A.M.

ಶ್ರೀ ಎ. ಜೆ. ದೊಡ್ಡಮೇಟಿ.—ಇಂಥವರಿಗೇ ಅನ್ವಯಿಸುತ್ತದೆ ಎಂದು ಹೇಳುವುದು ಶಿಷ್ಟಾಚಾರವಲ್ಲ. ನನ್ನ ಮನಸಿನಲ್ಲಿ ಯಾವುದೇ ವ್ಯಕ್ತಿಯಿಲ್ಲ, ಸಮಾಜದಲ್ಲಿ ಭ್ರಷ್ಟಾಚಾರ ಬಹಳವಾಗಿದೆ. ಇದರಲ್ಲಿ ಕಾಂಗ್ರೆಸ್‌ನವರಿರಬಹುದು, ಅಧಿಕಾರಿಗಳಿರಬಹುದು, ಇತರರೂ ಇರಬಹುದು. ಸರಳ ಸ್ವಭಾವದ ಪ್ರಾಮಾಣಿಕರು ಮೂಲೆಗುಂಪಾಗುವ ಸಂಭವವಿದೆ. ಹಿಂದೆ ಆದಿಕರ್ಣಾಟಕರು ಮತ್ತು ಆದಿದ್ರಾವಿಡರನ್ನು ನಮ್ಮ ಸಮಾಜದಲ್ಲಿ ಕೆಲವರು ದೂರವಿಟ್ಟಿದ್ದರು, ಹಿಂದೆ ಬೀಳಿಸಿದ್ದರು. ಆ ರೀತಿ ಸರಳ ಸ್ವಭಾವದ ಪ್ರಾಮಾಣಿಕರು ಹೀನಸ್ಥಿತಿಗೆ ಬರುವ ಸಂಭವವಿದೆ. ಆದುದರಿಂದ ಈಗಲೇ ಇದನ್ನು ತಪ್ಪಿಸಲು ತಕ್ಕ ಪ್ರಚಾರ ಕೆಲಸ ಮಾಡಬೇಕು. ಎಚ್ಚೆತ್ತು ಕೆಲಸ ಮಾಡಬೇಕು. ಬೇರೆ ಬೇರೆ ಪಕ್ಷಗಳಲ್ಲಿರುವ ಇಂಥ ಭ್ರಷ್ಟಾಚಾರೀ ಜನರು ಸಂಘಟನೆಗೊಂಡು ಪ್ರಾಮಾಣಿಕರನ್ನು ಎದುರಿಸುವ ಸಂಭವವಿದೆ. ಆದಕಾರಣ ದೂರದೃಷ್ಟಿಯಿಂದ ಇದನ್ನು ವಿಚಾರ ಮಾಡಿ ಈ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳಬೇಕೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಬೇಕಾಗಿತ್ತು.

(ಶ್ರೀ ಎ. ಜೆ. ದೊಡ್ಡಮೇಟಿ)

ಬೇರೆ ವಿಷಯಗಳನ್ನು ಹೇಳಬೇಕಾದರೆ, ಸಹಕಾರದ ಬೆಳವಣಿಗೆಯ ಬಗ್ಗೆ ನಮ್ಮ ರಾಜ್ಯಪಾಲರು ಹೇಳಿದ್ದಾರೆ. ಮಂತ್ರಿಗಳು ಬೇರೆ ಬೇರೆ ಕಡೆ ಈ ಬಗ್ಗೆ ಹೇಳಿದ್ದಾರೆ. ಸಹಕಾರಿ ಚಳುವಳಿಯಲ್ಲಿ ಸಂಪೂರ್ಣವಾಗಿ ಸರಕಾರಿ ನಿಯಂತ್ರಣವನ್ನು ತಪ್ಪಿಸಿ ಇದು ಪ್ರತ್ಯೇಕವಾಗಿರುವಂತೆ ಮಾಡಬೇಕೆಂದು ಹೇಳಿದ್ದಾರೆ. ಅವರೆ ಸರಕಾರಿ ಶಾಖೆ ಅಥವಾ ಆಡಳಿತದಲ್ಲಿ ಈಗಾಗಲೇ ಏನು ನಡೆದಿವೆ ಎನ್ನುವುದನ್ನು ಅವರು ವಿಚಾರ ಮಾಡಬೇಕು. ಇದುವರೆಗೆ ಸಹಕಾರ ಕ್ಷೇತ್ರದಲ್ಲಿ ಸಹಕಾರದ ಹಾಗೂ ಶಾಸನಸಭೆಗಳ ನಿಯಂತ್ರಣವಿದರೂ ಅಲ್ಲಿ ಅನೇಕ ಅನ್ಯಾಯಗಳು ನಡೆಯುತ್ತವೆಂದು ಹೇಳುತ್ತಾರೆ. ಹೀಗಿರುವಾಗ ಸಹಕಾರ ಕ್ಷೇತ್ರದಲ್ಲಿ ಯಾವ ವಿಧವಾದ ಸರಕಾರಿ ನಿಯಂತ್ರಣವಿಲ್ಲವಾದರೆ ಅದು ಯಾವ ಗತಿ ಮುಟ್ಟೀತು ಎಂಬುದನ್ನು ಯೋಚನೆ ಮಾಡಬೇಕು. ಏನೋ ಭಾವಾವೇಶವಲ್ಲ ತಾತ್ವಿಕವಾದದ ಮೇಲೆ ಈ ಕ್ಷೇತ್ರವನ್ನು ಪ್ರತ್ಯೇಕ ಪಡಿಸುವುದು ಸರಿಯಲ್ಲವೆಂಬ ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ನೀರಾವರಿ ಬಾವಿಗಳ ಬಗ್ಗೆ ಸರಕಾರದವರು ಅನೇಕ ಉಪಾಯಗಳನ್ನು ಕೈಗೊಂಡಿದ್ದಾರೆ. 250 ಲಕ್ಷ ರೂಪಾಯಿಗಳಲ್ಲಿ 40 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಲಾಗಿವೆಯೆಂದು ಹೇಳಿದ್ದಾರೆ. ಈ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈಗ ಎರಡೂವರೆ ಅಥವಾ ಮೂರು ಸಾವಿರ ರೂಪಾಯಿಗಳನ್ನು ಒಂದೊಂದು ಬಾವಿಗೆ ಸರಕಾರದವರು ಸಾಲ ಕೊಡುತ್ತಿದ್ದಾರೆ. ಇದಕ್ಕೆ ಬಡ್ಡಿ ಹಾಕಿ ಹತ್ತು ಕಂತುಗಳಲ್ಲಿ ವಸೂಲು ಮಾಡುತ್ತಿದ್ದಾರೆ. ಇದರಲ್ಲಿ ಅನೇಕ ಲೋಪದೋಷಗಳಿವೆ. ಈ ಬಾವಿಗಳಲ್ಲಿ ಎಷ್ಟು ಪೂರ್ತಿಯಾಗಿದೆ, ಎಷ್ಟು ಕೆಟ್ಟು ಹೋಗಿದೆ ಎಂದು ವಿಚಾರ ಮಾಡಿದರೆ ಶೇಕಡ 25 ರಷ್ಟಾದರೂ ನಿರುಪಯೋಗವಾಗಿವೆ ಎನ್ನುವುದಕ್ಕೆ ಏನೂ ಅಡ್ಡಿ ಇಲ್ಲ. ಸರಕಾರ ಒಂದು ಕ್ರಮವನ್ನನುಸರಿಸಬೇಕು. ಸರಕಾರ ಈ ಹಣವನ್ನು ಸಾಲವೆಂದು ಕೊಡಬಾರದು. ದೊಡ್ಡ ದೊಡ್ಡ ನೀರಾವರಿ ಜಲಾಶಯಗಳನ್ನು ಕಟ್ಟಿದಾಗ ಹೇಗೆ ಬೆಟರ್‌ಮೆಂಟ್ ಲೆವಿ ಎಂದು ಹಾಕುತ್ತಾರೋ ಹಾಗೆ ಹಾಕಬೇಕು. ಐದಾರು ಎಕರೆ ತೋಟ ಮಾಡುವುದಕ್ಕೆ ಒಂದು ಬಾವಿಗೆ ಧನ ಸಹಾಯ ಮಾಡುತ್ತೀರಿ. ದೊಡ್ಡ ನೀರಾವರಿಗೆ ಬೆಟರ್‌ಮೆಂಟ್ ಲೆವಿ ಹೇಗೆ ಹಾಕುತ್ತಾರೆ ಹಾಗೆ ಆರು ಎಕರೆ ತರಿ ಅಥವಾ ತೋಟ ಮಾಡಿದರೆ ಒಂದು ಎಕರೆಗೆ 500 ರೂಪಾಯಿಗಳಂತೆ ಬೆಟರ್‌ಮೆಂಟ್ ಲೆವಿ ಹಾಕಿ ಅದನ್ನು 25 ಕಂತುಗಳಲ್ಲಿ ವಸೂಲು ಮಾಡುವ ಮಾರ್ಗವನ್ನು ಏಕೆ ಸಣ್ಣ ನೀರಾವರಿಗೆ ಅನುಸರಿಸಬಾರದೆಂಬುದನ್ನು ಯೋಚನೆ ಮಾಡಬೇಕು. ಇದರಿಂದ ಬಡ್ಡಿ ಉಳಿತಾಯವಾಗುವುದಲ್ಲದೆ ಹಣದ ಸದುಪಯೋಗವಾಗುತ್ತದೆ. ಯಾರು ಮಾಡಿದ್ದಾರೆ ಯಾರು ಮಾಡಿಲ್ಲ ಎನ್ನುವುದನ್ನು ತನಿಖೆ ಮಾಡುವುದಕ್ಕೂ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಸರಕಾರ ಈ ಸೂಚನೆಯನ್ನು ನಿಜವಾಗಿಯೂ ಆಲೋಚನೆ ಮಾಡಬೇಕಾಗಿದೆ. ಪಂಪ್‌ಸೆಟ್ಟುಗಳನ್ನು ಹಂಚುವ ವಿಚಾರದಲ್ಲಿ ಸಾಮಾನ್ಯವಾಗಿ ಉದಾರವಾದ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಆದರೆ ಪಂಪ್‌ಸೆಟ್‌ಗಳನ್ನು ನಾವೇ ಕೊಡುತ್ತೇವೆ, ಬೇಕಾದವರು ತೆಗೆದುಕೊಳ್ಳಬಹುದು ಎಂದು ಅಧಿಕಾರ ವರ್ಗದ ಮೂಲಕ ಡಂಗುರ ಸಾರಿದರು. ಎಷ್ಟನ್ನು ಹಂಚಿದ್ದಾರೆಂದು ನೋಡಬೇಕು ಹಂಚಿರುವುದು ಏನೂ ಸಾಲದು. ಮತ್ತು ವಿಳಂಬ ಬಹಳವಾಗಿದೆ. ಇದಕ್ಕೆ ಕಾರಣವೇನೆಂದು ಶೋಧನೆ ಮಾಡಬೇಕು. ಮತ್ತು ವಿಳಂಬವಿಲ್ಲದಂತೆ ವ್ಯವಸ್ಥೆ ಮಾಡಬೇಕು. ಪಂಪುಸೆಟ್ಟುಗಳು ಬೇಗ ರೈತರ ಕೈಸೇರುವಂತೆ ಮಾಡಬೇಕು.

ಭೂಸುಧಾರಣೆಯ ಕಾಯಿದೆಯ ವಿಚಾರದಲ್ಲಿ ರಾಜ್ಯಪಾಲರು ಹೇಳಿದ್ದಾರೆ. ಕೇಂದ್ರ ಸರಕಾರದಲ್ಲಿ ಇದಕ್ಕಿರುವ ಕೆಲವು ಅಡ್ಡಿ ಆತಂಕಗಳನ್ನು ದೂರಮಾಡುವ ಪ್ರಶ್ನೆ ಇದೆ, ಬೇಗ ಕಾರ್ಯಗತ ಮಾಡುತ್ತೇವೆಂದು ಹೇಳಿದ್ದಾರೆ. ಬೇಗ ಎನ್ನುವುದು ಯಾರ ಕೈಗೂ ಸಿಕ್ಕದೇಯಿರುವ ವಸ್ತುವಾಗಿದೆ. ಬೇಗ ಎನ್ನುವ ಪದ ಸರಕಾರಕ್ಕೆ ಒಂದು ಶಾಪ ಎಂದು ಕಾಣುತ್ತದೆ. ಈ ಬಗ್ಗೆ ಒಂದು ರೀತಿಯಲ್ಲಿ ಜನರಲ್ಲಿ ಸಂಶಯ ವಡೆದಿರುವದು ನಿಜ. ಇದನ್ನು ರಾಜಕೀಯ ಕಾರಣಗಳಿಂದ ಉಪೇಕ್ಷೆ ಮಾಡುವುದು ಬೇಡ. ವಿಚಾರ ಮಾಡಿ ನೋಡಿದರೆ ಭೂಸುಧಾರಣೆ ಜಾರಿಗೆ ಬರುತ್ತದೆಯೋ ಇಲ್ಲವೆ, ಬಂದರೂ ಯಾವಾಗ ಬರುತ್ತದೆ ಎಂಬ ಸಂಶಯ ಜನತೆಯಲ್ಲಿ ಮೂಡಿದೆ. ಗೇಣಿದಾರರ ರಕ್ಷಣೆ ಕಾನೂನಿಗೆ ವರ್ಷ ವರ್ಷಕ್ಕೆ ಜೀವದಾನ ಕೊಡುತ್ತಿರುವುದಾಗಿದೆ. ಇಂತಹ ಜೀವದಾನ ಕೊಡುವ ಕಾನೂನನ್ನು ಮತ್ತೊಂದು ಸಾರಿ ತರುವುದಿಲ್ಲ, ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂಬ ಆಶ್ವಾಸನೆಯನ್ನು ಜನರಿಗೆ ಕೊಡಬೇಕು.

ಕಂದಾಯ ಶಾಖೆಯಲ್ಲಿ ಇನಾಂ ಸೆಕ್ಷನ್ ಎಂದು ಇದೆ. ಅಲ್ಲಿ ವಿಲಕ್ಷಣವಾದ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಸೆಕ್ರೆಟೇರಿಯೆಟ್‌ನಲ್ಲಿ ಈ ಇಲಾಖೆಯ ಸಂಘಟನೆ ಮಾಡಿ ಬಹಳ ಬುದ್ಧಿವಂತಿಕೆಯಿಂದ ಕೆಲಸ ನಡೆಯಬೇಕಾಗಿದೆ. ನಿಷ್ಠೆಯಿಂದ ಜಾಗರೂಕತೆಯಿಂದ ಸತತ ಪರಿಶ್ರಮದಿಂದ ಕೆಲಸ

ಮಾಡತಕ್ಕಂಥ ಸೀನಿಯರ್ ಅಧಿಕಾರಿಗಳು, ಸೆಕ್ರೆಟರಿ, ಅಂಡರ್ ಸೆಕ್ರೆಟರಿಗಳು ಇರಬೇಕು ಎಂದು ಹೇಳಬೇಕಾಗಿದೆ. ಇನಾಮು ಸೆಕ್ಷನ್ನಿನಲ್ಲಿ ಇನಾಮು ಗ್ರಾಮಗಳ ಬಗ್ಗೆ ಕ್ರಮ ತಂದ ಕೊಳ್ಳುವ ವಿಚಾರದಲ್ಲಿ ಅನೇಕ ಪ್ರಶ್ನೆಗಳು ಸರಕಾರದ ಮುಂದೆ ಬಂದಿವೆ ಆದರೆ ಯಾವುದೂ ಈವರೆಗೆ ಪರಿಹಾರ ವಾಗಿಲ್ಲ. ಉತ್ತರ ಕರ್ನಾಟಕದಲ್ಲಿರುವ ದೇವಸ್ಥಾನಗಳ ಇನಾಮು ಭೂಮಿಗಳ ಪ್ರಶ್ನೆ ಸರಕಾರದ ಮುಂದೆ ಬಂದಿದೆ. ಆದರೂ ಈ ಸಂಬಂಧದಲ್ಲಿ ಒಂದು ಮಸೂದೆಯನ್ನು ಸಭೆಯ ಮುಂದೆ ಈವರೆಗೆ ಮಂಡಿಸಿಲ್ಲ. ಯಾವುದೋ ಒಂದು ವೆಸ್ಟೆಡ್ ಇಂಟರೆಸ್ಟ್ ಮೂಲಕ ಇವೆಲ್ಲ ವಿಳಂಬಗೊಳ್ಳುತ್ತಿವೆ ಎಂದು ಕಾಣುತ್ತದೆ. ಆದ್ದರಿಂದ ಇನಾಂ ಸೆಕ್ಷನ್ನಿನಲ್ಲಿ ವಿಶೇಷ ಕಾಳಜಿಯಿಂದ ಅತ್ಯಂತ ಅಂತಃಕರಣಪೂರ್ವಕ ವಾಗಿ ಕೆಲಸ ಮಾಡತಕ್ಕಂಥ ಜನರನ್ನು ನೇಮಿಸಬೇಕೆಂದು ಈ ಸಮಯದಲ್ಲಿ ಹೇಳಲು ಬಯಸುತ್ತೇನೆ.

ಇನ್ನು ಕೃಷ್ಣಾ ಗೋದಾವರಿ ನದಿ ನೀರು ಹಂಚಿಕೆಯ ಬಗ್ಗೆ ಪ್ರಸ್ತಾಪ ಮಾಡಿರುವುದಕ್ಕಾಗಿ ರಾಜ್ಯಪಾಲರವರನ್ನು ಅಭಿನಂದಿಸುತ್ತೇನೆ. ಕಾರವಾರ ರೈಲು ಮಾರ್ಗ ವಿಚಾರವಾಗಿ ಹೇಳುವಾಗ್ಗೆ ಇನ್ನೂ ಕೆಲವು ರೈಲುಮಾರ್ಗ ಪ್ರಸ್ತಾಪ ಮಾಡುತ್ತಾರೆಂದು ನಿರೀಕ್ಷಿಸಲಾಗಿತ್ತು. ಕಾರವಾರ-ಹುಬ್ಬಳ್ಳಿ, ಗದಗ್-ರಾಯಚೂರು ರೈಲು ಮಾರ್ಗ ತೆಗೆದುಕೊಳ್ಳುವ ಬಗ್ಗೆ ಯಾವ ಸಲಹೆ ಇಲ್ಲ. ಈ ವಿಚಾರದಲ್ಲಿ ಈ ಶಾಸನ ಸಭೆಯಲ್ಲಿ ಒಂದು ನಿರ್ಣಯ ಮಂಜೂರು ಆಗಿದೆ. ಈ ಕೆಲಸ ಕೈಕೊಳ್ಳಲು ಕೇಂದ್ರ ಸರಕಾರದ ಮೇಲೆ ನಮ್ಮ ರಾಜ್ಯ ಸರಕಾರ ಒತ್ತಾಯ ಮಾಡಿದ್ದಾರೆಯೇ? ಈ ವಿಚಾರ ಪ್ರಸ್ತಾಪ ಮಾಡಿ ಸರಕಾರದ ಅಭಿಪ್ರಾಯ ಹೇಳಿದ್ದರೆ ಚೆನ್ನಾಗಿತ್ತು. ಇನ್ನೂ ಅನೇಕ ಮಾತು ಗಳನ್ನು ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ರಸ್ತೆ ಸಾರಿಗೆ ವಿಷಯ ಪ್ರಸ್ತಾಪ ಮಾಡಿದ್ದರೂ ಈ ಬಗ್ಗೆ ಸರಕಾರದ ನಿಶ್ಚಿತ ಧೋರಣೆ ಏನು ಎಂಬುದನ್ನು ಸ್ಪಷ್ಟವಾಗಿ ಹೇಳಿರುವು ದಿಲ್ಲ. ಈ ರೀತಿ ಇರುವುದರಿಂದ ಮೂಲ ಭೂತ ಧೋರಣೆಗೆ ಎಲ್ಲಿ ಕೊಡಲಿ ಪೆಟ್ಟು ಬೀಳುತ್ತದೆಯೋ ಎಂಬ ಭಾವನೆ ಬರುತ್ತದೆ. ಆದುದರಿಂದ ಸರಕಾರದ ನಿಶ್ಚಿತ ನಿಲುವು ಏನು ಎಂಬುದನ್ನು ಸ್ಪಷ್ಟ ಪಡಿಸಬೇಕು. ಬರೀ ಬಸ್ ರಾಷ್ಟ್ರೀಕರಣ ಮಾಡುವುದರಿಂದ ಸಮಾಜವಾದೀ ಸಮಾಜ ರಚನೆಯ ಕಾರ್ಯ ಪೂರ್ತಿಯಾಗುವುದಿಲ್ಲ. ಏಕೆಂದರೆ ಸಮಾಜದಲ್ಲಿ ಒಬ್ಬನಿಗೆ ತಿಂಗಳಿಗೆ 30 ರೂಪಾಯಿ ಸಂಪಾದನೆ ಇದ್ದು ಇನ್ನೊಬ್ಬನಿಗೆ 3000 ರೂ. ಸಂಪಾದನೆ ಇರುವವಾದರೆ ಯಾವ ರಾಷ್ಟ್ರೀಕರಣ ದಿಂದಲೂ ಧ್ಯೇಯ ಸಾಧನೆಯಾಗಲಾರದು. ಸಂಬಳದಲ್ಲಿಯ ಅಂತರ ಹೆಚ್ಚಿಗೆ ಇರಕೂಡದು. ಈ ಮೂಲಭೂತ ತತ್ವವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಇನ್ನು ಶಿಕ್ಷಣ. ಇದು ಸಹ ರಾಷ್ಟ್ರೀಕರಣವಾಗಬೇಕು. ಶ್ರೀಮಂತರ ಮೇಲೆ ಕರ ಹಾಕಿ ಹಣ ಪಡೆದು ಶಿಕ್ಷಣ ಸೌಲಭ್ಯ ಎಲ್ಲರಿಗೂ ದೊರೆಯುವ ಹಾಗೆ ಮಾಡಬೇಕಾದುದು ಅತ್ಯಗತ್ಯ. ಎಲ್ಲ ಮಟ್ಟದ ಶಿಕ್ಷಣ ಉಚಿತವಾಗಿ ಎಲ್ಲರಿಗೆ ದೊರೆಯುವಂತಾಗಬೇಕು.

ರಾಜ್ಯಪಾಲರವರ ಭಾಷಣದಲ್ಲಿ ಇನ್ನೂ ಕೆಲವು ವಿಷಯಗಳನ್ನು ಪ್ರಸ್ತಾಪಿಸಿ ಹೇಳಬೇಕಾಗಿತ್ತು. ಭ್ರಷ್ಟಾಚಾರದ ವಿಚಾರದಲ್ಲಿ ಸರಕಾರದವರು ಅನಿರ್ದಿಷ್ಟ ಧೋರಣೆಯನ್ನು ಬಿಟ್ಟುಕೊಡಬೇಕು. ಧೈರ್ಯದಿಂದ ಇದನ್ನು ಕಾರ್ಯಗತ ಮಾಡಲು ಪ್ರಯತ್ನ ಮಾಡಬೇಕಾದುದು ಅಗತ್ಯ.

ನವ ಮೈಸೂರು ರಾಜ್ಯ ರಚನೆಯಾಗಿ ಏಳು ವರ್ಷಗಳಾದವು. ರಾಜ್ಯದ ಹೆಸರು ಕರ್ನಾಟಕ ಎಂದು ಆಗಬೇಕಾಗಿದೆ. ರಾಜ್ಯದ ಹೆಸರು ಕರ್ನಾಟಕ ಎಂದು ಮಾಡುವ ಬಗ್ಗೆ ನಿರ್ಧಾರವಾಗಿ ಹೇಳಬೇ ಕಾಗಿತ್ತು. ಏಕೆಂದರೆ ನಮ್ಮ ರಾಜ್ಯಪಾಲರವರು ನಮ್ಮ "ಕರ್ನಾಟಕ ರತ್ನ ಸಿಂಹಾಸನಾಧೀಶ್ವರ ರಾಗಿದ್ದಾರೆ." ಅವರು ಏನು ಆಲೋಚನೆ ಮಾಡಿದ್ದಾರೆ ಎಂಬುದನ್ನು ಭಾಷಣದಲ್ಲಿ ಹೇಳಿದ್ದರೆ ಇನ್ನೂ ಹೆಚ್ಚು ಸಂತೋಷವಾಗುತ್ತಿತ್ತು.

ಇದಲ್ಲದೆ ಪಾನನಿರೋಧದ ಬಗ್ಗೆ ಸರಕಾರದ ಸ್ಪಷ್ಟ ಧೋರಣೆ ಏನು ಎಂಬುದನ್ನು ಹೇಳಬೇಕಾ ಗಿತ್ತು. ಈ ವಿಚಾರದಲ್ಲಿ ಸಂದೇಹ ಇರಕೂಡದು. ಒಂದು ಸಮಿತಿ ರಚನೆಯಾಗಿದೆ. ಆದರೂ ಸರಕಾರದ ನಿಶ್ಚಿತ ಧೋರಣೆಯನ್ನು ಹೇಳಬೇಕಾಗಿತ್ತು. ಸರಕಾರದ ಸ್ಪಷ್ಟವಾದ ನೀತಿ ಏನು ಎಂಬುದನ್ನು ಹೇಳಿದ್ದರೆ ಚೆನ್ನಾಗಿತ್ತು. ಭ್ರಷ್ಟಾಚಾರ ನಿರ್ಮೂಲನ ಬಗ್ಗೆ ತೀವ್ರ ಕ್ರಮ ಕೈಕೊಳ್ಳ ಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಂಡು ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸು ತ್ತೇನೆ.

MR. SPEAKER.—Before the Hon'ble Member Sri S. M. Krishna begins, I would like to refer to the matter of the adjournment motion because it is he who has given notice of it. I have already referred to one or two rulings. I have got more rulings exactly to the same effect which pertains to the House of Commons as also the Lok Sabha. They are almost identical, hundred per cent similar. I just wanted to inform him

(MR. SPEAKER)

about this before he begins his speech so that he may know the position exactly and make his speech, bearing that point in mind.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ (ತಿಪಟೂರು).—ಹೌಸ್ ಆಫ್ ಕಾಮನ್ಸ್ ರೂಲ್ಸ್ ಕೋಟ್ ಮಾಡುತ್ತೀರಿ. ಆದರೆ ಇನ್ನೂ ಬೇರೆ ಅನೇಕ ವಿಷಯಗಳಿವೆ, ಅವುಗಳನ್ನು ಏಕೆ ಹೇಳುವುದಿಲ್ಲ ?

Mr. SPEAKER.– Order, order.

† **Sri S. M. KRISHNA** (Maddur).—Sir, the keynote of the Address of the Governor seems to be that inertia and a sense of deep despair seem to be the order of the day.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾನ್ಯ ಸದಸ್ಯರಾದ ಶ್ರೀ ಕೃಷ್ಣ ಅವರು ಕನ್ನಡದಲ್ಲಿ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—It must be left to the discretion of the Hon'ble Member. Since has begun in English, I will not permit him to switch on to Kannada.

Sri S. M. KRISHNA.—This Government suffers from a lack of sence of direction. We have been repeatedly drawing the attention of the Government......

[MR. DEPUTY SPEAKER in the Chair].

Sri T. D. DEVENDRAPPA.—On a point of order, Sir, ಈ ಸಲ ಬಡ್ಜೆಟ್ ಅಧಿವೇಶನ ಪ್ರಾರಂಭ ಮಾಡುತ್ತಾ ನಮ್ಮ ರಾಜ್ಯಪಾಲರವರು ಕನ್ನಡದಲ್ಲಿ ಭಾಷಣ ಮಾಡಿದ್ದಾರೆ. ಅದೇ ರೀತಿ ಸದಸ್ಯರೂ ಕನ್ನಡದಲ್ಲಿ ಮಾತನಾಡತಕ್ಕದ್ದು ಸೂಕ್ತ ಎಂದು ನಾನು ಹೇಳುತ್ತೇನೆ.

Sri V. S. PATIL (Belgaum I).—On a point of order, Sir. The Hon'ble Member has said that since the Governor was pleased to address this House in Kannada, the members also must speak in Kannada, Is it in order to compel any member to speak in a particular language and to deprive him of his legitimate right to speak in any language which he likes ?

Mr. DEPUTY SPEAKER.—There is no point of order.

Sri V. S. PATIL.—One more thing I would like to bring to the notice of the Chair. We had a discussion with the Speaker and we have divided the time allotted party-wise, but since yesterday only one member from my party has been allowed to participale, and that too only for 15 minutes. This is rather unjust. Today also when the Congress member finished, the chance should have been given to this group rather than to the P. S. P. I am not against the P. S. P., but our legitimate rights must be safeguarded. That is why I should like to bring it to the notice of the chair, that the Members from this side must be given their opportunity.

Mr. DEPUTY SPEAKER.—Sri, Patil will be given an opportunity.

Sri S. M. KRISHNA.—Much has been said in the last few months about the Sharavathi scandal. It does not become of an honourable Government to committee to this House in solemn terms that a white paper shall be issued. In the first instance, it was to be issued within 8 or 10 days. Then it was amended that before the end of the last session, the White Paper would find the light of the day. Sir, it is more than

2 months now. Still, the white paper by no means seems to be in the offing. This necessarily strengthens our own suspicions, our own doubts about the bona fides of the people who are preparing the white paper. We have made responsible, weighty and serious allegations against this Government and it is not fair that this should be put off indefinitely. Even on the very day when the Governor made his Address to the Joint Session of the Legislature I expected the Government also to come out with a white paper. From the way things have been going on in this State, we have every reason to believe that after all it is not going to be a white paper but it is going to be the blackest paper that the Government is going to ever come out with. The Leader of the Opposition has mentioned this particular point and I would not like to dilate on this any more, but this I would like to say that we will still wait for the white paper before deciding our future course of action.

I would like to concentrate mainly on the Department of Education in our State. By now, it has be become proverbial that the Education Ministry in our State is shrouded in confusion and controversies. We have not forgotten the student's agitation that took place a few days back in the State. We have also not forgotten the stout defence put up by the Education Minister. It is still vivid in our memory. His voice is still ringing in our ears. At one point some time last year, the Education Minister asserted that when it came to a question of convictions, when it came to a question of principles, he would stand like a rock and he would not budge an inch. Sir, I would like to recall it to the memory of the Education Minister; unfortunately, his memory seems to be too short at his convenience. This Education Minister by temperament by training in all respects and humility, may I submit Sir, has failed to give the correct lead to our educational set-up. It pains me very much that I have to speak in such specific strong terms when it comes to the Education Minister. I like him as a person. But, Sir, my likes about a person should be quite different from my likes of the same person in the shape of an Education Minister. Sir, the student agitation has a few lessons to every one of us. The organised student community was able to bring down the Government to its knees. I do not think that any one in the Treasury Benches today can say with any amount of honesty and integrity that they did not come to their knees. The Education Minister was so vociferous in denouncing the student's demands; there were frantic press statements issued in the mornings, in the afternoons and in the evenings; and sometimes at midnight, the Education Minister woke up the Press Correspondents to issue a press statement. We were not unaware of it; the antics of the Education Minister has to be seriously questioned to lay and decisively questioned today. The Education Minister has been responsible for the disintegration of the somewhat integration that was developing in the Mysore State. I said before and I recpeat it with all the force that I can command that he has forfeited the confidence of the people of the Mysore State. The damage that he has done to the Mysore State in general and to old Mysore in particular and to the posterity also cannot be weighed

(SRI S. M. KRISHNA)

in words. It can only be felt and I hope the Education Minister will pause for a while and think about the two years that he has been at the helm of affairs. Right since the day he took up the Education portfolio, controversies, differences dissensions and indecision—these have been the characteristics of the Education Minister and I wonder how the Congress Party with a strength of 138 members excluding the Education Minister, could own him; how they could tolerate him and how they could put up with him. I make this challenge to the Members of the Congress Party. Has he brought honour to their Party ? Has he added lustre to their Government? He hasn't. On the other hand, he has done everything to damage the prestige of this Government and this Party. Sir, from the way the educational set up is being worked in the Mysore State, I am pained to say, there is no vigorous action, there is no fresh thinking and there is no dynamic endeavour. We expect that the educational set up of a State should be to inspire the younger generation. May I in all humility ask; will the younger generation be ever inspired by the present lead, by the present set up? I am afraid, not. The Education Minister, simply because he becomes the head of the portfolio in the Ministry, becomes an expert overnight. He does not get the right to experiment with our younger generation. I hate to see our youngsters becoming guinea pigs of the present day styled educational experts. Day in and day out every one of us has been talking in terms of reforms in the Educational set up; day in and day out every one of us have been trying to bring in some improvement in the educational standards. In the ultimate analysis it comes down to this, that three has not been any educational improvement, there has not been improvement in the standards and there has not been any advance in the sphere of education. But on the other hand, it has resulted in serious damages being caused to the present educational set up.

I for one believe that the present set up ought to be given a complete and full trial before it is meddled with. Some years back, we thought that the two-year intermediate course was not enough and so we introduced the pre-university course. And, today again, we want to experiment on it and we would like to go back. What is it all about? Is everybody aware of what he is talking about? Hence, I call upon a halt to this indiscreet and indiscriminate talk and action about educational reforms. Even this morning, I read a statement of the Hon'ble Minister for Education about a perspective plan for education, which he made while speaking in the Upper House of the Legislature. I for one just cannot think of it, of any perspective plan being sincerely implemented by the present set-up.

10-00 A.M.

We have two universities in the Mysore State, the Karnataka University and the Mysore University. Representing the old Mysore area and speaking on behalf of the Mysore University, I have reason to

believe that, consciously and unconsciously, directly or indirectly, the Education Minister is out to undermine the prestige of the Mysore University. I am making this accusation to his very face. His actions in the past few months and his pronouncements in the past few months have not left any hopes in us. In the matter of allocation of funds, the Education Minister shows a favourite son treatment to the Karnataka University and a step-motherly treatment to the Mysore University. When it is a question of appointment or when it is a question of .....

Sri S. R. KANTHI (Minister for Education).—May I intervene to say that so far as the allocation of funds between the two universities is concerned, a conference was held, and the representatives of both the universities had been invited and to attend the same. They have suggested a certain pattern of help that they want and that is being implemented This is an agreed solution between the Education Ministry, the Finance D partment and the two universities.

Sri G V. GOWDA (Palya).—Would the Government provide whatever the universities want ?

Sri S. R. KANTHI. I said that it has an agreed solution. If the Karnataka University or the Mysore University want more funds, of course, Government will consider it.

Sri S. M. KRISHNA.—It is natural for the Education Minister to have a soft corner for the Karnataka university. I do not blame him for that. But he ought to know his limitations, beyond which he should not go.

Sri S. R. KANTHI.—It is not correct to say that I have not been fair.

Sri S. M. KRISHNA.—When it comes to the Mysore University, we say that there is disorganisation, that the University administration has go e to the dogs and so naturally we will have to tune up the whole thing. Very recently, we got a very distinguished educationalist to preside over the destinies of the Mysore University. Unfortunately, he died. Now we have an *ad hoc* arrangement, the Collegiate Director being made the Vice Chancellor. Now we are fishing to find a Vice-Chancellor. I wonder why there has been such delay.

Sri S. R. KANTHI.—He has come.........

Sri S. M. KRISHNA.—Are there no Mysoreans who can give a correct lead to the Mysore University ? If the Karnataka University can find a Pavate, the Mysore University can find a better one than that. Why should you go to Delhi or Uttar Pradesh ? A person who is shunted out of the Central Cabinet under the Kamraj Plan—you want to bring that person and instal him as the Vice-Chancellor of the Mysore University.

Sri S. R. KANTHI.—He is the best man.

Sri S. M. KRISHNA.—Yes. He is the best man. Time will prove and we will know.

Mr. DEPUTY SPEAKER.—Let him not bring in any controversy, by naming persons.

Sri S. M. KRISHNA.—I am dealing with the Education Ministry It is not a controversy. Besides, I cannot help it. Now, do our universities afford places for all those disgruntled and disgruntled congressmen? Is it going to be the shelter for all those political refugees? I do not think that this ought to be the state of affairs.

Sri S. R. KANTHI.—He is an educationalist.

Sri S. M. KRISHNA.—Yes. In fact, he has been the cause for all the damage that has been caused in our educational set up. Just, as soon as the present Central Education Minister took charge, he cancelled all the fifty committees set up by his predecessor in office. I, as a proud Mysorean, protest, register my emphatic protest against this attitude of the Government of Mysore in trying to bring and instal an outsider as Vice-Chancellor of the Mysore University.

With reference to the students' agitation, I have one point to make. The Government have appointed a committee to go into the fee structure of the two universities. The Committee consists of the Vice-Chancellors of the Karnataka University and the Mysore University and Dr. Lakshmanaswamy Mudaliar. Now, old Mysore is not represented there also. The entire students' agitation started in the old Mysore area. Privately the Education Minister has expressed his satisfaction at the outcome of the students' agitation, because it ended in getting some more benefits to the North Karnatak area people and I am happy that the Education Minister privately expressed his great happiness and satisfaction at the thirty-day strike and, he can own that.

Mr. DEPUTY SPEAKER.—Private matters should not be brought in.

Sri S. M. KRISHNA.—Now, a committee has been appointed. Even now, I call upon the Government to place an old Mysorean also in the committee. I would suggest the leader of the Opposition to that Committee so that it could take an objective view of the entire situation and come to certain responsible and sensible conclusion. Much can be said about the Education Ministry and I would reserve the rest of my comments on the Education Ministry when I will again get an opportunity.

I had tabled an adjournment motion about what happened in Raichur District. It is scandalous that such a thing should happen in our State. I wonder whether there was any law and order.

Sri R. M. PATIL (Minister for Home).—Is the Hon'ble Leader of the Opposition an expert in Education? If so, may we know when he became an educational expert?

Sri S. SIVAPPA (Sravanabelagola).—I am a better educationist than any of the Ministers.

Sri S. M. KRISHNA.—I thought the hon'ble Home Minister was intervening to make a statement about the Raichur incident. I expect him to maintain the law and order situation in Raichur District and in Mandya District rather than traversing on education. His colleague thinks that he can take care of that

I am submitting that many of us are deeply perturbed and disturbed to a very great extent at the fact that law and order situation in some of the districts seems to be deteriorating. I think the time has come

for the Home Minister to assert and put down such antisocial elements. I wonder how the police were not able to prevent the occurrence of such an uncivilised and ghastly activity as that. Even now I have not completely lost faith in the police administration of the State. I still have some faith in that administration and I hope the Government will take a very serious note and see that such occurrences do not happen elsewhere. I would have been very happy if the Home Minister had rushed to the spot. If he had done that he would have got first hand information as to what happened. He did not even make a statement about this incident. So, the law and order situation not only in Raichur District but also elsewhere seems to be going out of control. My own information is that proceedings under section 107 have been on the increase in the past few months. I wonder what is the reason for situation like this and I call for a judicial enquiry into what has happened in Raichur District and failure of the police to prevent the occurrence of such an incident.

†ಶ್ರೀ ಜಿ. ವಿ. ಗೌಡ (ಪಾಳ್ಯ).—ರಾಜ್ಯಪಾಲರ ಭಾಷಣವು ಖಚಿತವಾದ ಧ್ಯೇಯ, ಧೋರಣೆ ನೀತಿ ನಿಯಮಗಳನ್ನು ಸ್ಪಷ್ಟಪಡಿಸುತ್ತದೆಂದು ದೇಶದ ಜನರು ನಿರೀಕ್ಷಿಸುತ್ತಿದ್ದರು. ಆದರೆ ಅದೇನೂ ಕಾಣಲಿಲ್ಲ. ಸಿದ್ದಯ್ಯನವರೇನೋ ಇದು ಆದರ್ಶ ಭಾಷಣವೆಂದು ತಮ್ಮ ಅಭಿಪ್ರಾಯ ವನ್ನು ಸೂಚಿಸಿದ್ದಾರೆ. ಬಹುಶಃ ಅವರು ಉಪಯೋಗಿಸಿದ ಭಾಷೆ ಆದರ್ಶವಾಗಿರ ಬಹುದು. ಇದನ್ನು ಎಲ್ಲರೂ ವಿಮರ್ಶೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಅಭಿಪ್ರಾಯ ದಲ್ಲಿ ಇದು ನೀರಸವಾದ ನಿಸ್ಸಾರವಾದ ಒಂದು ದೊಡ್ಡದಾದ ವರದಿಯಂತಿದೆ. ಇಲ್ಲದೆ ಸುಮಾರು ಎರಡು ವರ್ಷಗಳಿಂದ ಸರ್ಕಾರದ ಕಡೆಯಿಂದ ಏನೊಂದು ವಿಚಾರಗಳು ಪ್ರಸ್ತಾಪ ಮಾಡಲ್ಪಟ್ಟಿ ದ್ದುವೋ ಅವೇ ಮತ್ತೆ ಪ್ರಸ್ತಾಪಿಸಲ್ಪಟ್ಟಿವೆ. ಮತ್ತೆ ಕೆಲವು ವಿಚಾರಗಳು ಸತ್ಯಾಂಶಕ್ಕೆ ದೂರ ವಾಗಿವೆಯೆಂದರೆ ಅತಿಶಯೋಕ್ತಿಯಾಗಲಾರದು.

ಮೊಟ್ಟಮೊದಲನೆಯದಾಗಿ ಯೋಜನಾ ಕಾರ್ಯಕ್ರಮಗಳನ್ನು ರಾಜ್ಯಪಾಲರು ಪ್ರಸ್ತಾಪಿ ಸಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಗೆ ಎಷ್ಟು ಖರ್ಚಾಗಿದೆಯೆಂಬುದನ್ನು ತಿಳಿಸಿ ದ್ದಾರೆ. ಉಳಿದಿರುವ ಎರಡು ವರ್ಷಗಳಲ್ಲಿ ಶೇಕಡ 56ರಷ್ಟು ಖರ್ಚಾಗಬೇಕಾಗಿದೆ. 1.0 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ಅವಧಿಯಲ್ಲಿ ಅದಕ್ಕೇನು ಪ್ರತಿಫಲ ದೊರೆತಿದೆ ಎಂಬ ವಿವರ ತಿಳಿ ಸಿರುವುದಿಲ್ಲ. ಇನ್ನೂ ಸುಮಾರು 140 ಕೋಟಿ ರೂಪಾಯಿಗಳನ್ನು ಎರಡು ವರ್ಷಗಳಲ್ಲಿ ಯಾವ ರೀತಿ ಖರ್ಚು ಮಾಡಲು ಸಾಧ್ಯ ಅಥವಾ ಖರ್ಚು ಮಾಡಿದರೂ ಅದಕ್ಕನುಗುಣವಾಗಿ ಪ್ರತಿಫಲ ಪಡೆ ಯಲು ಸಾಧ್ಯ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕಾಗಿದೆ. 1964–65ನೆಯ ಸಾಲಿನಲ್ಲಿ ಬಹುಶಃ 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು, ಕೊನೆಯ ವರ್ಷ 80 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. ಹೀಗೆ ಖರ್ಚು ಮಾಡಬಹುದು. ಆದರೆ ಅದಕ್ಕನುಗುಣ ವಾಗಿ ಫಿಜಿಕಲ್ ಟಾರ್ಜೆಟ್ ಸಾಧಿಸಲು ಸಾಧ್ಯವಿಲ್ಲವೆಂಬುದನ್ನು ಮರೆಯಬಾರದು. ಮೊನ್ನೆ ಮದ್ರಾಸ್ ಅಸೆಂಬ್ಲಿಯಲ್ಲಿ ಮುಖ್ಯಮಂತ್ರಿಗಳು ಗೊತ್ತು ಮಾಡಿದ್ದ 291 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಬಹಳ ಭಾಗ ಖರ್ಚಾಗಿದೆ, ಸುಮಾರು 325 ಕೋಟಿಯಷ್ಟು ಪರಮಾವಧಿ ಮೊತ್ತ ಬೇಕಾಗುತ್ತದ, ಆಗಬೇಕಾದ ಕೆಲಸ ಬಹಳವಿದೆ ಎಂದು ಹೇಳಿದ್ದಾರೆ. ಅದೇ ನಾವು 3 ವರ್ಷಗಳಲ್ಲಿ 110 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆ. ಇದೇಕೆ ಹೀಗೆ ಮಾಡಿದ್ದಾ ರೆಂಬುದು ನನಗೆ ಅರ್ಥವಾಗುವುದಿಲ್ಲ. ಕೇಂದ್ರ ಸರ್ಕಾರದಿಂದ ಪಡೆಯಬೇಕಾಗಿದ್ದಷ್ಟು ನೆರವು ಸಿಕ್ಕಿಲ್ಲ; ಅದು ಸರ್ಕಾರಕ್ಕೆ ಗೊತ್ತಿದೆ. ಎರಡನೆಯ ಯೋಜನೆಯಲ್ಲಿ ಎಷ್ಟು ನೆರವು ಸಿಕ್ಕಿದೆಯೋ ಅದಕ್ಕಿಂತ ಕಡಿಮೆ ಸಿಕ್ಕಿದೆಯೆಂದರೆ ಎಷ್ಟು ಸಾಮರ್ಥ್ಯದಿಂದ ನೆರವು ಪಡೆದಿದ್ದಾರೆಂಬುದು ಅರ್ಥ ವಾಗುತ್ತದೆ. ಆದುದರಿಂದ ಯೋಜನೆಯ ಕಾರ್ಯಕ್ರಮವನ್ನು ಪರಿಶೀಲಿಸಿ ಸ್ವಲ್ಪ ವಿಮರ್ಶೆ ಮಾಡುವುದಾದರೆ ಎಷ್ಟು ತೃಪ್ತಿಕರವಾಗಿ, ಯಶಸ್ವಿಯಾಗಿ ಆಗಬೇಕಾಗಿತ್ತೋ ಅಷ್ಟು ಮಟ್ಟಿಗೆ ಆಗಿಲ್ಲ, ಆಗುವುದಕ್ಕೆ ಸಾಧ್ಯವಿಲ್ಲ ಎಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ಹಣವನ್ನು ಹೆಚ್ಚಾಗಿ ನೀರಾವರಿ ವ್ಯವಸಾಯ ಮತ್ತು ವಿದ್ಯುಚ್ಛಕ್ತಿ ಸರಬರಾಜಿಗೆ ಖರ್ಚು ಮಾಡುತ್ತಿದೇವೆಂದು ಹೇಳಿ ದ್ದಾರೆ. ಸುಮಾರು 127 ಗ್ರಾಮಗಳಿಗೆ ಹೊಸದಾಗಿ ವಿದ್ಯುಚ್ಛಕ್ತಿಯನ್ನು ಪೂರೈಸಲಾಯಿತು ಎಂದು ಸೂಚಿಸಿದ್ದಾರೆ; ಬಹುಶಃ ಮೂರನೆಯ ಯೋಜನೆಯ ಅವಧಿಯೊಳಗಾಗಿ ಸುಮಾರು 300

(ಶ್ರೀ ಜಿ ವಿ. ಗೌಡ)

ಹಳ್ಳಿಗಳಿಗೆ ಪೂರೈಕೆ ಮಾಡಬಹುದು. ಆದರೆ ಮದ್ರಾಸು, ಮಹಾರಾಷ್ಟ್ರ ಅಥವಾ ಆಂಧ್ರ ದೇಶಗಳನ್ನು ನೋಡಿದರೆ ಮದ್ರಾಸಿನಲ್ಲಿ 3ನೇ ಯೋಜನೆಯಲ್ಲಿ ಎಲ್ಲಾ ಹಳ್ಳಿಗಳಿಗೂ ಬಹುಶಃ ವಿದ್ಯುಚ್ಛಕ್ತಿ ಪೂರೈಕೆಯಾಗಬಹುದೆಂಬ ಸೂಚನೆಯಿದೆ. ನಾವು ದಕ್ಷಿಣವಲಯಕ್ಕೆ ಸೇರುವಂತೆ ಒಂದು ತೀರ್ಮಾನ ಮಾಡಿಕೊಂಡಿರುವುದು ಶೋಚನೀಯ ವಿಚಾರವಾಗಿದೆ. ಈ ದಿವಸ ಪತ್ರಿಕಾ ವರದಿಯ ಪ್ರಕಾರ ದಕ್ಷಿಣ ವಲಯಕ್ಕೆ ಒಂದು ಪವರ್ ಬೋರ್ಡ್ ರಚಿಸಲು ಕೇಂದ್ರ ಸರ್ಕಾರ ಮಂಜೂರಾತಿಯನ್ನು ಕೊಟ್ಟಿದೆಯೆಂದು ತಿಳಿದು ಬರುತ್ತದೆ. ಇದರಿಂದ ಎಷ್ಟು ಮಟ್ಟಿಗೆ ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಬಳಕೆಯನ್ನು ಹೆಚ್ಚಿಸುವುದಕ್ಕೆ ಅವಕಾಶವಾಗಬಹುದೆಂಬುದನ್ನು ಸರ್ಕಾರ ವಿಚಾರ ಮಾಡಬೇಕಾಗಿದೆ, ಇದರಿಂದ ಬಹಳ ಅನ್ಯಾಯವಾಗುತ್ತದೆ. ಈ ದಿವಸ ಶರಾವತಿ ಯೋಜನೆ ಪೂರ್ಣವಾದರೆ 9 ಲಕ್ಷ ಕಿಲೋವ್ಯಾಟಿನಷ್ಟು ಪವರ್ ಉತ್ಪತ್ತಿಯಾಗಬಹುದು. ಇದಲ್ಲದೆ ಬಾರಾ ಪೊಳೆ ಯೋಜನೆ, ಕಾಳೀ ನದಿ ಯೋಜನೆ ಮುಂತಾದುವು ಬೇರೆ ಇವೆ. ಅವುಗಳ ಕೆಲಸ ಆಗಬೇಕಾಗಿದೆ. ಅವೆಲ್ಲಾ ಕಾರ್ಯಗತವಾದ ಮೇಲೆ ಉತ್ಪತ್ತಿಯಾಗುವ ಪವರನ್ನು ಬಳಸಲು ಸಾಧ್ಯವಿಲ್ಲದ ಪರಿಸ್ಥಿತಿ ಯೊದಗಿತಲ್ಲಾ ಎಂದು ವಿಷಾದ ಪಡಬೇಕಾಗಿದೆ.

ವ್ಯವಸಾಯದ ಉತ್ಪತ್ತಿಯ ವಿಚಾರವನ್ನು ಶ್ರೀಮಾನ್ ಶಿವಪ್ಪನವರು ಹೇಳಿರುವುದರಿಂದ ಅದನ್ನು ಮತ್ತೆ ಹೇಳಬೇಕಾದ ಪ್ರಸಂಗವಿಲ್ಲ. 32 ನೀರಾವರಿ ಯೋಜನೆಗಳಿವೆ. ಅವುಗಳ ಪೈಕಿ 25 ಯೋಜನೆಗಳು ಒಂದನೆಯ ಮತ್ತು ಎರಡನೆಯ ಯೋಜನೆಗಳಿಂದ ಮುಂದುವರಿಸಲ್ಪಟ್ಟಿವೆ. ಅವುಗಳಿಂದ ಸಾಕಷ್ಟು ಪ್ರತಿಫಲ ದೊರೆತಿಲ್ಲ. 1974ನೆಯ ಇಸವಿಯೊಳಗೆ ಕಾವೇರಿ ನದಿಯ ನೀರಿನಲ್ಲಿ ನಮಗೆ ಸಲ್ಲಬೇಕಾದ 75 ಟಿ. ಎಂ. ಸಿ ಎಫ್. ಟಿ. ಯನ್ನು ಉಪಯೋಗಿಸಿಕೊಳ್ಳಬೇಕಾಗಿದೆ, ಹಾಗೆ ಆ ಅವಧಿಯಲ್ಲಿ ಉಪಯೋಗ ಮಾಡಿಕೊಳ್ಳದಿದ್ದರೆ ಆ ಸಂಬಂಧದಲ್ಲಿ ನಮಗಿರುವ ಹಕ್ಕು ಹೋಗಲು ಅವಕಾಶವಿದೆಯೆಂದು ವೀರೇಂದ್ರ ಪಾಟೀಲ್‌ರವರು ಹೇಳಿದ್ದಾರೆ. ಅದನ್ನು ಉಪಯೋಗಿಸಿಕೊಳ್ಳಲು ಯಾವ ಯೋಜನೆ ಕೈಕೊಳ್ಳಬೇಕು, ಅದಕ್ಕೆ ಹಣ ಹೇಗೆ ಒದಗಿಸಿಕೊಳ್ಳಬೇಕು ಎಂದು ವಿಚಾರ ಮಾಡಿ ಸಮಗ್ರವಾದ ಯೋಜನೆ ಮಾಡಿಲ್ಲವೆಂದು ಮಂತ್ರಿಗಳು ಹೇಳಿದ್ದಾರೆ. ನಾನ್ ಷೆಡ್ಯೂಲ್ಡ್ ರಿವರ್ಸ್ ನೀರನ್ನು ಯಾವಾಗ ಬೇಕಾದರೂ ಉಪಯೋಗಿಸಿಕೊಳ್ಳಬಹುದು, ಷೆಡ್ಯೂಲ್ಡ್ ರಿವರ್ಸ್ ನೀರನ್ನು ಬೇಗ ಉಪಯೋಗಿಸಬೇಕು ಎಂದು ಸಹ ಹೇಳಿದ್ದಾರೆ; ಅದು ನಿಜ. ಆದರೆ ಈ ದಿವಸ ಹಾರಂಗಿ ಯೋಜನೆ ಏನಿದೆ ಅದಕ್ಕೆ ಮಂಜೂರಾತಿಯನ್ನು ಸರ್ಕಾರ ನೀಡಿದೆಯೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅದು ನಾನ್ ಷೆಡ್ಯೂಲ್ಡ್ ರಿವರ್‌ಗೆ ಸಂಬಂಧಪಟ್ಟಿದೆ. ಅದಕ್ಕೆ ತೀವ್ರವಾಗಿ ಮಂಜೂರಾತಿ ಸಿಕ್ಕಿದೆಯೆಂದರೆ ಮಂತ್ರಿಗಳ ಮಾತಿಗೆ ಬೆಲೆ ಕೊಡಲು ಹೇಗೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಇವೊತ್ತಿನ ದಿನ ನಮ್ಮಲ್ಲಿರುವ ಕಾವೇರಿ ನದಿ ಯೋಜನೆ, ಯಗಚಿ ಯೋಜನೆ, ಹೇಮಾವತಿ ಯೋಜನೆ, ಕಬಿನಿ ಯೋಜನೆ ಹೀಗೆ ಹತ್ತಾರು ಯೋಜನೆಗಳನ್ನು ಮಾಡಬೇಕೆಂದಿದೆ. ಇವೊತ್ತು ಮೈಸೂರಿನಲ್ಲಿ ಯಾವ ಒಂದು ಪ್ರಾಜೆಕ್ಟು ಆಗಿಲ್ಲ. ನಮ್ಮಲ್ಲಿ ಆಗಬೇಕಾಗಿರುವ ಕಬಿನಿ ಪ್ರಾಜೆಕ್ಟು ಹದಿನೈದು ವರ್ಷಗಳಿಂದಲೂ ಆಗುತ್ತಲೇ ಇದೆ. ಇದು ಆಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಕೂಡ ಬರುತ್ತಿದೆ. ಇದರಿಂದ ಎಷ್ಟು ಪ್ರಯೋಜನ ಪಡೆಯಬೇಕಾಗಿತ್ತೋ ಅಷ್ಟು ಪಡೆಯಲಾಗಲಿಲ್ಲ. ಕಾವೇರಿ ನದಿ ಯೋಜನೆಯನ್ನು ಮಾಡಿ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಲು ಸಾಧ್ಯವೋ ಅದನ್ನು ಅಷ್ಟು ಬೇಗ ಉಪಯೋಗಿಸಿಕೊಳ್ಳುವುದು ಅಗತ್ಯ. ಆದರೆ ಇದಕ್ಕೆ ಮೂರನೇ ಯೋಜನೆಯಲ್ಲಿ ಹಣವಿಲ್ಲ, ಅದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವುದಕ್ಕಿಂತ ಕೇಂದ್ರದ ಮೇಲೆ ಒತ್ತಾಯ ಮಾಡಿಯಾದರೂ ಇದನ್ನು ಮಾಡುವುದರ ಕಡೆಗೆ ಪ್ಲಾನಿಂಗ್ ಕಮಿಷನ್ನಿನವರ ಗಮನವನ್ನು ಸೆಳೆಯಬೇಕು. ಅಲ್ಲದೆ ಈಚೆಗೆ ಪ್ಲಾನಿಂಗ್ ಕಮಿಷನ್ನಿನವರೂ ಅದಷ್ಟು ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳನ್ನು ಮಾಡುವುದಕ್ಕಿಂತ ಮಧ್ಯವರ್ತಿ ಪ್ರಮಾಣದ ಯೋಜನೆಗಳನ್ನು ಮೊದಲು ಮಾಡಿಕೊಂಡು ಅದರಿಂದ ತಕ್ಕ ಪ್ರತಿಫಲ ಬೇಗನೆ ಪಡೆಯಬಹುದು ಎಂದೂ ಹೇಳಿದ್ದಾರೆ. ಅದರಂತೆ ಈ ಕಾವೇರಿ ನದಿ ಯೋಜನೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ವ್ಯವಸಾಯದ ಉತ್ಪನ್ನವನ್ನು ಜಾಸ್ತಿ ಮಾಡಲು ಸಾಧ್ಯವಿದೆ. ನಾವು ಸ್ವಲ್ಪ ವಿಚಾರಮಾಡುವುದಾದರೆ, ಪ್ರತಿ ವರ್ಷವೂ ಉತ್ಪನ್ನವು ಕಡಮೆಯಾಗುತ್ತಿದೆಯೇ ವಿನಾ ಹೆಚ್ಚಾಗುವುದಕ್ಕೆ ಸಾಧ್ಯವಿಲ್ಲ, ಎನ್ನುವುದು ಗೊತ್ತಾಗುತ್ತದೆ. ವ್ಯವಸಾಯದ ಉತ್ಪನ್ನ, ವಿದ್ಯುಚ್ಛಕ್ತಿ ಉತ್ಪನ್ನ ಸಾಕಷ್ಟು ಪ್ರಮಾಣದಲ್ಲಿ ಆಗಿದೆಯೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ ಇದರಲ್ಲಿ ಯಾವ ಅಂಕಿ ಸಂಖ್ಯೆಗಳನ್ನೂ ಹೇಳಲಿಲ್ಲ.

ಇನ್ನು ಅರಣ್ಯವನ್ನು ಎಲ್ಲೆಲ್ಲಿ ಬೆಳೆಸಬೇಕು ಎನ್ನುವ ವಿಚಾರದಲ್ಲಿ ಅರಣ್ಯ ಪ್ರದೇಶವನ್ನು ಸಾಗುವಳಿಗೆ ಎಲ್ಲೆಲ್ಲಿ ಕೊಡಬಹುದು ಎನ್ನುವ ಪ್ರಸ್ತಾಪ ಈ ಭಾಷಣದಲ್ಲಿದೆ. ಇದನ್ನು ಸ್ವಾಗತ ಮಾಡುವುದು ಅವಶ್ಯಕ. ಆದಷ್ಟು ತೀವ್ರವಾಗಿ ಎಲ್ಲೆಲ್ಲಿ ಕಾಡುಗಳನ್ನು ಬೆಳೆಸಲಿಕ್ಕೆ ಸಾಧ್ಯವೋ ಅಂತಹ

ಕೆಲಸಗಳನ್ನು ಬೇಗನೆ ತೆಗೆದುಕೊಳ್ಳಬೇಕು, ಮತ್ತು ಎಲ್ಲ ಹೆಚ್ಚಿನ ಕಾಡು ಪ್ರದೇಶಗಳು ಇದ್ದು ಸಾಗುವಳಿಗೆ ಅನುಕೂಲವಾಗಿವೆಯೋ ಅಂತಹ ಪ್ರದೇಶಗಳನ್ನು ಸಾಗುವಳಿಗಾಗಿ ಬಿಡಿಸಿಕೊಡಬೇಕು. ಈ ವ್ಯವಸ್ಥೆಯನ್ನು ಸರಕಾರ ಆದಷ್ಟು ಬೇಗ ಮಾಡಲು ಒಂದು ಸಮಿತಿ ರಚನೆಮಾಡುತ್ತೇವೆ ವರದಿ ಬರುತ್ತದೆ, ಆ ನಂತರ ಪರಿಶೀಲನೆ ಮಾಡುತ್ತೇವೆ ಎನ್ನುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ಈ ಬಗ್ಗೆ ಆದಷ್ಟು ಬೇಗ ಸರಕಾರ ತೀರ್ಮಾನ ತೆಗೆದುಕೊಂಡು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಸಕ್ಕರೆ ಕಾರ್ಖಾನೆಗಳ ಬಗ್ಗೆ ಒಂದೆರಡು ಮಾತುಗಳನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಮೈಸೂರಿನಲ್ಲಿರುವ ಸಕ್ಕರೆ ಕಾರ್ಖಾನೆಗಳ ಈವರೆಗಿನ ಪ್ರಗತಿಯನ್ನು ನೋಡಿದರೆ ವಿಷಾದವಾಗುತ್ತದೆ. ಮಹಾರಾಷ್ಟ್ರದವರು ನಲವತ್ತು ಸಕ್ಕರೆ ಕಾರ್ಖಾನೆಗಳು ಬೇಕೆಂದು ಕೇಂದ್ರದವರನ್ನು ಕೇಳಿದರೆ ಹದಿನೈದು ಕಾರ್ಖಾನೆಗಳಿಗಾದರೂ ಅವರಿಗೆ ಲೈಸನ್ಸು ಸಿಕ್ಕುತ್ತದೆ. ಇವೊತ್ತಿನ ದಿವಸ ಮೂರು ಸಕ್ಕರೆ ಕಾರ್ಖಾನೆಯ ವಿಸ್ತರಣೆಗಾಗಿ ಮಂಜೂರಾತಿ ಬಂದಿದೆ ಎಂದೂ, ಎಂಟು ಸಕ್ಕರೆ ಕಾರ್ಖಾನೆ ತೆರೆಯಲು ಶಿಫಾರಸು ಮಾಡಿದ್ದಕ್ಕೆ ಮೂರಕ್ಕೆ ಮಂಜೂರಾತಿ ಬರುತ್ತದೆ ಎಂದೂ ರಾಜ್ಯಪಾಲರಿಂದ ಹೇಳಿಸಿದ್ದೀರಿ. ಆದರೆ ಯಾವ ಪ್ರದೇಶದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಲಿಕ್ಕೆ ಸಾಧ್ಯವಿದೆಯೋ ಅಲ್ಲಿಗೆ ಲೈಸನ್ಸನ್ನು ದೊರಕಿಸಿ ಕೊಡುವ ವಿಚಾರ ಯಾವುದನ್ನೂ ಮಾಡಿಲ್ಲ. ಪ್ರತಿ ವರ್ಷವೂ ಇದನ್ನು ಮಾಡುತ್ತೇವೆ, ಅದನ್ನು ಮಾಡುತ್ತೇವೆ ಎಂದು ಹೇಳುತ್ತಾರೆಯೇ ವಿನಾ ಹೇಳಿದ್ದನ್ನು ಕಾರ್ಯರೂಪಕ್ಕೆ ತಂದಿದ್ದರೆ ಜನಕ್ಕೆ ಹೆಚ್ಚಿನ ಅನುಕೂಲವಾಗುತ್ತಿತ್ತು ಮತ್ತು ತಾವು ಹೇಳುವ ವಿಷಯಗಳಿಗೂ ಸಾಕಷ್ಟು ಪುಷ್ಟೀಕರಣ ಸಿಗುತ್ತಿತ್ತು ಎಂದು ನಾನಾದರೂ ತಿಳಿಸಲಿಚ್ಛಿಸುತ್ತೇನೆ.

ಇನ್ನು ಹಿಂದುಳಿದಿರತಕ್ಕ ಪ್ರದೇಶಗಳನ್ನು ಅಭಿವೃದ್ಧಿಗೆ ತರಬೇಕು, ಅನುಕೂಲ ಮಾಡಿಕೊಡಬೇಕು ಎನ್ನುವುದು ಎಲ್ಲರೂ ಬಯಸತಕ್ಕ ವಿಚಾರ. ಯೋಜನೆಯಲ್ಲಿ ಮುಖ್ಯವಾಗಿ imbalance ಅನ್ನು ಆದಷ್ಟು ಕಡಮೆಮಾಡಬೇಕೆಂದಿದೆ. ಎಷ್ಟುಮಟ್ಟಿಗೆ ಇದು ಸಾಧನೆಯಾಗಿದೆ ಎನ್ನುವುದನ್ನು ಸರಕಾರ ತೀವ್ರವಾಗಿ ಯೋಚನೆ ಮಾಡಬೇಕಾದ ಅಂಶ. ಹಿಂದುಳಿದ ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಒಂದು ಸಮಗ್ರವಾದ ಯೋಜನೆಯನ್ನು ತಯಾರುಮಾಡಿದ್ದಾರೆ. ಇದಕ್ಕೆ ಸುಮಾರು ನಲವತ್ತು ಕೋಟಿಯಷ್ಟು ಹಣ ವೆಚ್ಚವಾಗುತ್ತದೆ. ಇಂತಹ ಒಂದು ಯೋಜನೆಯನ್ನು ಕೇಂದ್ರ ಸರಕಾರದ ಮುಂದಿಟ್ಟು ಅವರಿಂದ ಹೆಚ್ಚಿನ ನೆರವನ್ನು ಪಡೆಯಲೂ ಸಾಧ್ಯವಿದೆ. ನಲವತ್ತು ಕೋಟಿ ರೂಪಾಯಿಗಳ ಯೋಜನೆಯಲ್ಲಿ ಇದುವರೆಗೆ ಎಷ್ಟು ಖರ್ಚಾಗಿದೆ ಎನ್ನುವುದೂ ನಮಗೆ ಗೊತ್ತಿಲ್ಲ ಈ ಯೋಜನೆಯನ್ನು ವಿಮರ್ಶೆಮಾಡಿ ಯಾವ ಯಾವ ಪ್ರದೇಶಗಳು ಹಿಂದುಳಿದಿವೆ. ಯಾವ ಯಾವ ಭಾಗದಲ್ಲಿ ಏನೇನು ಕೆಲಸಗಳನ್ನು ಮಾಡಬೇಕೆಂದು ಸರಕಾರ ಯೋಚನೆ ಮಾಡಿದೆ ಎನ್ನುವುದನ್ನೂ ಈ ಮಾನ್ಯ ಸಭೆಗೆ ತಿಳಿಸಿಲ್ಲ. ಇದು ಇನ್ನೂ ಕಾರ್ಯರೂಪಕ್ಕೆ ಯಾವಾಗ ಬರುತ್ತದೆಯೋ ನಮಗಂತೂ ಗೊತ್ತಿಲ್ಲ. ನೀರು ಉಪಯೋಗಿಸಿಕೊಳ್ಳುವ ವಿಚಾರದಲ್ಲಿ ಮತ್ತು ಇನ್ನೂ ಅನೇಕ ವಿಚಾರಗಳಲ್ಲಿ ಸಾಕಷ್ಟು ಹಣವನ್ನು ಒದಗಿಸಿಲ್ಲ ಎನ್ನುವ ಪ್ರಲಾಪವನ್ನು ನಾವು ಕೇಳುತ್ತಲೇ ಇದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಆಂಧ್ರದ ಮುಖ್ಯ ಮಂತ್ರಿಗಳು ಸೇರಿಕೊಂಡು ಹತ್ತುಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿರುವ ಯೋಜನೆಗಳನ್ನು ಮತ್ತು ಅದರ ಉಸ್ತುವಾರಿಯನ್ನು ಕೇಂದ್ರ ಸರಕಾರದವರೇ ತೆಗೆದುಕೊಂಡು ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆಂದು ಕೇಳಿದೆವು. ಇದರಿಂದ ಯಾವರೀತಿ ಪ್ರತಿಫಲ ದೊರೆಯುತ್ತದೋ ನೋಡಬೇಕು. ಕೇಂದ್ರದವರು ಬೇರೆ ಪ್ರಾಂತಗಳ ನೆರವಿಗೆ ಬರುವಂತೆ ನಮ್ಮ ಪ್ರಾಂತದ ನೆರವಿಗೆ ಬರುತ್ತಿಲ್ಲ ಎನ್ನುವುದನ್ನು ಮೊದಲೇ ತಿಳಿಯಬೇಕಾಗಿತ್ತು. ಆ ರೀತಿ ಕೇಂದ್ರದಲ್ಲಿ ಒತ್ತಾಯ ಮಾಡಿದರೆ, ನಿಜವಾಗಿಯೂ ಕೃಷ್ಣಾ—ಗೋದಾವರಿ ಹಾಗೂ ಕಾವೇರಿ ನದಿ ನೀರನ್ನು ಕೇಂದ್ರದವರು ಸೂಚಿಸಿರುವ ರೀತ್ಯಾ, ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದ್ದರೆ ಅವರೂ ಒಪ್ಪಿಕೊಳ್ಳುತ್ತಿದ್ದರು. ಈಗ ಮೊಟ್ಟಮೊದಲನೆಯದಾಗಿ ರಾಜ್ಯಪಾಲರ ಭಾಷಣದಲ್ಲಿ ಕೃಷ್ಣಾ—ಗೋದಾವರಿ ನದಿ ನೀರಿನ ಪ್ರಮಾಣವನ್ನು ನಾವು ಒಪ್ಪದೇ ತಿರಸ್ಕರಿಸಿದ್ದೇವೆಂದು ತಿಳಿಸಿದ್ದಾರೆ. ಈ ಹಿಂದೆ ಇಲ್ಲಿ ಕೃಷ್ಣಾ—ಗೋದಾವರಿ ನದಿ ನೀರಿನ ವಿಚಾರ ಚರ್ಚೆಗೆ ಬಂದಿದ್ದಾಗ, ಇದನ್ನು ತಿರಸ್ಕಾರ ಮಾಡಿ ಇದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಕೇಂದ್ರಕ್ಕೆ ಹೇಳಬೇಕೆಂದು ಹೇಳಿದಾಗ, ನಾವು ಆ ರೀತಿ ಹೇಳುವುದಕ್ಕೆ ಸಾಧ್ಯವಿಲ್ಲ. ಕ್ಲಾರಿಫಿಕೇಷನ್ನಿಗಾಗಿ ಯಾವ ಆಧಾರದ ಮೇಲೆ ಮಾಡಲಾಗಿದೆ ಎಂದು ಕೇಳಿದ್ದೇವೆ, ಅದಕ್ಕೆ ಉತ್ತರ ಬರಲಿ ಎಂದು ಹೇಳುತ್ತಿದ್ದರು. ಇವೊತ್ತು ಅದನ್ನು ತಿರಸ್ಕರಿಸುತ್ತಿದ್ದೇವೆಂದು ಹೇಳಿರುವುದನ್ನು ನೋಡಿದರೆ ನಮಗೆ ನ್ಯಾಯವಾಗಿ ಸಿಕ್ಕಬೇಕಾದ ನೀರಿನ ಪಾಲು ಸಿಕ್ಕಲಿಲ್ಲ ಎನ್ನುವುದು ಖಚಿತವಾಗಿ ತಿಳಿದುಕೊಳ್ಳಲು ಅವಕಾಶವಾಯಿತು. ಮಹಾರಾಷ್ಟ್ರದವರೂ ಇದರ ಬಗ್ಗೆ ಯಾವ ರೀತಿ ವಿಚಾರ ಮಾಡುತ್ತಿದ್ದಾರೆ ಎಂಬುದೂ ನಮಗೆ ಗೊತ್ತಿಲ್ಲ.

(ಶ್ರೀ ಜಿ. ವಿ. ಗೌಡ)

ಶಿಕ್ಷಣದ ವಿಚಾರದಲ್ಲಿ ರಾಜ್ಯಪಾಲರು ಬಹಳ ದೀರ್ಘವಾಗಿ ಪ್ರಸ್ತಾಪಮಾಡಿದ್ದಾರೆ. ಕಾಲೇಜು ವಿದ್ಯಾರ್ಥಿಗಳ ಶುಲ್ಕಗಳ ಹಾಗೂ ಅಲ್ಲಿನ ಉಪಾಧ್ಯಾಯರುಗಳ ಸಂಬಳ ಸಾರಿಗೆಗಳ ವಿಚಾರಗಳಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸಿ ಸಮನ್ವಯ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಮಹತ್ವವಾದ ಸಮಿತಿಗೆ ಯಾವ ವಿಚಾರಗಳನ್ನು ಪರಿಶೀಲನೆಮಾಡಿ ಏಕರೂಪತೆಗೆ ತರಲು ಸಾಧ್ಯವಾಗುತ್ತದೆ ಎನ್ನುವುದರಲ್ಲಿ ನಮಗೆ ಅನುಮಾನ ಬಂದಿದೆ. ಇದರಲ್ಲಿ ಎರಡು ವಿಷಯಗಳಿವೆ. ಮೊದಲನೆಯದು ಒಂದೇ ಕಾನೂನಿನ ಕೆಳಗೆ ಏತಕ್ಕೆ ಕೆಲಸ ಮಾಡಬಾರದು. ಈಗ ಎರಡು ವಿಶ್ವವಿದ್ಯಾನಿಲಯಗಳಿವೆ. ಇವೆರಡನ್ನು ಸಮನ್ವಯ ಮಾಡಿ ಅಲ್ಲಿರುವ ಉಪಾಧ್ಯಾಯರುಗಳ ಸಂಬಳ ಸಾರಿಗೆಗಳನ್ನು ಸಮನ್ವಯಮಾಡಬೇಕು. ಹೀಗೆ ಪ್ರತಿಯೊಂದರಲ್ಲಿ ಸಮನ್ವಯಮಾಡಲು ಬರುತ್ತದೆಯೇ ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು. ಇನ್ನೊಂದು ವಿದ್ಯಾರ್ಥಿಗಳು ಕೊಡುತ್ತಿರುವ ಫೀಜು ಕೂಡ ನಾನಾ ವಿಧವಾಗಿದೆ. ಇಲ್ಲಿ ಒಂದು ತರದ ಶುಲ್ಕವಿದೆ. ಬೇರೆ ಕಡೆ ಒಂದು ರೀತಿಯಲ್ಲಿದೆ. ಇವನ್ನೆಲ್ಲಾ ಏಕರೂಪತೆಗೆ ತಂದಿಲ್ಲ. ಇವೆಲ್ಲ ವಿಷಯಗಳನ್ನು ಪರಿಶೀಲನೆ ಮಾಡಿ ಒಂದೇ ಶಾಸನದ ಮೇರೆಗೆ ಎರಡು ಯೂನಿವರ್ಸಿಟಿಗಳೂ ಕೆಲಸಮಾಡುವಂತೇಕೆ ವ್ಯವಸ್ಥೆ ಮಾಡಬಾರದು? ಸಮಿತಿಯವರು ಇವೆಲ್ಲವನ್ನೂ ಪರಿಶೀಲನೆ ಮಾಡಬೇಕೆಂದು ಸರಕಾರದವರು ಅವರಿಗೆ ತಿಳಿಸಿದ್ದಾರೆಂದು ತಿಳಿದುಕೊಂಡಿದ್ದೇನೆ. ಕರ್ನಾಟಕ ಯೂನಿವರ್ಸಿಟಿಯಲ್ಲಿ ಎಲೆಕ್ಟೆಡ್ ವೈಸ್‌ಚಾನ್ಸಲರಿದ್ದಾರೆ. ಇಲ್ಲಿ ಅಪಾಯಿಂಟೆಡ್ ವೈಸ್‌ಚಾನ್ಸಲರಿದ್ದಾರೆ. ಇಲ್ಲಿರುವ ಪ್ರೊಫೆಸರುಗಳಿಗೆ ನಾಲ್ಕುನೂರು ರೂಪಾಯಿಗಳು ಬರುತ್ತಿದ್ದರೆ ಅಲ್ಲಿರುವ ಪ್ರೊಫೆಸರುಗಳಿಗೆ ಎಂಟುನೂರು ರೂಪಾಯಿ ಸಂಬಳ ಬರುತ್ತಿದೆ. ಈ ರೀತಿಯಾದ ತಾರತಮ್ಯಗಳಿರುವುದು ಸರಿಯೇ? ಇದರಲ್ಲಿ ಏಕರೂಪತೆ ತರುವ ವಿಷಯವನ್ನು ಸರಕಾರ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಪ್ರಾಥಮಿಕ ವಿದ್ಯಾಭ್ಯಾಸವೂ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಾಗಿದೆ. ಇವುಗಳನ್ನೆಲ್ಲ ಸಮನ್ವಯ ಮಾಡಬೇಕೆಂದು ಹಲವು ವರ್ಷಗಳಿಂದಲೂ ಜನರು ಹೇಳುತ್ತಿದ್ದಾರೆ. ಆದರೆ ಇಲ್ಲಿಯವರೆಗೂ ಇದನ್ನು ಸಮನ್ವಯ ಮಾಡಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಪ್ರೌಢಶಾಲಾ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಇದರಲ್ಲಿ ಹೇಳಿದ್ದಾರೆ. ಉಚಿತವಾದ ಹಾಗೂ ಕಡ್ಡಾಯವಾದ ಶಿಕ್ಷಣ ಕೊಡುತ್ತಿರುವುದರಿಂದ ನೂರಕ್ಕೆ 90 ರಷ್ಟು ಮಕ್ಕಳು ಶಾಲೆಗೆ ಬರುತ್ತಿವೆ ಎಂದು ಇದರಲ್ಲಿ ಹೇಳಿದ್ದಾರೆ. ವಾಸ್ತವವಾಗಿ ನೋಡುವುದಾದರೆ ಇರುವ ಮಾಹಿತಿಯ ಅಂದಾಜು ನೂರಕ್ಕೆ 90 ರಷ್ಟು ಮಕ್ಕಳು ಎನ್ನುವುದು ರಿಜಿಸ್ಟರಿನಲ್ಲಿರುತ್ತದೆಯೇ ಹೊರತು ಅದರ ಅರ್ಧದಷ್ಟು ಮಕ್ಕಳು ಕೂಡ ಶಾಲೆಗಳಿಗೆ ಬರುತ್ತಿಲ್ಲ. ಇದನ್ನು ಸರಕಾರ ಮನಗಾಣಬೇಕು. ಗ್ರಾಮಾಂತರ ಪ್ರದೇಶದವರಿಗೆ ಸರ್ಕಾರದವರೇನು ಸೌಕರ್ಯಗಳನ್ನೊದಗಿಸಿಕೊಟ್ಟಿದ್ದಾರೆ, ಅದನ್ನು ತಿಳಿಸಿಲ್ಲ. ಎಷ್ಟೋ ಗ್ರಾಮಗಳಲ್ಲಿ ಸರಿಯಾಗಿ ಉಪಾಧ್ಯಾಯರುಗಳೇ ಶಾಲೆಗೆ ಬರುತ್ತಿಲ್ಲ. ಇವರ ಗೈರ್‌ಹಾಜರಿಯೇ ಜಾಸ್ತಿಯಾಗುತ್ತಿರುವಾಗ ಇನ್ನು ಬಾಲಕರ ಹಾಜರಿ ವಿಚಾರಮಾಡುವುದೆಲ್ಲಿ ಬಂತು ಆದ್ದರಿಂದ ಇಲ್ಲಿ ಹೇಳಿರತಕ್ಕದ್ದೆಲ್ಲಾ ಅರ್ಥವಿಲ್ಲದ ಬರವಣಿಗೆಯೆಂದು ಹೇಳುತ್ತೇನೆ.

10-30 A.M.

ಸ್ವಾಮಿ, ಹಿಂದುಳಿದವರ ಹಿತರಕ್ಷಣೆಗಾಗಿ ಅನೇಕ ಪ್ರಯತ್ನಗಳನ್ನು ಮಾಡಲಾಗಿದೆಯೆಂದು ಹೇಳಿದ್ದಾರೆ. ಆದರೆ ಇದರಿಂದೇನು ಅನುಕೂಲವಾಗಬೇಕೋ ಅದಾಗುತ್ತಿಲ್ಲ. ಈ ಬಾಬಿನಲ್ಲಿ ಸರ್ಕಾರ ಬೇಕಾದಷ್ಟು ದುಡ್ಡನ್ನು ಖರ್ಚುಮಾಡುತ್ತಿದೆ. ಆದರೆ ಯಾವ ಯಾವ ಬಾಬಿಗೆಷ್ಟು ಎಂಬುದನ್ನು ಇಲ್ಲಿ ತಿಳಿಸಿಲ್ಲ.

ಇನ್ನು ಆಹಾರಧಾನ್ಯಗಳ ಬೆಲೆ ಹತೋಟಿಯ ಬಗ್ಗೆ ಹೇಳಿದ್ದಾರೆ. ಈ ವಿಚಾರವನ್ನು ಪ್ರಸ್ತಾಪ ಮಾಡುತ್ತ, ಆಹಾರಧಾನ್ಯಗಳ ಬೆಲೆಗಳು ಸಾಮಾನ್ಯ ಹತೋಟಿಯಲ್ಲಿರುವುದರಿಂದ ಇದೊಂದು ಸಂತೋಷದ ಹಾಗೂ ಸಮಾಧಾನಕರವಾದ ಸುದ್ದಿಯಾಗಿರುತ್ತದೆಂದು ಹೇಳಿದ್ದಾರೆ. ಆದರೆ ಇದು ಸತ್ಯಾಂಶಕ್ಕೆ ಬಹಳ ದೂರವಾದ ವಿಚಾರ. ರೈತರಿಗೂ ಸರಿಯಾದ ಬೆಲೆ ಸಿಕ್ಕುತ್ತಿಲ್ಲ, ಕೊಳ್ಳತಕ್ಕವರಿಗೂ ಸರಿಯಾದ ಬೆಲೆಗಳಿಲ್ಲ. ಇದರ ಲಾಭವೆಲ್ಲಾ ಮಧ್ಯವರ್ತಿ ಜನರ ಪಾಲಾಗುತ್ತಿದೆ. ಇಲ್ಲಿ ಸರ್ಕಾರ ಸಂಘಗಳ ಮೂಲಕ ಆಹಾರಸಾಮಗ್ರಿಗಳನ್ನು ಜನರಿಗೆ ಒದಗಿಸುವಂತೆ ಮಾಡಲಾಗುತ್ತಿದೆಯೆಂದು ಹೇಳಿದ್ದಾರೆ. ಆದರೆ ಕೊಳ್ಳತಕ್ಕ ಜನರಿಗೆ ಕೊಳ್ಳುವ ಶಕ್ತಿಯನ್ನು ಮಾತ್ರ ಒದಗಿಸತಕ್ಕ ಪ್ರಯತ್ನಗಳನ್ನು ಮಾಡಿಲ್ಲ. ಇಂದು ಈ ಏರುತ್ತಿರುವ ಬೆಲೆಗಳಲ್ಲಿ ಸಾಮಗ್ರಿಗಳನ್ನು ಕೊಳ್ಳಲು ಜನಸಾಮಾನ್ಯರಿಗೆ ಶಕ್ತಿಯಿರುವುದಿಲ್ಲ. ಜನರಲ್ಲಿ ಈ ಕೊಳ್ಳುವ ಶಕ್ತಿಯನ್ನು ಜಾಸ್ತಿ ಮಾಡದ ವಿನಾ ಈ

ಯೋಜನೆಯಿಂದ ಜನರಿಗೆ ಸುಖವಿಲ್ಲ. ಇಲ್ಲಿ ನಾನು ಸೂಚಿಸಲಿಚ್ಛಿಸುವುದೇನೆಂದರೆ: ಈ ಸಹಕಾರ ಸಂಘಗಳಿನ್ನೂ ಜಾಸ್ತಿಯಾಗಬೇಕು. ಇದರ ಜೊತೆಗೆ ಧಾನ್ಯ ಬೆಳೆಸತಕ್ಕವರ ಸಹಕಾರ ಸಂಘಗಳೂ ಜಾಸ್ತಿಯಾಗಬೇಕು. ಮಧ್ಯವರ್ತಿ ಜನರ ಕಾಟ ಎಂದು ತಪ್ಪುತ್ತದೆಯೋ ಅಂದೇ ಜನಗಳಿಗೂ ಮತ್ತು ರೈತರಿಗೂ ಅನುಕೂಲ ಉಂಟಾಗುತ್ತದೆ. ಇನ್ನು ಇಲ್ಲಿ ರೈತರಿಗೆ ಉತ್ತಮ ದರ್ಜೆಯ ಬಿತ್ತನೆ ಬೀಜ ಮತ್ತು ಗೊಬ್ಬರ ಇತ್ಯಾದಿಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಇದನ್ನು ಎಷ್ಟರಮಟ್ಟಿಗೆ ಜಾರಿಗೆ ತರಬೇಕಾಗಿತ್ತೋ ಅಷ್ಟರ ಮಟ್ಟಿಗೆ ತಂದಿಲ್ಲವೆಂದು ತಿಳಿಸಲಿಚ್ಛಿಸುತ್ತೇನೆ. ಜನರಿಗೆ ಸಕಾಲದಲ್ಲಿ ಸಾಕಷ್ಟು ಸಾಲಗಳು ದೊರೆಯುತ್ತಿಲ್ಲ. ಈಗ ಹಣವನ್ನು ರಿಜರ್ವ್ ಬ್ಯಾಂಕಿನಿಂದ ಪಡೆದು ಏಪೆಕ್ಸ್ ಬ್ಯಾಂಕಿನ ಮೂಲಕ ಜಿಲ್ಲಾ ಮಟ್ಟದಲ್ಲೂ ತಾಲ್ಲೂಕು ಮಟ್ಟದಲ್ಲೂ ಒದಗಿಸಬಹುದು. ಆದರೆ ಬಡ್ಡಿಯ ದರ ಶೇಕಡ 7-8 ಬೀಳುತ್ತದೆ ಇದು ಬಹಳ ಜಾಸ್ತಿಯಾಯಿತು. ಇದನ್ನು ಇಳಿಸಿ ರೈತರಿಗೆ ಶೇಕಡ 3-4ರಂತೆ ಬಡ್ಡಿ ದೊರೆಯುವಂತೆ ಏಕೆ ಪ್ರಯತ್ನ ಮಾಡಬಾರದೆಂದು ಕೇಳುತ್ತೇನೆ. ಇದನ್ನೆಲ್ಲಾ ನೋಡಿದರೆ ಈ ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕದ್ದೆಲ್ಲ ಒಂದು ಅಸಂಬದ್ಧ ಪ್ರಲಾಪವಾಗಿದೆಯೆಂದು ನಾನು ಹೇಳದೆ ವಿಧಿಯಿಲ್ಲ. ಈ ಕಾರಣದಿಂದ ನಾನು ಈ ವಂದನಾರ್ಪಣ ನಿರ್ಣಯಕ್ಕೆ ನನ್ನ ಒಪ್ಪಿಗೆಯನ್ನು ಕೊಡಲು ಸಾಧ್ಯವಿಲ್ಲ. ಇಲ್ಲಿ ಹೇಳಿರುವಂತೆ ಯಾವ ವಲಯದಲ್ಲೂ ಯಾವ ಒಂದು ಬದಲಾವಣೆಯೂ ಆಗಿಲ್ಲ. ಇಲ್ಲಿ ಹರಿಜನ-ಗಿರಿಜನರ ಹಾಗೂ ಇನ್ನಿತರೆ ಹಿಂದುಳಿದ ಜನರ ಅಭಿವೃದ್ಧಿಯ ವಿಚಾರವನ್ನು ಹೇಳಿದ್ದಾರೆ. ಆದರೆ ಇಲ್ಲಿ ಇವುಗಳಿಂದ ಅನುಕೂಲ ಆಗುವ ಬದಲು ಜನರ ಶೋಷಣೆ ಜಾಸ್ತಿಯಾಗುತ್ತಿದೆ. ಇಲ್ಲಿ ಹೇಳಿರುವಂತೆ ಯಾವ ಒಂದು ಅನುಕೂಲವಾಗಲೀ ಆಗಿರುವುದಿಲ್ಲ. ಈ ಎಲ್ಲಾ ಬಾಬುಗಳಲ್ಲಿಯೂ ಸರ್ಕಾರ ಪೂರ್ಣವಾಗಿ ವಿಫಲವಾಗಿವೆ. ಇನ್ನೆರಡು ಮೂರು ವರ್ಷಗಳಲ್ಲೇ ನಮ್ಮ ಹಣಕಾಸಿನ ವಿಚಾರ ಬಹಳ ಹದಗೆಡಬಹುದಾದ ಸಂದರ್ಭಗಳು ಕಾಣುತ್ತಿರುವುದರಿಂದ ಆಗ ನಮ್ಮ ಸಹಾಯಕ್ಕೆ ಕೇಂದ್ರದವರು ಬರಬೇಕಾಗುತ್ತದೆಂದು ಹೇಳಿದ್ದಾರೆ. ಅದಕ್ಕೆ ತಕ್ಕಹಾಗೆ ನಮ್ಮ ಸರ್ಕಾರ ಒಂದು ಪ್ರೊಗ್ರಾಮಾಫಿಷಿಯಾ ಕೇಸನ್ನು ತಯಾರು ಮಾಡಿಲ್ಲ ಎಂದು ನಾನು ತಿಳಿಸಲಿಚ್ಛಿಸುತ್ತೇನೆ. ಆದರೆ ಈ ಬಾರಿಯಲ್ಲಿ ಕೇಂದ್ರದಿಂದ ಹೆಚ್ಚು ಹಣವನ್ನು ಪಡೆಯುವಂಥ ಒಂದು ಶಕ್ತಿಯನ್ನು ದೇವರು ನಮ್ಮ ಸರ್ಕಾರಕ್ಕೆ ಕೊಡಲೆಂದು ಆಶಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಸ್ವಾಮಿ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಇನ್ನೂ ಪ್ರಮಾಣ ವಚನವನ್ನು ಸ್ವೀಕರಿಸಿದಂತೆ ಕಾಣಲಿಲ್ಲವಲ್ಲಾ ?

Mr. SPEAKER.—Members must exercise some restraint. The hon'ble Member may go to the Office and ascertain.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದು ನನಗೆ ಗೊತ್ತಿಲ್ಲ.

Mr. SPEAKER.— The hon'ble member must make enquiries before he gets up. It has appeared in news papers.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವೇ ಅನೇಕ ಸಂದರ್ಭಗಳಲ್ಲಿ ಪೇಪರಿನಲ್ಲಿ ಬರತಕ್ಕ ಸಮಾಚಾರವನ್ನು ನಂಬಬಾರದೆಂದು ಹೇಳಿದ್ದೀರಲ್ಲವೇ ?

Mr. SPEAKER.—The hon'ble member should not raise it without ascertaining it first. He should not waste the time of the House like **this**

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಸ್ವಾಮಿ, ನಾನು ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತೇನೆ ಮತ್ತು ಸಮರ್ಥನೆ ಮಾಡುತ್ತೇನೆ. ಹೀಗೆ ಸಮರ್ಥನ ಮಾಡುವಾಗ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ.

ವಿರೋಧ ಪಕ್ಷದ ಸದಸ್ಯರು ಮಾತನಾಡುವಾಗ ನಾನಾವ ಬ್ರೇಕನ್ನೂ ಹಾಕಲಿಲ್ಲ. ಆದರೆ ನಾನು ಮಾತನಾಡತಕ್ಕ ಕಾಲದಲ್ಲಿ ಅವರು ಹೀಗೆ ಬ್ರೇಕ್ ಹಾಕಲು ಪ್ರಯತ್ನ ಮಾಡುವುದು ಉಚಿತವಲ್ಲ ಎಂದು ವಿಷಾದದಿಂದ ಹೇಳಬಯಸುತ್ತೇನೆ. ಕಳೆದ ವರ್ಷ ಆಕಸ್ಮಿಕವಾಗಿ ಚೈನಾ ದೇಶದವರು ನಮ್ಮ ದೇಶದಮೇಲೆ ಧಾಳಿಮಾಡಿದ್ದರಿಂದ ಇಲ್ಲಿ ಒಂದು ತುರ್ತುಪರಿಸ್ಥಿತಿಯುಂಟಾಯಿತು. ಆ ಪರಿಸ್ಥಿತಿಯನ್ನು ಎದುರಿಸಿ, ಪರಕೀಯರನ್ನು ನಮ್ಮ ದೇಶದಿಂದ ಹೊಡೆದು ಹೊರಕ್ಕಟ್ಟಲು ಜನತೆ ತುಂಬಾ ಸಹಕಾರ ನೀಡಿತು. ಇದು ನಿಜವಾಗಿಯೂ ಬಹಳ ಸಂತೋಷದ ವಿಚಾರ. ಈ ವಿಚಾರವಲ್ಲಿ ನಮ್ಮ ದೇಶದ ಜನತೆ ತುಂಬಾ ಎಚ್ಚರದಿಂದಿರಲು ಎಲ್ಲಾ ಪ್ರಯತ್ನಗಳನ್ನೂ ನಡೆಸಲಾಗಿದೆ ಎಂದು ರಾಜ್ಯಪಾಲರು ಹೇಳಿರತಕ್ಕದ್ದು ತುಂಬಾ ಸ್ವಾಗತಾರ್ಹವಾದ ಸಂಗತಿಯಾಗಿದೆ. ಇದಕ್ಕನುಗುಣವಾಗಿ ದೇಶದಾದ್ಯಂತವೂ ಗೃಹರಕ್ಷಣಾ ದಳಗಳನ್ನು ವಿಸ್ತರಿಸಲು ಕಾರ್ಯಕ್ರಮವನ್ನು ಕೈಗೊಳ್ಳಲಾ

(ಶ್ರೀ ಎಸ್ ವಿ ಅಗ್ನಿಹೋತ್ರಿ)

ಗಿದೆ. ಈಗ ಈ ಗೃಹರಕ್ಷಣಾ ದಳಗಳು ಅನೇಕ ಕಡೆಗಳಲ್ಲಿ ಸ್ಥಾಪಿತಲ್ಪಟ್ಟಿವೆ. ಈ ಹಿಂದಕ್ಕೆ ಇವು ಕೇವಲ ಮುಂಬೈ ಕರ್ಣಾಟಕ ಜಿಲ್ಲೆಗಳಲ್ಲಿ ನಾಲ್ಕು ಕಡೆಗಳಲ್ಲಿ ಮಾತ್ರ ಇದ್ದವು. ಆದರೆ ಇನ್ನು ಮುಂದೆ ಈ ದಳಗಳನ್ನು ಮೈಸೂರು ರಾಜ್ಯದಾದ್ಯಂತವೂ ಹರಡಲು ಆ ಬಗ್ಗೆ ಸೂಕ್ತ ಕಾರ್ಯಕ್ರಮ ಗಳನ್ನು ಕೈಗೊಳ್ಳಲು ಒಬ್ಬ ಉನ್ನತ ಅಧಿಕಾರಿಗಳನ್ನು ನೇಮಕ ಮಾಡಿರತಕ್ಕದ್ದು ಬಹಳ ಶ್ಲಾಘ ನೀಯವಾದ ವಿಚಾರ. ಇದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ.

ಇನ್ನು ಎರಡನೆಯದಾಗಿ, ನಮ್ಮ ವಿದ್ಯಾಶಾಲೆಗಳಲ್ಲೂ ಕಾಲೇಜುಗಳಲ್ಲೂ ವ್ಯಾಸಂಗಮಾಡ ತಕ್ಕ ವಿದ್ಯಾರ್ಥಿಗಳಿಗೆಲ್ಲಾ ಎನ್. ಸಿ. ಸಿ. ಟ್ರೈನಿಂಗ್‌ನಲ್ಲಿ ಪ್ರೋತ್ಸಾಹ ನೀಡಲು ಶೇಕಡ 60 ಕ್ಕೂ ಮೀರಿದ ವಿದ್ಯಾರ್ಥಿಗಳಿಗೆ ವೇತನ ಕೊಡುತ್ತಿರುವುದು ಶ್ಲಾಘನೀಯವಾದ ವಿಚಾರ. ನಮ್ಮ ಮುಂದಿನ ಪೀಳಿಗೆಯು ದೇಶ ರಕ್ಷಣೆಯನ್ನು ಸುಲಭವಾಗಿ ನಿರ್ವಹಿಸಲು ಅನುಕೂಲವಾಗುವಂತೆ ಒಂದು ಉತ್ತಮ ವ್ಯವಸ್ಥೆ ಎನ್ನು, ಒಂದು ಯೋಗ್ಯವಾದ ಕಾರ್ಯವನ್ನು ಮಾಡಿದ್ದಾರೆಂದು ನಾನು ತಿಳಿಸ ಬಚ್ಛಿಸುತ್ತೇನೆ. ಆದರೆ ನಮ್ಮ ಸರ್ಕಾರದವರು ಈ ದಳಗಳು ಒಂದು ಉತ್ತಮರೀತಿಯಲ್ಲಿ ದೇಶಕ್ಕೆ ಸೇವೆಯನ್ನು ಸಲ್ಲಿಸುವಂತಾಗಲೀ ಎಂಬ ಏನು ಒಂದು ಘನೋದ್ದೇಶದಿಂದ ಅವುಗಳನ್ನು ಹುಟ್ಟು ಹಾಕಿದರೋ ಅದೇ ರೀತಿಯ ಉತ್ಸಾಹದಿಂದ ಅವುಗಳನ್ನು ಬೆಳೆಸಿಕೊಂಡು ಬರಬೇಕೆಂದು ನಾನು ಸೂಚಿಸಬಚ್ಛಿಸುತ್ತೇನೆ

ಇನ್ನೂ ಮೂರನೆಯದಾಗಿ ನಮ್ಮ ಯೋಜನಾ ಕಾರ್ಯಕ್ರಮದಲ್ಲಿ 250 ಕೋಟಿ ರೂಪಾಯಿ ಗಳಲ್ಲಿ ಈಗ ಗಲೇ 110 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿದ್ದಾರೆ. ಇದು ತುಂಬಾ ಯೋಗ್ಯ ವಾಗಿದೆ ಇನ್ನುಳಿದ ಹಣವನ್ನು ಅಧಿಕಾರಿಗಳ ಕೈಗೆ ಕೊಟ್ಟು ಅದೂ ಕೂಡ ದೇಶಕ್ಕೆ ಸದ್ವಿನಿಯೋಗ ವಾಗುವಂತೆ ಮಾಡಬೇಕೆಂದು ತಿಳಿಸಬಚ್ಛಿಸುತ್ತೇನೆ. ಆದರೆ ಇದರ ಮೇಲ್ವಿಚಾರಣೆಯನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕಾದ್ದು ಅತ್ಯಗತ್ಯ.

ಇನ್ನು ಪಂಚಾಯಿತಿ ರಾಜ್ಯದ ವಿಷಯವಾಗಿ ಹೇಳುವುದಾದರೆ, ನಾವು ಸ್ವತಂತ್ರರಾದ ನಂತರ ಯಾವತರಹ ಸರ್ಕಾರ ಬೇಕು ಎಂಬ ದಾಗಿ ಆರಿಸಿಕೊಂಡೆವೋ ಎಂದರೆ ಪ್ರಜಾರಾಜ್ಯವು 1 5 ರಿಂದ 196 ರವರೆಗೂ ಕೆಲಸ ಮಾಡುತ್ತಿದೆ. ದೇಶದ ಕಲ್ಯಾಣ ಯಾವರೀತಿ ಆಗಬೇಕು ದೇಶದ ಜನತೆಗೆ ಯಾವ ಸುಖ ಸೌಲಭ್ಯಗಳು ದೊರಕಬೇಕು ಎಂಬುವಾಗಿ ವಿಚಾರ ಮಾಡುವಾಗ ಪ್ರಜಾಪ್ರಭುತ್ವಕ್ಕನು ಗುಣವಾಗಿ ಗ್ರಾಮ ಪಂಚಾಯಿತಿ ಟಿ. ಡಿ. ಬೋರ್ಡ್, ಜಿಲ್ಲಾ ಬೋರ್ಡುಗಳಿಗೆ ಅಧಿಕಾರಗಳನ್ನೆಲ್ಲಾ ವಿಕೇಂದ್ರೀಕರಣ ಮಾಡಿ ಎಲ್ಲರೂ ಕೆಲಸ ಭಾಗವಹಿಸಿ ಜನತೆಯ ಹಿತರಕ್ಷಣೆ ಮಾಡಿಕೊಂಡು ಹೋಗುವುದು ಬಹಳ ಉತ್ತಮ ಕೆಲಸ. ಈಗ ಸರ್ಕಾರದವರು ಕೊಂಡಜ್ಜಿ ಬಸಪ್ಪ ಕಮಿಟಿ ಯೊಂದನ್ನು ರಚನೆಮಾಡಿ ಅದರಿಂದ ಒಂದು ವರದಿಯನ್ನು ತರಿಸಿಕೊಂಡಿರುವುದಾಗಿ ಹೇಳಿದ್ದು ಬಹಳ ಒಳ್ಳೆಯದು. ಆ ವರದಿ ಬಹಳ ಯೋಗ್ಯವಾದುದಾಗಿದ್ದರೂ ಅದು ಕಾರ್ಯಾಚರಣೆಯಲ್ಲಿ ಬರಬೇಕಾ ದರೆ ಎಲ್ಲರೂ ಬಹಳ ದಕ್ಷತೆಯಿಂದ ಕೆಲಸ ಮಾಡ ಬೇಕಾಗಿದೆ. ಪ್ರಜಾಪ್ರಭುತ್ವ ನಿಜವಾಗಿ ಬಲಗೊಳ್ಳ ಬೇಕಾದರೆ, ಗ್ರಾಮ ಪಂಚಾಯಿತಿಗಳಿಗೆ, ಟಿ ಡಿ. ಬೋರ್ಡುಗಳಿಗೆ, ಜಿಲ್ಲಾ ಮಂಡಲಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು. ಈಗ ಟಿ ಡಿ. ಬೋರ್ಡುಗಳಿಗೆ ಸರ್ಕಾರದವರು ಕೇವಲ 2 ಲಕ್ಷ ರೂಪಾಯಿ ಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ಕೊಡುತ್ತಿದ್ದಾರೆ. ನಿಜವಾಗಿಯೂ ಅಷ್ಟು ಹಣ ಸಾಕಾಗುವು ದಿಲ್ಲ. ಹೆಚ್ಚು ಹಣವನ್ನು ಕೊಟ್ಟು ಅವುಗಳನ್ನು ಬಲಪಡಿಸಿದ್ದೇ ಆದರೆ ನಿಜವಾಗಿ ಜಿಲ್ಲಾಮಟ್ಟದಲ್ಲಿ ಹೆಚ್ಚು ಕೆಲಸಗಳನ್ನು ಯೋಗ್ಯ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವೆಂದು ನನ್ನ ಭಾವನೆ.

ಇನ್ನು ಮುಂಬೈ ಸಹಕಾರ ಸಂಘಗಳ ವಿಷಯವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಅಲ್ಲಿನ ಸಹಕಾರ ಸಂಘದ ಸದಸ್ಯರೆಲ್ಲರೂ ಸೇರಿಕೊಂಡು ತಮ್ಮಲ್ಲೊಬ್ಬರನ್ನು ಚೇರ್‌ಮನ್ನರನ್ನಾಗಿ ಮಾಡಿ ಒಂದು ವರ್ಕಿಂಗ್ ಕಮಿಟಿಯನ್ನು ರಚನೆಮಾಡಿದ್ದಾರೆ. ಆದರೆ ಆ ಕಮಿಟಿಯಲ್ಲಿ ನಡೆದಂಥ ಕಾರ್ಯ ಕಲಾಪಗಳ ಒಂದು ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸಿದ್ದೂ ಉಂಟು. ಮೊನ್ನೆ ಸಹಕಾರಿ ಕಾಯಿದೆ ಇಲ್ಲಿ ಪಾಸ್ ಆದ ನಂತರ ಒಬ್ಬ ರಿಟರ್ನಿಂಗ್ ಅಧಿಕಾರಿಯನ್ನು ನೇಮಿಸಿ ಅವರ ನೇತೃತ್ವದಲ್ಲಿ ಚುನಾವಣೆಗಳನ್ನು ನಡೆಸಿ ತಮ್ಮದೇ ಆದ ಒಂದು ಸಹಕಾರ ಸಂಘವನ್ನು ರಚಿಸಿಕೊಂಡಿದ್ದಾರೆ. ಸಹಕಾರ ಸಂಘಗಳ ಆಡಳಿತದಲ್ಲಿರತಕ್ಕ ನ್ಯೂನತೆಗಳನ್ನು ತೊಡೆದು ಹಾಕುವುದಕ್ಕೆ ಇದು ಬಹಳ ಯೋಗ್ಯವಾಗಿದೆ. ಸಹಕಾರೀ ತತ್ವಗಳ ಮೇರೆಗೆ ಈ ದೇಶದಲ್ಲಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನನ್ನ ಭಾವನೆ. ಯಾವುದೇ ಒಂದು ಕೆಲಸವನ್ನು ಅಥವಾ ಒಂದು ಪ್ರಯೋಗವನ್ನು ಮಾಡುವಾಗ ಅನೇಕ ತೊಂದರೆಗಳು ನ್ಯೂನತೆಗಳು ಆಗುವುದು ಉಂಟು. ಪ್ರಜಾಪ್ರಭುತ್ವ ಯಶಸ್ವಿಯಾಗ ಬೇಕಾದರೆ ಆಡಳಿತದಲ್ಲಿರತಕ್ಕ ಎಲ್ಲಾ ನ್ಯೂನತೆಗಳ ಬಗ್ಗೆ ವಿಧಾನಸಭೆಯಲ್ಲೂ, ವಿಧಾನಪರಿಷತ್ತಿನಲ್ಲೂ ಯೋಗ್ಯ ರೀತಿಯಿಂದ ವಿಚಾರ ಮಾಡಿ ತೀರ್ಮಾನ

ಗಳನ್ನು ಕೈಗೊಳ್ಳುವುದಕ್ಕಾಗಿ ನಾವು ಇಲ್ಲಿ ಕುಳಿತಿದ್ದೇವೆಂಬುದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ಇನ್ನು ಸರ್ಕಾರ ಹೀಗೆ ಮಾಡಿದೆ, ಹಾಗೆ ಮಾಡಿದೆ ಎಂಬುದಾಗಿ ಟೀಕೆ ಮಾಡುವುದಾದರೆ ಪ್ರಜಾಪ್ರಭುತ್ವ ಖಂಡಿತವಾಗಿ ಯಶಸ್ವಿಯಾಗುವುದಿಲ್ಲ. ಇದರಿಂದ ಸರ್ಕಾರಕ್ಕೆ ಕೆಲಸ ಮಾಡುವುದಕ್ಕೆ ಅನುಕೂಲವಾಗುವುದಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ.

ಇನ್ನು ಮಳೆ ಬೆಳೆಗಳ ಪರಿಸ್ಥಿತಿಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಎಲ್ಲವನ್ನೂ ಮಾಡಬಹುದು, ಆದರೆ ನಿಸರ್ಗದ ಮೇಲೆ ಸರ್ಕಾರವಾಗಲೀ, ಜನತೆಯಾಗಲೀ ಹಿಡಿತ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸಕ್ತ ಸಾಲಿನಲ್ಲಿ ಚಿತ್ರದುರ್ಗ, ತುಮಕೂರು, ಕೋಲಾರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಳೆಬೆಳೆಗಳು ಅಷ್ಟೇನೂ ತೃಪ್ತಿಕರವಾಗಿರಲಿಲ್ಲವೆಂದು ಹೇಳಿದ್ದಾರೆ. ಅವರು ಧಾರವಾಡ, ಬಿಜಾಪುರ, ಬೆಳಗಾಂ ಕೆಲವು ಭಾಗಗಳನ್ನು ಬಿಟ್ಟಿದ್ದಾರೆ. ಅವನ್ನು ಏಕೆ ಬಿಟ್ಟಿದ್ದಾರೆಯೋ ನನಗೆ ಗೊತ್ತಿಲ್ಲ.

ಇನ್ನು ಆಹಾರ ಧಾನ್ಯಗಳ ಪರಿಸ್ಥಿತಿ ಚೆನ್ನಾಗಿಲ್ಲ, ಬೆಲೆಗಳು ಏರುತ್ತಾ ಇವೆ, ಆಹಾರ ಧಾನ್ಯಗಳ ಉತ್ಪಾದನೆ ಸಾಕಷ್ಟು ಆಗುತ್ತಿಲ್ಲವೆಂಬುದಾಗಿ ಗೊತ್ತಿದ್ದು ಉತ್ಪಾದನೆಯನ್ನು ಸಾಕಷ್ಟು ಹೆಚ್ಚಿಸಬೇಕೆಂದು ಸರಕಾರದವರು ಅನೇಕ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೆ. ನೀರಾವರಿ ಯೋಜನೆಗಳು ಎಲ್ಲಿಯವರೆಗೆ ಪೂರ್ತಿಯಾಗುವುದಿಲ್ಲವೋ ಅಲ್ಲಿಯವರೆಗೂ ಆಹಾರೋತ್ಪಾದನೆ ಹೆಚ್ಚಾಗುವುದಿಲ್ಲ. ಕೇವಲ ಮಳೆ ಬೆಳೆಗಳ ಅವಲಂಬನದಿಂದ ಇದು ಸಾಧ್ಯವಾಗಲಾರದು. ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸದೆ ಇದ್ದರೆ ನಿಜವಾಗಿ ಆಹಾರ ಧಾನ್ಯಗಳ ಉತ್ಪನ್ನ ಹೆಚ್ಚಾಗುವುದಿಲ್ಲ. ಅವು ಹೆಚ್ಚಾಗಬೇಕಾದರೆ ದೊಡ್ಡ ದೊಡ್ಡ ಯೋಜನೆಗಳು ಕಾರ್ಯರೂಪದಲ್ಲಿ ಬರಬೇಕು. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿರ್ದಿಷ್ಟವಾದ ಹಣವನ್ನು ದೊಡ್ಡ ನೀರಾವರಿ ಯೋಜನೆಗಳಿಗೆ ಮತ್ತು ಚಿಕ್ಕ ನೀರಾವರಿ ಯೋಜನೆಗಳಿಗೆ ಮೀಸಲಾಗಿಡಬೇಕು. ಬೇರೆ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಸ್ವಲ್ಪಮಟ್ಟಿಗೆ ಹಣ ಕಡಿಮೆ ಮಾಡಿದರೂ ಅಡ್ಡಿ ಇಲ್ಲ. ಆದ್ದರಿಂದ ದೊಡ್ಡ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ಉಪಯೋಗ ಮಾಡಿ ಅದರಿಂದ ಪೂರಾ ಫಲ ಪಡೆಯಬೇಕೆಂಬುದು ನನ್ನ ಭಾವನೆ.

ಇನ್ನು ಮುಂಬೈಯಲ್ಲಿ ಟೆನೆನ್ಸಿ ಕಾನೂನು ಪಾಸಾಗಿದೆ. ಕಾಂಗ್ರೆಸ್ ಸರ್ಕಾರ ಬಂದನಂತರ ಅದು ರೈತರಿಗಾಗಿ ದುಡಿಯುತ್ತಿದೆ ಎಂಬುದಾಗಿ ಒಂದು ವಿಶ್ವಾಸವಿತ್ತು. ಆದರೆ ಈವರೆಗೆ ಈ ಸಭೆಯಲ್ಲಿ ಮೈಸೂರು ಟೆನೆನ್ಸಿ ಕಾನೂನು ಪಾಸಾಗಿಲ್ಲ, ನಿಜ. ಪಾರ್ಲಿಮೆಂಟಿನಲ್ಲಿ ಸಂವಿಧಾನಕ್ಕೆ ತಿದ್ದುಪಡಿಯಾಗದ ಹೊರತು ಈ ಟೆನೆನ್ಸಿ ಕಾಯಿದೆಯನ್ನು ಇಲ್ಲಿ ಜಾರಿ ಮಾಡುವುದಕ್ಕೆ ಇವರಿಗೆ ಸಾಧ್ಯವಿಲ್ಲ. ಆರೀತಿ ತಿದ್ದುಪಡಿಯಾದ ನಂತರ ಜತ್ತಿ ಸಮಿತಿಯ ವರದಿಯ ಆಧಾರದ ಮೇಲೆ ಮತ್ತು ಪ್ಲಾನಿಂಗ್ ಕಮಿಷನ್ನಿನವರ ಮಾರ್ಗದರ್ಶನವನ್ನನುಸರಿಸಿ ಈ ಮೈಸೂರು ಟೆನೆನ್ಸಿ ಕಾನೂನನ್ನು ರಾಜ್ಯದಲ್ಲಿ ಏಕರೂಪತೆಯಿಂದ ಜಾರಿಗೆ ತರಬೇಕು. ಅದನ್ನು ಈ ಸರಕಾರದವರು ಜಾಗ್ರತೆಯಾಗಿ ತರುತ್ತಾರೆಂದು ನನಗೆ ವಿಶ್ವಾಸವಿದೆ.

ಇನ್ನು ಘಟಪ್ರಭಾ, ಮಲಪ್ರಭಾ, ಅಪ್ಪರ್ ಕೃಷ್ಣಾ ಮತ್ತು ಕಾಳೀ ನದಿ ಮುಂತಾದ ದೊಡ್ಡ ದೊಡ್ಡ ಯೋಜನೆಗಳ ಕೆಲಸ ಕಾರ್ಯಗಳನ್ನು ತ್ವರಿತವಾಗಿ ಕೈಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇದನ್ನು ಮಾಡುವಾಗ ಎಷ್ಟೇ ಅಡ್ಡಿ ಅತಂಕಗಳು ಬಂದರೂ ಅವನ್ನೆಲ್ಲಾ ಸಹಿಸಿಕೊಂಡು ಜನತೆಯ ಬೆಂಬಲವನ್ನು ಹೆಚ್ಚಿಗೆ ಪಡೆದು ಈ ಕಾರ್ಯಗಳನ್ನು ಮುಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಸರ್ಕಾರ ಈ ಬಗ್ಗೆ ಯೋಗ್ಯ ರೀತಿಯಿಂದ ವಿಚಾರ ಮಾಡಿ ನಮ್ಮ ಹಕ್ಕನ್ನು ಕಳೆದುಕೊಳ್ಳದಂತೆ ಪ್ರಯತ್ನ ಮಾಡುವುದು ಬಹಳ ಯೋಗ್ಯವಾದ ಸಂಗತಿ. ಇಂತಹ ಕೆಲಸಗಳನ್ನು ಸರ್ಕಾರ ಕೈಗೊಳ್ಳುವಾಗ ಸ್ವಲ್ಪಮಟ್ಟಿಗೆ ವಿಳಂಬವಾಗುವುದೇನೋ ಸ್ವಾಭಾವಿಕ. ಕೃಷ್ಣಾ ಹಾಗೂ ಗೋದಾವರಿ ನೀರಿನ ಉಪಯೋಗದ ಸಂಬಂಧದಲ್ಲಿ ಮತ್ತು ಆ ನೀರಿನ ಹಂಚಿಕೆಯಲ್ಲಿ ನಮಗೆ ದೊರಕಬಹುದಾದಂಥ ಒಂದು ಹಕ್ಕಿನ ಪಾಲಾಂಶವನ್ನು ಪಡೆಯಲು ನಮ್ಮ ಸರ್ಕಾರದವರು ಈಗಲೇ ಒಂದು ನಿಲುವನ್ನು ಕೈಗೊಳ್ಳುವ ಪ್ರಯತ್ನ ಮಾಡಬೇಕೆಂಬುದೇ ನನ್ನ ಇಚ್ಛೆ.

ಇನ್ನು ಬಾವಿಗಳ ವಿಚಾರ. ಯಾವ ಊರಿನಲ್ಲಿ ಬಾವಿಗಳು ಇಲ್ಲವೋ ಮುಂಚೆ ಅಂತಹ ಕಡೆಗಳಲ್ಲಿ ಬಾವಿಗಳನ್ನು ತೋಡಿಸಬೇಕು. ಎಲ್ಲೆಲ್ಲಿ ಬಾವಿಗಳು ಇವೆಯೋ ಅಲ್ಲಲ್ಲಿ ಅವು ಜನತೆಗೆ ಚೆನ್ನಾಗಿ ಉಪಯೋಗವಾಗುವ ಹಾಗೆ ವ್ಯವಸ್ಥೆ ಮಾಡಬೇಕು. ಇನ್ನು ಚಿಕ್ಕ ನೀರಾವರಿ ಯೋಜನೆಗಳನ್ನು ಯೋಗ್ಯ ರೀತಿಯಿಂದ ಕಾರ್ಯಗತ ಮಾಡಬೇಕು. ಸಣ್ಣ ಮತ್ತು ದೊಡ್ಡ ಹಳ್ಳಿಗಳಿರುವ ಕಡೆಗಳಲ್ಲಿ ಸಂಚಾರ ಮಾರ್ಗಗಳನ್ನು ನೋಡುವಾಗ ನ್ಯಾಷನಲ್ ಹೈವೇಸ್ ಆಗಲೇಬೇಕೆಂದು ನಾನು ಹೇಳುತ್ತೇನೆ. ಸಣ್ಣ ರಸ್ತೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅಲಕ್ಷ್ಯ ಮಾಡಿದರೆ ಸ್ಥಳದಿಂದ ಸ್ಥಳಕೆ

(ಶ್ರೀ ಎಸ್.ವಿ. ಅಗ್ನಿಹೋತ್ರಿ)

ಮಾಲುಗಳನ್ನು ತರುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಬಾಬಿಗೆ ಪ್ರಥಮಪ್ರಾಶಸ್ತ್ಯ ಕೊಟ್ಟು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಣ್ಣಸಣ್ಣ ಸಂಚಾರ ಮಾರ್ಗಗಳನ್ನು ಕೂಡಲೇ ಮಾಡ ಬೇಕೆಂದು ನಾನು ಸರ್ಕಾರದವರಿಗೆ ಸೂಚಿಸ ಬಯಸುತ್ತೇನೆ.

ಇನ್ನು ಬಂದರಿನ ವಿಚಾರವಾಗಿ, ನಮ್ಮ ರಾಜ್ಯಪಾಲರು ಕರ್ಣಾಟಕದಲ್ಲಿ ಇದು ಬಹಳ ಅಭಿ ವೃದ್ಧಿಯಾಗ ಬೇಕಾಗಿದೆ ಎಂದು ಪ್ರಸ್ತಾಪಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಮಂಗಳೂರು ಬಂದರನ್ನೂ ಕಾರವಾರ ಬಂದರನ್ನೂ ಅಭಿವೃದ್ಧಿಗೊಳಿಸಲಾಗುತ್ತಿದೆಯೆಂದು ಹೇಳಿದ್ದಾರೆ. ಆದರೂ ನಮ್ಮ ರಾಜ್ಯ ದಲ್ಲಿ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮಲ್ಪೆ ಮತ್ತು ಭಟ್ಕಳ ಬಂದರುಗಳನ್ನು ಸಹಾಯಕ ಬಂದರುಗಳಾಗಿ ಮತ್ತಷ್ಟು ಅಭಿವೃದ್ಧಿಗೊಳಿಸುವುದು ಯೋಗ್ಯವಾದುದಾಗಿದೆ. ಆದರೆ ಕಾರವಾರ ಬಂದರನ್ನು ಜಾಗ್ರತೆಯಾಗಿ ಪ್ರಾರಂಭಿಸಿದರೆ ಯಥಾಪ್ರಕಾರ ನಮಗೆ ಹೆಚ್ಚಿನ ಅನುಕೂಲ ದೊರೆ ಯುವುದರಿಂದ ಆ ಕಾರ್ಯವನ್ನು ಸರ್ಕಾರದವರು ತ್ವರಿತವಾಗಿ ಮಾಡಬೇಕೆಂದು ನಾನು ಸೂಚಿಸ ಬಯಸುತ್ತೇನೆ.

ಇನ್ನು ಕೈಗಾರಿಕೆಗಳ ವಿಷಯವಾಗಿ ಹೇಳುವುದಾದರೆ ನಮ್ಮ ಮೈಸೂರು ದೇಶದಲ್ಲಿ ಕೈಗಾರಿಕೆ ಗಳು ಮುಂದೆ ಬರಬೇಕು, ಹೆಚ್ಚು ಬೆಳವಣಿಗೆಯಾಗಬೇಕು. ಒಕ್ಕಲುತನಕ್ಕೆ ಅನುಗುಣವಾಗಿ ಕೈಗಾರಿಕೆಗಳೂ ಬೆಳೆದರೆ ಆಗ ನಮ್ಮ ಜನಗಳಿಗೆ ಯೋಗ್ಯವಾದ ಕೆಲಸಗಳು ದೊರಕುತ್ತವೆ. ಆದರೆ ನಮ್ಮ ದೇಶದಲ್ಲಿ ಅನೇಕ ಬಾರಿ ಅನೇಕರು ಬೇರೆ ಕಡೆಯವರು ಕೈಗಾರಿಕೆಯನ್ನು ಸ್ಥಾಪನೆ ಮಾಡು ತ್ತೇವೆಂದು ಮುಂದೆ ಬಂದರೂ ಅವರಿಗೆ ಬೇಕಾದ ಕಚ್ಚಾ ಮಾಲುಗಳನ್ನು ಪೂರೈಸದೆ, ಅವರಿಗೆ ಕಚ್ಚಾ ಮಾಲುಗಳು ಸಿಕ್ಕದೆ ಇರುವುದರಿಂದ ಅವರು ಬೇರೆ ಪ್ರಾಂತಗಳಿಗೆ ಹೋಗಿ ಅಲ್ಲಿ ಅವರು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಸಂದರ್ಭ ಬರುತ್ತದೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಯೋಗ್ಯ ರೀತಿಯಿಂದ ವಿಚಾರ ಮಾಡಿ ಅವರಿಗೆ ಕಚ್ಚಾ ಮಾಲುಗಳನ್ನು ಒದಗಿಸಿಕೊಟ್ಟು ಅವರಿಗೆ ಯಾವ ರೀತಿಯ ಸೌಲಭ್ಯಗಳು ಬೇಕೋ ಅವುಗಳನ್ನು ಒದಗಿಸಿಕೊಟ್ಟು ಕೈಗಾರಿಕೆಗಳು ನಮ್ಮ ಪ್ರಾಂತವನ್ನು ಬಿಟ್ಟು ಹೋಗದ ಹಾಗೆ ನೋಡಿಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಶಿಕ್ಷಣದ ವಿಷಯವಾಗಿ ಇದುವರೆಗೂ ಸರ್ಕಾರದವರು ಎಲ್ಲಾ ರೀತಿಯ ಸವಲತ್ತು ಗಳನ್ನೂ ಪ್ರಾಥಮಿಕ ಶಿಕ್ಷಣಕ್ಕೆ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಕೊಡುತ್ತಿರತಕ್ಕದ್ದು ಬಹಳ ಶ್ಲಾಘ ನೀಯವಾಗಿದೆ. ಈ ಸಂದರ್ಭದಲ್ಲಿ ಅವರಿಗೆ ತ್ರಿವಿಧ ಸೌಲಭ್ಯವನ್ನೂ ಸಹ ಒದಗಿಸಿ ಕೊಟ್ಟಿದ್ದು ಒಳ್ಳೆಯ ಕೆಲಸ. ಆದರೆ ಹಳೆಯ ಮೈಸೂರು ಸಂಸ್ಥಾನದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲ್ಪಟ್ಟಿದೆ. ಆದರೆ ಮುಂಬೈ ಪ್ರಾಂತದಲ್ಲಿ ಆ ಶಿಕ್ಷಕ ರನ್ನು ಬೋರ್ಡ್ ನೌಕರರೆಂದು ಪರಿಗಣಿಸಲ್ಪಟ್ಟಿದೆ. ಇದು ಯೋಗ್ಯವಲ್ಲ. ಸಂಸ್ಥಾನಕ್ಕೆಲ್ಲಾ ಏಕ ರೂಪವಾದ ಕಾಯಿದೆಗಳನ್ನು ತರುವಾಗ ಸಂಸ್ಥಾನದ ಎಲ್ಲಾ ಶಿಕ್ಷಕರನ್ನೂ ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಇಲ್ಲದಿದ್ದರೆ ಎಲ್ಲಾ ಶಿಕ್ಷಕರನ್ನೂ ಬೋರ್ಡ್ ನೌಕರರೆಂದು ಪರಿಗಣಿಸಬೇಕು. ಆ ರೀತಿ ಒಂದು ನಿರ್ಣಯ ಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚಿಸಿ ನನಗೆ ಮಾತನಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನ ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ರಾಜ್ಯಪಾಲರು ಈ ಸದನದ ಚರಿತ್ರೆಯಲ್ಲೇ ಮೊದಲನೇ ಬಾರಿ ತಮ್ಮ ಭಾಷಣವನ್ನು ಕನ್ನಡದಲ್ಲಿ ಮಾಡಿ ಒಂದು ಸತ್ ಸಂಪ್ರ ದಾಯವನ್ನು ಹಾಕಿ ಕೊಟ್ಟಿದ್ದಾರೆ. ಅಲ್ಲದೆ ಕನ್ನಡ ನಾಡು ಮತ್ತು ಕನ್ನಡ ನುಡಿಗೆ ಗೌರವ, ಆದರ ಮತ್ತು ಅಭಿಮಾನವನ್ನು ತೋರಿಸಿದ್ದಾರೆ. ಅದಕ್ಕಾಗಿ ನಾನು ನನ್ನ ಮತ್ತು ಈ ಸದನದ ಹಾಗೂ ಕನ್ನಡ ನಾಡಿನ ಎಲ್ಲಾ ಜನರ ಪರವಾಗಿ ಕೃತಜ್ಞತಾಪೂರ್ವಕವಾಗಿ ಅಭಿನಂದನೆಗಳನ್ನು ನಮ್ಮ ಮಾನ್ಯ ರಾಜ್ಯಪಾಲರಿಗೆ ಅರ್ಪಿಸಲು ಇಚ್ಛಿಸುತ್ತೇನೆ. ಒಂದು ವಿಷಯವನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬಯಸುತ್ತೇನೆ. ರಾಜ್ಯಪಾಲರು ಕನ್ನಡೇತರರಾಗಿದ್ದರೆ ಆಗ ಅವರು ಈ ಸದನದಲ್ಲಿ ಯಾವ ಭಾಷೆಯಲ್ಲಿ ಮಾತನಾಡಬಹುದು ಎನ್ನತಕ್ಕ ಪ್ರಶ್ನೆ. ಅವರು ಹಿಂದಿ ಬರತಕ್ಕವರಾಗಿ ದ್ದರೆ ಅವರು ಹಿಂದಿಯಲ್ಲಿ ಭಾಷಣ ಮಾಡುತ್ತಾರೆ. ಅದನ್ನು ತಕ್ಷಣ ಕನ್ನಡದಲ್ಲಿ ಭಾಷಾಂತರ ಮಾಡುತ್ತಾರೆ. ಹಿಂದಿ ಬಾರದೆ ಇರುವವರು ಇದ್ದರೆ ಅವರು ತಮ್ಮದೇ ಆದ ಭಾರತೀಯ ಭಾಷೆ ಯಲ್ಲಿ, ಅವರ ಮಾತೃ ಭಾಷೆಯಲ್ಲಿ ಭಾಷಣವನ್ನು ಮಾಡುತ್ತಾರೆ. ಅದನ್ನು ಕನ್ನಡಕ್ಕೆ ತಕ್ಷಣ ಭಾಷಾಂತರ ಮಾಡತಕ್ಕ ವ್ಯವಸ್ಥೆಯನ್ನು ಮಾಡಬಹುದು. ಆದ್ದರಿಂದ ನಮ್ಮ ರಾಜ್ಯಪಾಲರು ಈ ಸದನದಲ್ಲಿ ಕನ್ನಡದಲ್ಲಿ ಭಾಷಣ ಮಾಡಿದ ಒಂದು ಕಾರಣಕ್ಕಾಗಿಯೇ ಅವರು ಈ ರಾಜ್ಯದಲ್ಲಿ ರಾಜ್ಯ ಪಾಲರಾಗಿ ಮುಂದುವರಿಯಬೇಕು ಎಂದು ನಾನು ಒಪ್ಪಿಕೊಂಡವನಲ್ಲ. ನಮ್ಮ ಮಾನ್ಯ ಸದಸ್ಯ

ರಾದ ಶ್ರೀ ಶಿವಪ್ಪನವರು ಮತ್ತು ಶ್ರೀ ಎಸ್. ಎಂ. ಕೃಷ್ಣಾ ಅವರು, ನಮ್ಮ ರಾಜ್ಯಪಾಲರ ಭಾಷಣ ಸಪ್ಪೆಯಾಗಿತ್ತು, ನೀರಸವಾಗಿತ್ತು ಎಂದು ಹೇಳಿದ್ದಾರೆ. ಮತ್ತು Inertia, despondency, despair ಆಗಿತ್ತು ಎಂದು ಹೇಳಿದ್ದಾರೆ. ಈ ಭಾಷಣವನ್ನು ನೋಡುವುದಾದರೆ ಶ್ರೀಮಾನ್ ಶಿವಪ್ಪ ನವರು ಹೇಳಿದಹಾಗೆ, ಪ್ರತಿವರ್ಷವೂ ಈ ಭಾಷಣದ ಉದ್ದವನ್ನು ಬೆಳೆಸಿಕೊಂಡು ಹೋಗುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ರಾಜ್ಯಪಾಲರ ಭಾಷಣವು ಒಂದು ದೊಡ್ಡ ಕರಟು ಪುರಾಣ ಇದ್ದ ಹಾಗೆ ಇದೆ. ನಾನು ಈ ಭಾಷಣವನ್ನು ಕುಳಿತು ಓದಿ ನೋಡಿದೆನು. ಭುವನೇಶ್ವರದ ಬೆಳಕು ಏನಾದರೂ ಇದರಮೇಲೆ ಬಿದ್ದಿದೆಯೋ ಏನೋ ಎಂದು ಕಾಣುತ್ತದೆ. ಸಮಾಜವಾದದ ಕೃತಿ ರಾಜ್ಯ ಪಾಲರ ಭಾಷಣದಲ್ಲಿ ಎಲ್ಲೂ ನನಗೆ ಕಂಡುಬರಲಿಲ್ಲ. ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದಮೇಲೆ ಒಂದು ದೊಡ್ಡ ಅಭ್ಯಾಸ ಏನಾಗಿದೆ ಎಂದರೆ, ಪ್ರತಿ 5 ವರ್ಷಕೊಂದು ಸಲ ಗುರಿಯನ್ನು ಬದಲಾಯಿ ಸುವುದು ಮತ್ತು ಅದೇ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗುವುದು ಈ ರೀತಿ ಮಾಡುತ್ತಿದ್ದಾರೆ. ಈ ಕಾರ್ಯಕ್ರಮವನ್ನು ಬದಲಾವಣೆ ಮಾಡದೆ ಕೇವಲ ತನ್ನ ಗುರಿಯನ್ನು ಕಾಲಾಕಾಲಕ್ಕೆ ಬದಲಾಯಿಸುವುದರಿಂದ ಯಾವ ಸಾರ್ಥಕತೆಯೂ ಆಗುವುದಿಲ್ಲ. ಅದಕ್ಕೆ ಈ ಭಾಷಣವೇ ಸಾಕ್ಷಿಯಾಗಿದೆ ಎಂದು ಹೇಳಬಹುದು. ಈಗ ನಮ್ಮ ಮುಂದೆ ಕೆಲವು ಭಾವನಾತ್ಮಕ ವಾದ ಸಮಸ್ಯೆಗಳಿವೆ. ಅವು ಏನೆಂದರೆ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡಬೇಕು ಎನ್ನತಕ್ಕ ಒಂದು ಆಶೆ ಇದೆ. ಇದರ ಬಗ್ಗೆ ನಿರ್ಣಯ ಕೂಡ ಈ ಸಭೆಯಲ್ಲಿ ಬಂದು ಚರ್ಚೆ ಆಯಿತು. ಅದನ್ನು ಮತಕ್ಕೆ ಹಾಕುವ ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರಿ ನಿಜಲಿಂಗಪ್ಪ ನವರು ಮಧ್ಯೇ ಪ್ರವೇಶಿಸಿ ಆ ವಿಷಯವನ್ನು ನನಗೆ ಬಿಡಿ, ಅನಂತರ ಈ ಕೆಲಸವನ್ನು ನಾನು ಮಾಡುತ್ತೇನೆ ಎಂದು ಹೇಳಿದರು. ಆದರೆ ಇದುವರೆಗೂ ಈ ಪ್ರಶ್ನೆ ಸರ್ಕಾರದ ಮುಂದೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಶ್ರೀಮಾನ್ ದೊಡ್ಡಮೇಟಿಯವರೂ ಬಹುಶಃ ಈ ಒಂದು ಬೇಡಿಕೆಯನ್ನು ಕೈಬಿಟ್ಟಿದ್ದಾರೋ ಏನೋ ನನಗೆ ಅದು ಗೊತ್ತಿಲ್ಲ. ಹಾಗೆಯೇ ನಮ್ಮ ಕನ್ನಡ ರಾಜ್ಯಕ್ಕೆ ಸೇರಲೇ ಬೇಕಾದಂತಹ ಕನ್ನಡ ಪ್ರದೇಶಗಳಾದ ಕಾಸರಗೋಡು, ಸೊಲ್ಲಾಪುರ ಮುಂತಾದ ಪ್ರದೇಶಗಳನ್ನು ಈ ರಾಜ್ಯಕ್ಕೆ ಸೇರಿಸಿಕೊಳ್ಳುವ ಬಗ್ಗೆ ರಾಜ್ಯ ಸರ್ಕಾರದವರು ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಇತ್ತೀಚೆಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಗೋವಾದ ಬಗ್ಗೆ ಮಾತನಾಡುತ್ತಾ ಅದು ನಮ್ಮ ರಾಜ್ಯಕ್ಕೆ ಸೇರತಕ್ಕಂಥ ಪ್ರದೇಶವಲ್ಲ ಎನ್ನುವ ಅರ್ಥದಲ್ಲಿ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಮಾನ್ಯ ಮರಾಠಿ ಸ್ನೇಹಿತರು ನಮ್ಮನ್ನು ಕೇಳುತ್ತಾರೆ, ನಮ್ಮನ್ನು ಮುಂಬೈ ರಾಜ್ಯಕ್ಕೆ ಬಿಟ್ಟು ಕೊಡಿ ಎಂದು. ಈ ಪ್ರಶ್ನೆಯನ್ನು ಯಾವ ರೀತಿ ಬಗೆಹರಿಸಬೇಕು ಎನ್ನುವ ಬಗ್ಗೆ ಹಿಂದೆ ಮುಂಬೈ ಮತ್ತು ಮೈಸೂರು ರಾಜ್ಯದಲ್ಲಿ ಎರಡು ಸಮಿತಿಗಳನ್ನು ನೇಮಿಸಿದ್ದರು. ನಮ್ಮ ಮೈಸೂರಿನಲ್ಲಿ ನೇಮಿಸಿದ್ದ ಸಮಿತಿಗೆ ಶ್ರೀಮಾನ್ ಚನ್ನಯ್ಯನವರು ಅಧ್ಯಕ್ಷರಾಗಿದ್ದರು. ಆ ಬಗ್ಗೆ ಅವರು ಸರ್ಕಾ ರಕ್ಕೆ ವರದಿಯನ್ನು ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಸಮಿತಿಯು ವಿಸರ್ಜನೆ ಆಯಿತೋ ಏನೋ ಗೊತ್ತಿಲ್ಲ. ಎಷ್ಟು ವರ್ಷಗಳವರೆಗೆ ನಮ್ಮ ಮರಾಠಿ ಸ್ನೇಹಿತರು ಈ ಸಭೆಯಲ್ಲಿ ಕುಳಿತುಕೊಂಡಿರಬೇಕೋ ಈ ಸಮಸ್ಯೆಗೆ ಪರಿಹಾರ ಇದೆಯೇ, ಎಷ್ಟು ವರ್ಷಗಳ ಕಾಲ ಇದೇ ರೀತಿ ಈ ಸಮಸ್ಯೆಯನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ ಎನ್ನತಕ್ಕ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಉಲ್ಲೇಖ ಮಾಡಿದಹಾಗೆ ಕಾಣಲಿಲ್ಲ. ಇಂಥ ಕೆಲವು ಸಮಸ್ಯೆಗಳಿವೆ ಎನ್ನುವು ದನ್ನೂ ಕೂಡ ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಇದು ತುಂಬಾ ವಿಶಾದಕರವಾದ ವಿಷಯ ಎಂದು ನಾನು ಹೇಳುತ್ತೇನೆ.

11-00 A.M.

ಇನ್ನು ಕನ್ನಡ ರಾಜ್ಯಭಾಷೆಯಾಗಬೇಕು, ಕನ್ನಡ ವ್ಯವಹಾರ ಭಾಷೆಯಾಗಬೇಕು, ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು ಎನ್ನುವ ಒಂದು ಸಿದ್ಧಾಂತವನ್ನು ಸಾಮಾನ್ಯವಾಗಿ ನಾವೆಲ್ಲರೂ ಒಪ್ಪಿ ಕೊಂಡಿದ್ದೇವೆ. ಅಲ್ಲದೆ ಕನ್ನಡ ರಾಜ್ಯಭಾಷೆ ಆಗಬೇಕು ಎನ್ನುವುದರ ಬಗ್ಗೆ ನಾವು ಒಂದು ಮಸೂದೆಯನ್ನು ಕೂಡ ಇಲ್ಲಿ ಅಂಗೀಕಾರ ಮಾಡಿದ್ದೇವೆ. ಸರ್ಕಾರ ಮಾತ್ರ ವ್ಯವಹಾರದಲ್ಲಿ, ತನ್ನ ಧೋರಣೆಯಲ್ಲಿ, ನೀತಿಯಲ್ಲಿ, ಇನ್ನೂ ಇಂಗ್ಲೀಷಿಗೆ ಗಂಟು ಬಿದ್ದು ಕನ್ನಡದ ಅಭಿವೃದ್ಧಿಗಾಗಲೀ ಕನ್ನಡ ಭಾಷೆಯನ್ನು ವ್ಯವಹಾರಿಕ ಭಾಷೆಯನ್ನಾಗಿ ಮಾಡುವುದಕ್ಕೆ ಬೇಕಾದ ಪೂರ್ವಭಾವಿ ಸಿದ್ಧತೆ ಗಳನ್ನಾಗಲಿ, ಮಾಡಿಕೊಳ್ಳುತ್ತ ಇಲ್ಲ ಎನ್ನುವುದನ್ನು ನಾವು ನೋಡಬಹುದಾಗಿದೆ. ಇದಕ್ಕೆ ಸರ್ಕಾ ರದವರು ಏನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೋ ಅವನ್ನು ಆದಷ್ಟು ಬೇಗ ಕೈಕೊಳ್ಳಬೇಕು. ಈಗ ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡು ಇಂಥ ವಿಕೇಂದ್ರೀಕೃತವಾದ ಸಂಸ್ಥೆಗಳಿಗೆ— ನಾನು ಬಹಳ ವಿಷಾದದಿಂದ ಹೇಳುತ್ತೇನೆ—ಇವತ್ತಿಗೂ ಇಂಗ್ಲೀಷ್ ಭಾಷೆಯಲ್ಲಿಯೇ ಸರ್ಕ್ಯುಲರ್ ಗಳನ್ನೂ ಕಾಗದಗಳನ್ನೂ ಬರೆಯುತ್ತಾರೆ. ಇದು ತೀರ ಅವಮಾನಕರ. ಎಲ್ಲಿಯತನಕ ಈ

(ಶ್ರೀ ಎಸ್. ಗೋಪಾಲ ಗೌಡ)

ಸಾಮಂತಶಾಹಿ ಭಾಷೆಯಲ್ಲಿ ಜನತಂತ್ರವನ್ನು ನಡೆಸಿಕೊಂಡು ಹೋಗುತ್ತಾರೆಯೋ ಗೊತ್ತಿಲ್ಲ. ಶ್ರೀಮಾನ್ ಪಿ. ಕೋದಂಡರಾಯರಂಥವರು, ಬ್ರಿಟಿಷ್ ಸಾಮ್ರಾಜ್ಯದಲ್ಲಿ ಬೆಳೆದುಬಂದವರು, ಏನೋ ಒಂದು ಕನಸನ್ನು ಕಾಣುತ್ತ ಇರಬಹುದು, ಈ ದೇಶದಲ್ಲಿ ಇಂಗ್ಲೀಷ್ ಭಾಷೆ ಶಾಶ್ವತವಾಗಿ ಉಳಿಯುತ್ತದೆ ಎಂದು. ಅದು ಅವರಿಗೆ ಕುರುಡನಿಗೆ ಇರತಕ್ಕ ಒಂದು ಊರುಗೋಲು ಇದ್ದಹಾಗೆ. ಅದನ್ನು ಕಿತ್ತುಕೊಂಡರೆ ಅವರ ವ್ಯವಹಾರವೆಲ್ಲ ನಿಂತುಹೋಗುತ್ತದೆ. ಆದುದರಿಂದಲೇ ಅವರು ಆ ಭಾಷೆಯಲ್ಲಿ ವ್ಯವಹಾರವನ್ನು ನಡೆಸಿಕೊಂಡು ಹೋಗುವುದಕ್ಕೆ ಪ್ರಯತ್ನಪಡುತ್ತಾರೆ. ಕೋಟ್ಯಾನುಕೋಟಿ ಜನರ ವ್ಯವಹಾರ, ಅವರ ವಿದ್ಯಾಭ್ಯಾಸ, ಅವರಿಗೆ ನಾವು ವಿಷಯವನ್ನು ತಿಳಿಸತಕ್ಕದ್ದು ಯಾವ ಭಾಷೆಯಲ್ಲಿ ಎನ್ನುವುದರ ಬಗ್ಗೆ ಬಹುಶಃ ಇಲ್ಲಿರತಕ್ಕವರು ಯಾರೂ ಭಿನ್ನಾಭಿಪ್ರಾಯವನ್ನು ಹೊಂದಿಲ್ಲ. ಅದು ಮಾತ್ರ ಮಾತೃಭಾಷೆಯಲ್ಲಿಯೇ ಆಗಬೇಕು, ಪ್ರಾದೇಶಿಕ ಭಾಷೆಯಲ್ಲಿಯೆ ಆಗಬೇಕು. ಅದರ ಬಗ್ಗೆ ಮೈಸೂರು ಸರ್ಕಾರ ತಡಮಾಡದೆ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಬೇಕು. ಅದಕ್ಕೆ ಬೇಕಾದ ಭಾಷಾಕೋಶ, ಟೈಪ್‌ರೈಟರ್ ಹೀಗೆ ಏನೇನು ಸೌಕರ್ಯಗಳು ಬೇಕೋ, ಆ ದಿಕ್ಕಿನಲ್ಲಿ ಏನೇನು ಸೌಲಭ್ಯಗಳು ಬೇಕೋ, ಅವನ್ನೆಲ್ಲ ಒದಗಿಸಬೇಕು. ಜೊತೆಗೆ ಸಾಧ್ಯವಾದಮಟ್ಟಿಗೂ ಹಿಂದಿಯ ಬೆಳವಣಿಗೆಗೆ ಉತ್ತೇಜನವನ್ನೂ, ಅದನ್ನು ಕಲಿಯುವುದಕ್ಕೆ ವ್ಯವಸ್ಥೆಯನ್ನೂ ಮಾಡಬೇಕು. ಇವತ್ತು ಯಾರೋ ಕೆಲವರು ಹಿಂದಿಯನ್ನು ವಿರೋಧಿಸಬಹುದು, ಮದ್ರಾಸಿನಲ್ಲಿ ಹಿಂದಿ ವಿರೋಧ ಚಳವಳಿ ನಡೆದಿರಬಹುದು. ಹಿಂದಿ ರಾಷ್ಟ್ರಭಾಷೆಯಾಗಬೇಕು ಎನ್ನುವ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇರುವುದಕ್ಕೆ ಸಾಧ್ಯವೇ ಇಲ್ಲ. ಹಿಂದಿ ಬಿಟ್ಟು ಬೇರೆ ಭಾಷೆ ರಾಷ್ಟ್ರಭಾಷೆಯಾಗುವುದಕ್ಕೆ ಸಾಧ್ಯವೂ ಇಲ್ಲ. ಈ ದಿಕ್ಕಿನಲ್ಲಿ ಮೈಸೂರು ದೇಶ ಸ್ವಲ್ಪ ದೂರದೃಷ್ಟಿಯಿಂದ, ಜಾಗ್ರತೆಯಿಂದ ಕೆಲಸಕಾರ್ಯಗಳನ್ನು ಆರಂಭಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ, ಸ್ವಾಮಿ.

ಇನ್ನು ನೀರಾವರಿ ಯೋಜನೆಗಳ ಬಗ್ಗೆ ಮೈಸೂರು ಸರ್ಕಾರ ತನ್ನ ವಿಳಂಬ ನೀತಿಯನ್ನು ಅನುಸರಿಸಿಕೊಂಡಿರುವುದಲ್ಲದೆ, ಕೃಷ್ಣ ಗೋದಾವರಿ ನೀರನ್ನು ಪಡೆದುಕೊಳ್ಳುವ ವಿಷಯದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಒಮ್ಮೆ ಶ್ರೀಮಾನ್ ಜತ್ತಿಯವರು ಅಪ್ಪಣೆ ಕೊಡಿಸಿದರು ; ಕೇಂದ್ರದ ನೀರಾವರಿ ಮಂತ್ರಿಗಳು ಆಂಧ್ರದವರಾದರೂ ನಮಗೆ ನ್ಯಾಯವಾದುದನ್ನು ಕೊಟ್ಟೇ ಕೊಡುತ್ತಾರೆ, ಪಕ್ಷಪಾತ ಮಾಡುವುದಿಲ್ಲ ಎಂದು. ಆದರೆ ಈಗ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರಿಗೂ ಲೋಕೋಪಯೋಗಿ ಖಾತೆಯನ್ನು ಹೊಂದಿರತಕ್ಕ ಮಂತ್ರಿಗಳಿಗೂ ಭಿನ್ನಾಭಿಪ್ರಾಯ ಎದ್ದು ಕಾಣುತ್ತಿದೆ. ಆಲಮಟ್ಟಿಯಲ್ಲಿ ಮೊದಲು ಕೃಷ್ಣ ನದಿಗೆ ಅಣೆಕಟ್ಟನ್ನು ಕಟ್ಟುತ್ತೇವೆ ಎಂದು ಬಿಜಾಪುರದಲ್ಲಿ ಹೋದಾಗ ಮುಖ್ಯ ಮಂತ್ರಿಗಳು ಹೇಳುತ್ತಾರೆ. ಲೋಕೋಪಯೋಗಿ ಶಾಖೆ ಮಂತ್ರಿಗಳು ಗುಲ್ಬರ್ಗದವರು. ಅವರು ನಾರಾಯಣಪುರದಲ್ಲಿ ಕಟ್ಟಬೇಕು ಎಂದು ಪ್ರಯತ್ನ ಮಾಡುತ್ತಿದಾರೆಂದು ಕಾಣುತ್ತದೆ. ಎರಡು ಕಡೆಗಳಲ್ಲಿಯೂ ಏಕ ಕಾಲದಲ್ಲಿ ಅಡಿಗಲ್ಲನ್ನು ಹಾಕಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದೂ ಹೇಳುತ್ತಾರೆ. ನೂರು ಕೋಟಿ ರೂಪಾಯಿಗಿಂತ ಹೆಚ್ಚು ವೆಚ್ಚ ಮಾಡತಕ್ಕ ದೊಡ್ಡ ಯೋಜನೆಯ ಬಗ್ಗೆ ಇಷ್ಟು ತಾತ್ಸಾರ ಮನೋಭಾವನೆಯನ್ನು ಹೊಂದಿದ್ದರೆ ಈ ಯೋಜನೆ ಎಷ್ಟರ ಮಟ್ಟಿಗೆ ಸಾರ್ಥಕವಾದೀತು ಎನ್ನುವುದನ್ನು ಯೋಚನೆ ಮಾಡಬೇಕು. ನಾರಾಯಣಪುರದಲ್ಲಿ ಆಗಬೇಕು ಎನ್ನುವುದರ ಬಗ್ಗೆ ಪ್ಲಾನಿಂಗ್ ಕಮಿಷನ್‌ನವರ ಅಭಿಪ್ರಾಯವೂ ಇದ್ದಹಾಗೆ ಕಾಣುತ್ತದೆ. ನನಗೆ ಗೊತ್ತಿದ್ದಪ್ರಕಾರ ನಾರಾಯಣಪುರದಲ್ಲಿ ಅಣೆಕಟ್ಟನ್ನು ಕಟ್ಟುವುದರಿಂದ ಮುಂದೆ ಹೆಚ್ಚು ನೀರು ದೊರೆತು ಆಲಂಪುರ ಮತ್ತು ಗದ್ವಾಲಕ್ಕೆ ಸೇರಿದ ಅನೇಕ ಸಹಸ್ರಾರು ಎಕರೆಗಳಿಗೆ ನೀರು ಹರಿಯುತ್ತದೆ. ಯಾವತ್ತೂ ಕ್ಷಾಮ ಡಾಮರಗಳಿಗೆ ತುತ್ತಾಗತಕ್ಕ ಬಿಜಾಪುರದ ಭಾಗಗಳಿಗೆ ನೀರು ಕಡಮೆಯಾಗುತ್ತದೆ. ನಮಗೆ ಈಗಾಗಲೇ ಕೇಂದ್ರ ಸರ್ಕಾರದವರು ಏನು ನೀರಿನ ಹಂಚಿಕೆಯನ್ನು ಮಾಡಿದ್ದಾರೆಯೋ ಅದರಲ್ಲಿ ಬಹುಭಾಗ ನೀರು ಪುನಃ ಆಂಧ್ರಕ್ಕೆ ಹೋಗುವುದರಲ್ಲಿದೆ. ಮಹಾರಾಷ್ಟ್ರದವರಿಗೆ ಕೂಡ ಮತ್ತಷ್ಟು ನೀರನ್ನು ಕೊಡುತ್ತೇವೆ ಎಂದು ಕೇಂದ್ರದವರು ಒಪ್ಪಿಕೊಂಡಿದ್ದಾರೆ. ನಮಗೆ ಯಾವ ಯಾವ ನದಿಗಳಿಂದ ಎಷ್ಟೆಷ್ಟು ನೀರು ಬರುತ್ತದೆಯೋ ಅದನ್ನು ಕೊಟ್ಟುಬಿಡಿ ಎಂದು ನೀವು ಕೇಳುತ್ತಿದ್ದೀರಿ. ಆದರೆ, ನಿಮ್ಮ ಹತ್ತಿರ ಯಾವ ಯಾವ ಯೋಜನೆಗಳು ಸಿದ್ಧವಾಗಿವೆ, ಅದಕ್ಕೆ ಬೇಕಾದ ಹಣವಿದೆಯೇ ಸಿಬ್ಬಂದಿ ಇದೆಯೇ ದಕ್ಷತೆ ಇದೆಯೇ ? ಇದ್ದರೆ ಆ ಪ್ರಕಾರ ಕೆಲಸವನ್ನು ಪ್ರಾರಂಭಮಾಡಿ, ಕ್ಲಿಯರೆನ್ಸ್ ಕೊಡುತ್ತೇವೆ ಎಂದು ಅವರು ಹೇಳುತ್ತಾರೆ. ನೀರಿನ ಹಂಚಿಕೆಯ ವಿಷಯದಲ್ಲಿ ಅರ್ಬಿಟ್ರೇಷನ್‌ಗೆ ಕೇಳಿ ಎಂದರೆ ಆ ರೀತಿ ಕೇಳುವುದಕ್ಕೆ ತಯಾರಿಲ್ಲ. ಶ್ರೀಮಾನ್ ಶಿವಪ್ಪನವರು ಈ ವಿಚಾರದಲ್ಲಿ ಬಹಳ ಚೆನ್ನಾಗಿ ಹೇಳಿದರು. ಶರಾವತಿಯಲ್ಲಿ ನಡೆದ ವಿಚಾರಗಳಿಂದ

ಮುಖ ಉಳಿಸಿಕೊಳ್ಳಬೇಕಾಗಿತ್ತು. ಅದಕ್ಕೋಸ್ಕರ ಕೇಂದ್ರದಿಂದ ರಾಯರು ಬಂದಾಗ, ಅವರನ್ನು ಶರಾವತಿಗೆ ಕರೆದುಕೊಂಡು ಹೋಗಿದ್ದು ಅದರ ಬಗ್ಗೆ ಅವರಿಂದ ಒಂದು ಸರ್ಟಿಫಿಕೇಟನ್ನು ಪಡೆದು ಕೊಂಡಿರಿ. ಆದರೆ ಕೃಷ್ಣಾ ಗೋದಾವರಿ ನೀರಿನ ಬಗ್ಗೆಯಾಗಲೀ ನೀರಾವರಿ ಯೋಜನೆಗಳ ಬಗ್ಗೆ ಯಾಗಲೀ ಮಾತನಾಡಿ ನಿಮ್ಮ ಬೇಡಿಕೆಯನ್ನು ಅವರ ಮುಂದೆ ಇಟ್ಟು ಅವರನ್ನು ಒಪ್ಪಿಸುವುದಕ್ಕೆ ಸಾಧ್ಯವಾಗಲಿಲ್ಲ. ಇಂಥ ರೀತಿ ನೀತಿಯನ್ನು ತಾವು ಅನುಸರಿಸಿಕೊಂಡು ಹೋದರೆ ಎಂಥ ದೊಡ್ಡ ಅಪರಾಧವನ್ನು ತಾವು ರಾಜ್ಯಕ್ಕೆ ಮಾಡುತ್ತಿದ್ದೀರಿ, ಮುಂದೆ ಎಂದಾದರೂ ಅದನ್ನು ತಿದ್ದಿಕೊಳ್ಳುವು ದಕ್ಕೆ ಸಾಧ್ಯವೇ ಎನ್ನುವುದನ್ನು ಸರ್ಕಾರ ತುಂಬ ಗಂಭೀರವಾದ ರೀತಿಯಲ್ಲಿ ವಿಚಾರಮಾಡಬೇಕು. ಇದು ಸಣ್ಣ ವಿಷಯವಲ್ಲ. ಶಾಶ್ವತವಾಗಿ ಎಷ್ಟೋ ತಲೆಮಾರುಗಳವರೆಗೆ ಬರತಕ್ಕ ಪ್ರಶ್ನೆ. ಆದುದ ರಿಂದ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಕೇಂದ್ರದವರ ಜೊತೆಯಲ್ಲಿ ತಾವು ಕುಳಿತುಕೊಂಡು, ಸಂಬಂಧಪಟ್ಟ ಬೇರೆ ರಾಜ್ಯಗಳವರ ಜೊತೆಯಲ್ಲಿ ಕುಳಿತು ತಮ್ಮ ಹಿಸ್ಸೆಗೆ ಎಷ್ಟು ನೀರು ಬರಬೇಕೋ ಅದನ್ನು ತೀರ್ಮಾನ ಮಾಡದೆ ಹೋದರೆ ಬಹಳ ದೊಡ್ಡ ಅನಾಹುತವನ್ನು ಈ ರಾಜ್ಯಕ್ಕೆ ಮಾಡು ತ್ತಿದ್ದೀರಿ ಎಂದು ನಾನು ಮತ್ತೊಮ್ಮೆ ಬಹಳ ವಿಷಾದದಿಂದ ಹೇಳಬೇಕಾಗುತ್ತದೆ.

ಆಂಧ್ರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ: ಮೈಸೂರು ರಾಜ್ಯದಲ್ಲಿ ಮಧುಗಿರಿ ತಾಲ್ಲೂಕಿನಲ್ಲಿ ಗುಬ್ಬಲಘಟ್ಟದಲ್ಲಿ ಒಂದು ಕೆರೆಯನ್ನು ಕಟ್ಟಿದರೆ ಅದರಿಂದ ಮಡಕಸಿರಾಕ್ಕೆ ನೀರು ಬರುವುದಿಲ್ಲ ಎಂದು. ಮಡಕಸಿರಾ ಕನ್ನಡ ರಾಜ್ಯಕ್ಕೇ ಸೇರ ಬೇಕಾಗಿತ್ತು. ಈ ಕೆರೆ ಕಟ್ಟುವುದಕ್ಕೆ ಆಂಧ್ರದ ಮಂತ್ರಿಗಳು ವಿರೋಧವನ್ನು ವ್ಯಕ್ತಪಡಿಸು ತ್ತಿದ್ದಾರೆ. ಇನ್ನು ನದೀ ಪಾತ್ರದಲ್ಲಿ ಬಾವಿ ತೋಡುವುದಕ್ಕೆ, ಅಣೆಕಟ್ಟನ್ನು ಕಟ್ಟುವುದಕ್ಕೆ, ಪ್ರತಿ ಯೊಂದಕ್ಕೂ ಪ್ರತಿಭಟನೆಯನ್ನು ಸಲ್ಲಿಸುತ್ತಾರೆ. ಹೀಗಿರುವಾಗ ನಮ್ಮ ರಾಜ್ಯಸರ್ಕಾರದವರು ಸುಮ್ಮನೆ ಕೂಡುವುದರಲ್ಲಿ ಅರ್ಥವಿಲ್ಲ. ಶ್ರೀ ವೀರೇಂದ್ರ ಪಾಟೀಲರು ಆಗಾಗ ತಮ್ಮ ಭಾಷಣದಲ್ಲಿ ನಾವು ಪ್ರತಿಭಟನೆಯನ್ನು ಸೂಚಿಸುತ್ತೇವೆ, ನಮಗೆ 1951ರ ಒಪ್ಪಂದ ಒಪ್ಪಂದವೇ ಅಲ್ಲ, ನಮಗೆ 1963ರಲ್ಲಿ ಕೊಟ್ಟ ನೀರು ಸಾಲದು ಎಂದು ಹೇಳಿದ್ದೇವೆ ಎಂದು ಹೇಳುತ್ತಿದ್ದಾರೆ. ಸರ್ಕಾರದವರು ಈ ವಿಚಾರದಲ್ಲಿ ಏನು ಮಾಡಿದ್ದಾರೆ ಎಂಬುದನ್ನು ಕಾಲಹರಣ ಮಾಡದೆ ಸ್ಪಷ್ಟವಾಗಿ ಹೇಳಿಬಿಟ್ಟರೆ ರಾಜ್ಯದ ಜನರಾದರೂ ಒಂದು ಮಾರ್ಗವನ್ನು ಹುಡುಕಿಕೊಳ್ಳುತ್ತಾರೆ. ಇದು ಬಹಳ ದೊಡ್ಡ ಸಮಸ್ಯೆ. ಜನರು ಏನು ಮಾಡಬೇಕು ಎನ್ನುವುದು ಅವರಿಗೆ ಗೊತ್ತಾಗುತ್ತಿಲ್ಲ. ಬಿಜಾಪುರದಲ್ಲಿ ನೋಡಿದರೆ ಅಲ್ಲಿಯ ಜನರು ಎಷ್ಟು ಕಳವಳಕ್ಕೀಡಾಗಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಮಂತ್ರಿಗಳಾದ ತಾವು ಅಲ್ಲಿಗೆ ಹೋಗಿ ಭಾಷಣ ಮಾಡುವಾಗ ಮೂಗಿಗೆ ತುಪ್ಪ ಹಚ್ಚುವ ಹಾಗೆ ಮಾತನಾಡುತ್ತೀರಿ. ಮಲಪ್ರಭಾ, ಲೋಯರ್ ಭೀಮ ಮುಂತಾದ ಅನೇಕ ಯೋಜನೆಗಳನ್ನು ಕಾರ್ಯಗತ ಮಾಡುತ್ತೇವೆ ಎಂದು ಹೇಳುತ್ತೀರಿ. ಆದರೆ ವಾಸ್ತವವಾಗಿ ಏನು ಮಾಡುತ್ತಿದ್ದೀರೆಂದು ನೋಡಿದರೆ, ನಮಗೆ ತುಂಬಾ ಕಳವಳವಾಗುತ್ತದೆ.

ಇನ್ನು ವಿದ್ಯುಚ್ಛಕ್ತಿಯ ವಿಷಯದಲ್ಲಿ ಹೇಳುವುದಾದಕ್ಕೆ ಶರಾವತಿಯಲ್ಲಿ ಅನೇಕ ಲೋಪ ದೋಷ ಗಳಿವೆ. ಕೋಟ್ಯಾಂತರ ರೂಪಾಯಿಗಳಷ್ಟು ಸಾರ್ವಜನಿಕ ಹಣ ಅಲ್ಲಿ ವ್ಯರ್ಥವಾಗಿದೆ, ದುರುಪ ಯೋಗವಾಗಿದೆ ಎಂದು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಿದ್ದೇನೆ. ಕೂಡಲೇ ವಿಚಾರ ಮಾಡುತ್ತೇ ವೆಂದೂ, ಅದರ ಬಗ್ಗೆ ಒಂದು ಶ್ವೇತ ಪತ್ರವನ್ನು ಪ್ರಕಟಣೆ ಮಾಡುತ್ತೇವೆಂದೂ ಹೇಳಿದರು. ಅದನ್ನು ಈವರೆಗೂ ಸರಕಾರಕ್ಕೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದುವರೆಗೆ ಅಲ್ಲಿ ನಡೆದಿರುವ ಕೆಲಸದಲ್ಲಿ ಅನೇಕ ಲೋಪ ದೋಷಗಳಿವೆ; ಇನ್ನೂ ಆಗುತ್ತಿವೆ. ತಲಕಳಲೆ ಮತ್ತು ಮಳಲಿ ಜಲಾಶಯಗಳನ್ನು ಮಂತ್ರಿಗಳು ಉದ್ಘಾಟನೆ ಮಾಡಿದರು. ಏಕೆ ಮಾಡಿದರು, ಯಾವ ದೃಷ್ಟಿಯಿಂದ ಮಾಡಿದರು ಎನ್ನುವುದು ಯಾರಿಗೂ ಗೊತ್ತಿಲ್ಲ. ಈ ಹೊತ್ತು ಚೀಫ್ ಇಂಜಿನಿಯರು ನಿವೃತ್ತರಾಗಬೇಕೆಂದಿದೆ. ಇನ್ನೊಬ್ಬರು ನಿವೃತ್ತರಾದರು. ಇವರು ಯಾವ ಕಂಟ್ರಾಕ್ಟರ ಮೇಲೆ ಉಸ್ತುವಾರಿಮಾಡ ಬೇಕಾಗಿತ್ತೋ ಅವರ ಕೈಕೆಳಗೇ ಕೆಲಸ ಮಾಡುತ್ತಿದ್ದಾರೆ. ಅನೇಕ ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತಿದೆ. ವಿಶೇಷ ಸಿಬ್ಬಂದಿಯನ್ನು ನೇಮಕಮಾಡಿ ಅಲ್ಲಿ ಸ್ವಲ್ಪ ಸಿಮೆಂಟು, ಇಲ್ಲಿ ಸ್ವಲ್ಪ ಕಬ್ಬಿಣ ಲಾರಿಗಳಲ್ಲಿ ಸಾಗಿ ಹೋಗುತ್ತಿದ್ದುದನ್ನು ಹಿಡಿದು ಆಮೇಲೆ ಯಾವುದೋ ಬರುವುದು ತಡ ವಾಯಿತು, ಅದಕ್ಕಾಗಿ ಸರಿ ಮಾಡಿಕೊಂಡೆವು ಎಂದು ಅವರು ಹೇಳಿದರು. ಹೀಗಾಗಿ ಕೇಂದ್ರ ಸರಕಾರದ ಮಂತ್ರಿಗಳಿಂದ ಎಲ್ಲವೂ ಸರಿಯಾಗಿದೆ ಎಂದು ಶಹಭಾಸ್‌ಗಿರಿ ಬಂದಿದೆ ಎಂದು ಹೇಳಿದರು. ಈ ವ್ಯವಹಾರದಲ್ಲಿ ಎಲ್ಲವೂ ಸರಿಯಾಗಿ ನಡೆದಿದೆ ಎಂದು ಯಾರೂ ಹೇಳುವಂತಿಲ್ಲ. ಆದುದರಿಂದ ಅಲ್ಲಿ ಲೋಪ ದೋಷಗಳೇನು ನಡೆದಿವೆಯೋ ಅದನ್ನು ಇನ್ನು ಮುಂದಾದರೂ ನಿವಾರಿಸಿ ಸರಿಯಾಗಿ ಕೆಲಸ ನಡೆಸಬೇಕು. ಸರಕಾರ ತನ್ನ ಮಾತನ್ನು ಉಳಿಸಿಕೊಳ್ಳಲಿ. ಪ್ರಾಮಾಣಿಕವಾಗಿ ಕೆಲಸ ನಡೆಸಿ ಕೊಂಡು ಹೋಗಲು ವ್ಯವಸ್ಥೆ ಮಾಡುತ್ತಾರೆಂದು ಆಶಿಸುತ್ತೇನೆ.

(ಶ್ರೀ ಎಸ್. ಗೋಪಾಲ ಗೌಡ)

ಇನ್ನು ದಕ್ಷಿಣದಲ್ಲಿ ಒಂದು ಗ್ರಿಡ್ ಎಂದರೆ ಒಂದು ವಿದ್ಯುಚ್ಛಕ್ತಿಯ ಜಾಲವನ್ನು ಮಾಡಬೇಕೆಂದು ವ್ಯವಹಾರ ನಡೆದಿದೆ. ನಮ್ಮ ರಾಜ್ಯಕ್ಕೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯ ಪೂರೈಕೆಯಾದಮೇಲೆ ಉಳಿದರೆ ಅದನ್ನು ಬೇರೆ ಕಡೆಗೆ ಕೊಡುತ್ತೇವೆಂದು ಶ್ರೀಮಾನ್ ವೀರೇಂದ್ರ ಪಾಟೀಲರು ಹೇಳುತ್ತಾರೆ. ಆದರೆ ಆಂಧ್ರದ ಮಂತ್ರಿಗಳಾದ ಸುಬ್ಬಾರೆಡ್ಡಿಯವರು ತಮಗೆ ಇದು ಬೇಕಾಗಿಲ್ಲವೆಂದು ಹೇಳುತ್ತಾರೆ. ಇದರಲ್ಲೇನಿವೆ, ಇದಕ್ಕೆ ಒಪ್ಪಿಗೆ ಕೊಡಬೇಕೇ ಅಥವಾ ಬೇಡವೇ ವಿಚಾರ ಮಾಡೋಣ. ನಮ್ಮ ಸ್ಥಿತಿಗತಿ, ಸಾಧಕ ಬಾಧಕವೇನಿದೆ ಎಂಬುದನ್ನು ವಿಚಾರ ಮಾಡುವುದಕ್ಕೂ ನಮ್ಮ ಮೈಸೂರಿನ ಮಂತ್ರಿ ಮಂಡಲಕ್ಕೆ ಶಕ್ತಿಯಿಲ್ಲವೆಂದು ಕಾಣುತ್ತದೆ. ಇದು ಬಹು ಮುಖ್ಯವಾದ ವಿಷಯ. ಹೀಗೆ ರಾಜ್ಯದ ಹಿತವನ್ನು ಬಲಿಕೊಡುತ್ತಾ ಹೋದರೆ, ಕೈಬಿಡುತ್ತಾ ಹೋದರೆ ಈ ರಾಜ್ಯ ಇನ್ನು ಕೆಲವೇ ವರ್ಷಗಳಲ್ಲಿ ಯಾವುದಕ್ಕೂ ಕೆಲಸಕ್ಕೆ ಬಾರದೇಯಿರುವ ರಾಜ್ಯವಾಗಿ, ಇಲ್ಲಿ ಜೀವನ ಮಾಡುವ ಜನರು ಪರರ ಆಶ್ರಯದಲ್ಲಿ ಬಿದ್ದು ಯಾಚನೆ ಮಾಡುವಂತಾಗಲು ಏಕೆ ಅವಕಾಶ ಮಾಡುತ್ತೀರಿ ಎಂದು ಮಂತ್ರಿಗಳನ್ನು ಕೇಳಬೇಕಾಗಿದೆ.

ಇನ್ನು ವಿದ್ಯುಚ್ಛಕ್ತಿ ಯೋಜನೆಗಳಿಂದ ನಮ್ಮಗೆ ವಿದ್ಯುಚ್ಛಕ್ತಿ ಬರುವುದಿದೆಯೆಂದು ಹೇಳುತ್ತೇವೆ. ಅದರಬಗ್ಗೆ ಮುಂಚಿತವಾಗಿ ಏನೇನು ಯೋಜನೆ ಮಾಡಬೇಕು, ಅದನ್ನು ಬಳಸುವ ಬಗೆ ಹೇಗೆ, ಅದಕ್ಕಾಗಿ ಯಾವ ಯಾವ ವ್ಯವಸ್ಥೆ ಮಾಡಬೇಕು ಎಂಬ ಬಗ್ಗೆ ಯೋಜನೆಯನ್ನು ತಯಾರು ಮಾಡಿಲ್ಲ. ಇದೆಲ್ಲಕ್ಕೂ ಒಂದು ಸಾವಿರ ಕೋಟಿ ರೂಪಾಯಿ ಆಗುತ್ತದೆಂದು ಭಾಷಣಗಳಲ್ಲಿ ಹೇಳುತ್ತಿದ್ದಾರೆ. ನೀರಾವರಿಯ ಬಗ್ಗೆ ಹೇಳುತ್ತಾ ಆಯೋಗದವರು ಅಂದಾಜು ಮಾಡಿದ್ದಾರೆ, ತುಂಗಭದ್ರಾದಲ್ಲಿ ನೀರಾವರಿಗೇ ಸಂಬಂಧಪಟ್ಟಂತೆ ಸರಿಯಾಗಿ ನೀರು ಕೊಡುತ್ತೇವೆಂದೂ ಅದಕ್ಕೆ ಸೂಕ್ತ ಯೋಜನೆ ಮಾಡುತ್ತೇವೆಂದೂ ಹೇಳಿದ್ದಾರೆ. ಭದ್ರಾ ವಿಷಯದಲ್ಲಿಯೂ ಹೀಗೆಯೇ ಮಾಡಬೇಕು. ಇದಕ್ಕೆ ಅನೇಕ ಸಹಸ್ರ ಕೋಟಿ ರೂಪಾಯಿ ಖರ್ಚಾದರೂ ಅಲ್ಲಿ ರೈತರಿಗೆ ಯಾವ ರೀತಿ ನೀರಾವರಿ ಬೆಳೆ ಬೆಳೆಯಬೇಕೆಂದು ಹೇಳುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

ಕಾಲಾವಕಾಶ ನನಗೆ ಹೆಚ್ಚಾಗಿಲ್ಲವಾದುದರಿಂದ ಅದಷ್ಟು ಸಂಕ್ಷೇಪವಾಗಿ ಹೇಳಿ ಮುಗಿಸುತ್ತೇನೆ. ಬಸ್ ರಾಷ್ಟ್ರೀಕರಣದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ವಿಷಯದಲ್ಲಿ ಸರಕಾರದವರು ವಿಚಿತ್ರವಾದ ಹೇಳಿಕೆಗಳನ್ನು ಕೊಡುತ್ತಾರೆ. ಕೆಲವರು ಬ್ಯಾಂಕುಗಳ ರಾಷ್ಟ್ರೀಕರಣವಾಗಬೇಕೆನ್ನುತ್ತಾರೆ, ಮತ್ತೆ ಕೆಲವರು ಬೇಡವೆನ್ನುತ್ತಾರೆ. ಸಾರಿಗೆ ರಾಷ್ಟ್ರೀಕರಣ ಕೆಲವು ಭಾಗಗಳಲ್ಲಿ ಪೂರ್ಣವಾಗಿಲ್ಲ. ಈ ಭಾಗಗಳಲ್ಲಿ ಕೆಲವು ಹಿತಾಸಕ್ತಿಗಳು ಸರಕಾರದ ಮೇಲೆ ಪ್ರಭಾವವನ್ನಿಟ್ಟುಕೊಂಡಿವೆ. ಕೆಲವು ಬಸ್ ಕಂಪೆನಿಗಳಿವೆ, ಅವರು ತಮ್ಮ ಕಾರ್ಯವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಅಲ್ಲಿ ರಾಷ್ಟ್ರೀಕರಣ ಮಾಡುವುದಕ್ಕೆ ನಮ್ಮಲ್ಲಿ ಸಾಕಷ್ಟು ಚೇಸಿಗಳಿಲ್ಲ ಎಂದು ಕುಂಟು ನೆಪವನ್ನು ಹೇಳುತ್ತಾರೆ, ಶ್ರೀಮಾನ್ ದೇವರಾಜ ಅರಸಿನವರು ರಾಷ್ಟ್ರೀಕರಣದಲ್ಲಿ ಒಂದು ಮೂಲ ತತ್ವ ಅಡಗಿದೆ. ಇದನ್ನು ಕಾರ್ಯಗತಮಾಡಿ ನಡೆಸಿಕೊಂಡು ಹೋಗುವ ಬಗ್ಗೆ ಸರ್ಕಾರ ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಯಾರ ಪ್ರಭಾವಕ್ಕೂ ಒಳಗಾಗದೆ ರಾಷ್ಟ್ರೀಕರಣವನ್ನು ಮೂರನೆಯ ಪಂಚವಾರ್ಷಿಕಯೋಜನೆ ಮುಗಿಯುವುದರೊಳಗೆ ಮುಗಿಸುತ್ತಾರೆಂದು ನಾನು ಆಶಿಸುತ್ತೇನೆ.

ಬೆಲೆಗಳ ಬಗ್ಗೆ ಸರಕಾರದ ವರದಿಯೇನಿದೆಯೋ ಅದು ಸತ್ಯಕ್ಕೆ ದೂರವಾಗಿದೆ. ಅವರಿಗೆ ಮಾರುಕಟ್ಟೆಯ ಪರಿಚಯವಿಲ್ಲ. ಬೇಸಾಯ ಮಾಡುವ ಮನುಷ್ಯನ ಪರಿಚಯವಾಗಲೀ, ಕೊಳ್ಳುವ ಪರಿಚಯವಾಗಲೀ ಇರುವಂತೆ ಕಾಣುವುದಿಲ್ಲ. ಅಥವಾ ಬೇಕೆಂದೇ ಹೀಗೆ ಹೇಳಿಕೆ ಕೊಟ್ಟಿದ್ದಾರೋ ಗೊತ್ತಿಲ್ಲ. ಈಹೊತ್ತು ಬೆಲೆಗಳು ಒಂದೇ ಸಮನಾಗಿ ಏರುತ್ತಿವೆ. ಹಣದ ಉಬ್ಬರ ಒಂದೇಸಮನೆ ಹೆಚ್ಚುತ್ತಿದೆ. ಖೋತಾ ಆಯವ್ಯಯಗಳು ಎಲ್ಲೆಲ್ಲಿಯೂ ಕಾಣುತ್ತವೆ. ಕೊಂಡು ತಿನ್ನತಕ್ಕ ಜನರು, ಅದರಲ್ಲಿಯೂ ಗೊತ್ತಾದ ಆದಾಯವಿರುವ ಜನರ ಜೀವನ ಬಹಳ ಕಷ್ಟವಾಗಿದೆ. ಕೇಂದ್ರದಲ್ಲಿ ಸರಕಾರೀ ನೌಕರರಿಗೆ ತುಟ್ಟಿಭತ್ಯವನ್ನು ಕೊಡುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಮಾಡಿರುವಂತೆ ರಾಜ್ಯದಲ್ಲಿಯೂ ಮಾಡಬೇಕಾಗುತ್ತದೆ. ಇದು ಒಂದು ವಲಯಕ್ಕೆ ಅಥವಾ ಒಂದು ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ದೇಶದಾದ್ಯಂತ ಇರುವ ಪ್ರಶ್ನೆಯಾದುದರಿಂದ ಒಂದು ರಾಷ್ಟ್ರೀಯ ನೀತಿಯನ್ನನುಸರಿಸಬೇಕೆಂದು ಹೇಳುತ್ತೇನೆ.

ಇನ್ನು ಅನೇಕ ರಾಜ್ಯಗಳಲ್ಲಿ ವಯಸ್ಸಾದವರಿಗೆ ಜೀವನಾಂಶ ಕೊಟ್ಟಿದ್ದಾರೆ. ಹಿಂದೆ ನಾನು ಈ ಬಗ್ಗೆ ಮೈಸೂರು ಸರಕಾರವನ್ನು ಕೇಳಿಕೊಂಡಿದ್ದೇನೆ. ವಯಸ್ಸಾದವರಿಗೆ ಜೀವನಾಂಶ ಕೊಡ

ಬೇಕೆಂದು ಸೂಚಿಸಿದ್ದೇನೆ. ಅದೇನು ಕಾರಣವೋ ಗೊತ್ತಿಲ್ಲ, ಹಿಂದೆ ಪ್ರಸ್ತಾವಿಸಿದವರು ಈಗ ಈ ವಿಷಯವನ್ನು ಕೈ ಬಿಟ್ಟಿದ್ದಾರೆ. ಈಗಲಾದರೂ ಎಲ್ಲ ವಯಸ್ಸಾದವರಿಗೂ ಜೀವನಾಂಶ ಕೊಡುವ ಕ್ರಮವನ್ನು ಸರಕಾರ ಕೂಡಲೇ ಕೈಕೊಳ್ಳಬೇಕೆಂದು ಸಲಹೆ ಕೊಡ ಬಯಸುತ್ತೇನೆ.

ಕೈಗಾರಿಕೆಗಳ ವಿಚಾರದಲ್ಲಿ, ಕೆಲವು ಖಾಸಗಿ ವಲಯಗಳಲ್ಲಿ ಪ್ರೋತ್ಸಾಹ ಕೊಡಬೇಕೆಂದು ಆ ದಿಕ್ಕಿನಲ್ಲಿ ಪ್ರಯತ್ನ ನಡೆದಿದೆ. ಶಿವಮೊಗ್ಗೆಯ ಹತ್ತಿರ ಒಂದು ದೊಡ್ಡ ಕಾಗದದ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ಪ್ರಯತ್ನ ನಡೆದಿದೆ. ಅದಕ್ಕೆ ಸಾಫ್ಟ್‌ವುಡ್ 40 ಲಕ್ಷ ಟನ್ ಒದಗಿಸ ಬೇಕೆಂದು ತೀರ್ಮಾನ ಮಾಡಿದಂತಿದೆ. ಭದ್ರಾವತಿ ಕಾರ್ಖಾನೆಯನ್ನು ವಿಸ್ತಾರ ಮಾಡುವುದಕ್ಕೆ ಸರಕಾರ ಒಪ್ಪಲಿಲ್ಲ. ಈಗಾಗಲೇ ಮಲೆನಾಡಿನಲ್ಲಿರುವ ಕಾಡುಬೊಂಬುಗಳನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಸಮಾಜವಾದದ ಹೆಸರಿನಲ್ಲಿ ಖಾಸಗಿ ಬಂಡವಾಳಗಾರರಿಗೆ ಈ ರೀತಿ ಪ್ರೋತ್ಸಾಹ ಮಾಡಿದರೆ ಮುಂದೆ ರಾಜ್ಯ ಎಲ್ಲಿಗೆ ಮುಟ್ಟುತ್ತದೆಂದು ಯೋಚನೆ ಮಾಡಬೇಕು.

ಸಾರ್ವಜನಿಕರ ಕ್ಷೇತ್ರದಲ್ಲಿ ಭದ್ರಾವತಿ ಕಬ್ಬಿಣ ಕಾರ್ಖಾನೆಯನ್ನು ಆರಂಭ ಮಾಡಿದ್ದಾರೆ. ಅದೇ ರೀತಿ ಇನ್ನೂ ಅನೇಕ ಕೈಗಾರಿಕೆಗಳನ್ನು ಪ್ರಾರಂಭ ಮಾಡಿರುವುದರಿಂದಲೇ ನಮ್ಮ ಮೈಸೂರು ರಾಜ್ಯ ಮಾದರಿ ರಾಜ್ಯ ಎಂದು ಹೆಸರು ಗಳಿಸಿದೆ. ಆದರೆ ಈಗ ಹೊರಗಿನಿಂದ ಬಂಡವಾಳ ತಂದು ಹೊರಗಿನ ಬಂಡವಾಳಗಾರರಿಗೆ ಇಲ್ಲಿಯ ನೈಜವಾದ ಸಂಪತ್ತನ್ನು ಮಾರಾಟ ಮಾಡುವುದು ಒಳ್ಳೆಯದಲ್ಲ. ಇದು ಸಮಾಜವಾದ ಅಲ್ಲ. ಇದು ರಾಜ್ಯಕ್ಕೆ ಒಳ್ಳೆಯದಲ್ಲ. ನೈಜವಾದ ವನಸಂಪತ್ತನ್ನು ಮಾರಾಟ ಮಾಡುವ ಬಗ್ಗೆ 200-300 ವರ್ಷಗಳ ಒಂದು ಅಗ್ರಿಮೆಂಟ್ ಮಾಡಿಕೊಂಡು ಮುಂದುವರಿಸುವುದು ಸರಿಯಲ್ಲ. ಆ ರೀತಿ ಮಾಡುವುದಾದರೆ ರಾಜ್ಯಕ್ಕೂ ಜನತೆಗೂ ಅನ್ಯಾಯ ಮಾಡಿದಂತಾಗುತ್ತದೆಂದು ಎಚ್ಚರಿಕೆ ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ,ನಮ್ಮ ರಾಜ್ಯಪಾಲರ ವರು ವಿಧಾನ ಮಂಡಲದ ಸಂಯುಕ್ತ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕಾಗಿ ನಾವು ಅವರಿಗೆ ಧನ್ಯವಾದಗಳನ್ನು ಅರ್ಪಿಸತಕ್ಕದ್ದು ಸೂಕ್ತ. ನಿಜವಾಗಿಯೂ ನಾವು ಅವರಿಗೆ ಥ್ಯಾಂಕ್ಸ್ ಕೊಡಬೇಕಾಗಿದದ್ದೇ, ಏತಕ್ಕೆಂದರೆ ಯಾರಾದರೂ ತಮ್ಮ ಕರ್ತವ್ಯವನ್ನು ತಾವು ಮಾಡಿದರೂ ಥ್ಯಾಂಕ್ಸ್ ಕೊಡಬೇಕಾದ ಕಾಲ ಈಗ ಬಂದಿದೆ. ಬೆಳಗಾಯಿತು, ಜನ ಎದ್ದರೆ ಎದ್ದರಾ, ಎದ್ದೆ ಎಂದರೆ ಥ್ಯಾಂಕ್ಸ್ ಕಾಫಿ ಕುಡಿದಿರಾ ಕುಡಿದೆ ಥ್ಯಾಂಕ್ಸ್ ಕಾಲ ಇದಾಗಿದೆ. ಹೀಗೆ ಪ್ರತಿಯೊಂದು ಕೆಲಸ ಮಾಡಿದ್ದಕ್ಕೆ ಥ್ಯಾಂಕ್ಸ್ ಕೊಡುತ್ತೇವೆ. ಅಂಥಾದ್ದರಲ್ಲಿ ರಾಜ್ಯಪಾಲರು ಇಷ್ಟೊಂದು ಹಿತವಚನ, ಎಲ್ಲರೂ ಕೂಡಿ ಸಹಕಾರದಿಂದ ಕೆಲಸಮಾಡುವ ಉದ್ದೇಶ ನೀಡಿರುವುದಕ್ಕೆ ಥ್ಯಾಂಕ್ಸ್ ಕೊಡಬೇಕಾದುದ್ದು ನಮ್ಮ ಕರ್ತವ್ಯ. ಈ ಸಂದರ್ಭದಲ್ಲಿ ನಮ್ಮ ರಾಜ್ಯಪಾಲರು ಇನ್ನೂ ನಾಲ್ಕು ಮಾತು ಹೆಚ್ಚು ಆಡಿ, ಇನ್ನೂ ಕೆಲವು ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡಿದ್ದರೆ ಅವರಿಗೆ ಒಂದು ಮೂಟೆ ಥ್ಯಾಂಕ್ಸ್ ಕೊಡಲು ನಾನು ಇಷ್ಟ ಪಡುತ್ತಿದ್ದೆನು.

ನಮ್ಮ ರಾಜ್ಯಪಾಲರವರು ಸಮಾಜ ವಿಕಾಸ ಮತ್ತು ಪಂಚಾಯತಿ ರಾಜ್ಯ ಹಾಗೂ ಸಮಾಜಾ ಭಿವೃದ್ಧಿ ಕ್ಷೇತ್ರಗಳ ಬಗ್ಗೆ ಪ್ರಸ್ತಾಪ ಮಾಡಿ ವ್ಯವಸಾಯೋತ್ಪತ್ತಿಯನ್ನು ಹೆಚ್ಚಿಸಲು ಸರ್ವ ಪ್ರಯತ್ನವೂ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ. ಅದು ಯಾವಾಗ ಪ್ರಾರಂಭವಾಗಿದೆಯೋ, ಯಾವಾಗ ಮುಗಿಯುತ್ತದೆಯೋ ನನಗಂತೂ ಕಾಣುತ್ತಿಲ್ಲ. ಪಂಚಾಯತಿ ರಾಜ್ಯದ ಬಗ್ಗೆ ಹೇಳುತ್ತಾ ವರದಿ ಮಾಡುವುದಕ್ಕಾಗಿ ಸರಕಾರದವರು ರಚಿಸಿದ ಅಭ್ಯಾಸ ಮಂಡಲಿಯು (ಸ್ಟಡಿ ಟೀಮು) ಸರಕಾರಕ್ಕೆ ತನ್ನ ವರದಿಯನ್ನು ಒಪ್ಪಿಸಿದೆ ಮತು ಅಭ್ಯಾಸ ಮಂಡಲಿಯು ಮಾಡಿದ ಸಲಹೆಯು ತತ್ವತಃ ಅಂಗೀ ಕೃತವಾಗಿದೆ ಎಂದು ಹೇಳಿದ್ದಾರೆ. ಈ ಮಸೂದೆ ಸಭೆಯ ಮುಂದೆ ಚರ್ಚೆಗೆ ಬಂದಾಗ ಹೆಚ್ಚು ಮಾತನಾಡಲು ಅವಕಾಶ ಸಿಕ್ಕಬಹುದು ಎಂದು ನಂಬಿಕೊಂಡಿದ್ದೇನೆ. ಆದರೆ ಸುಧಾರಿತ ಬೀಜಗಳು, ಗೊಬ್ಬರಗಳು, ರಾಸಾಯನಿಕ ಗೊಬ್ಬರಗಳು, ಸುಧಾರಿತ ಉಪಕರಣಗಳು ನೀರಾವರಿ ಇವೇ ಮೊದ ಲಾದವುಗಳ ಸಹಾಯದಿಂದ ವ್ಯವಸಾಯೋತ್ಪತ್ತಿಯನ್ನು ಹೆಚ್ಚಿಸಲು ಸರ್ವ ಪ್ರಯತವೂ ಪ್ರಾರಂಭ ವಾಗಿದೆ ಎಂದು ಹೇಳುವುದಾದರೆ ಹೆಚ್ಚಿನ ಬೆಳೆ ಎಲ್ಲಿ ಹೋಯಿತು ಎಂದು ಕೇಳುತ್ತೇನೆ. ಪಂಪ್ ಸೆಟ್ಟು ಕೊಂಡುಕೊಳ್ಳಲು ಸಾಲ ಕೊಡಲಾಗುತ್ತಿದೆ, ಹಾಗು ನೀರಾವರಿಗೆ ಅನುಕೂಲ ಮಾಡಿ ಕೊಟ್ಟಿದೆ ಎಂದು ಹೇಳಿದ್ದಾರೆ. ಯಾವ ಅನುಕೂಲ ಮಾಡಿಕೊಟ್ಟಿದ್ದಾರೆ ಎಂಬುದನ್ನು ಹೇಳಿದ್ದರೆ ಸಮಾಧಾನವಾಗುತ್ತಿತ್ತು.

ಇನ್ನು ಸಹಕಾರದ ವಿಚಾರವನ್ನು ಹೇಳುವುದಾದರೆ ಮಾನ್ಯ ಉಪ ಮಂತ್ರಿಗಳು ಒಮ್ಮೆ ನಮ್ಮ ಊರಿಗೆ-ಗುಂಡ್ಲುಪೇಟೆಗೆ ಬಂದಿದ್ದರು. ಆದರೆ ಅವರು ಜನರ ಕಷ್ಟ ಸುಖ ವಿಚಾರಿಸದೆ ಅಂದು ರಾತ್ರಿ ನಾಟಕ ನೋಡಿಕೊಂಡು ಬಂದರು. ಇದು ಸರಿಯಲ್ಲ. ಸಹಕಾರ ಸಂಘಗಳಲ್ಲಿ ಸರಿಯಾಗಿ ಸಿಕ್ಕುವುದಿಲ್ಲ. ತೂಕ ಸರಿಯಾಗಿ ಕೊಡುವುದಿಲ್ಲ. ಮಂತ್ರಿಗಳು ನಮ್ಮ ಊರ ಕಡೆ ಮೊದಲೇ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಬರುವುದಿಲ್ಲ. ಬಂದವರೂ ಬಡ ರೈತರ ಕಷ್ಟ ಸುಖ ಏನು ಎಂಬುದನ್ನು ಕೇಳುವುದಿಲ್ಲ. ಬಡ ರೈತ ಜನರ ಕಷ್ಟ ಸುಖ ವಿಚಾರಿಸುವ ಹಾಗೆ ದೇವರು ಅವರಿಗೆ ಸರಿಯಾದ ಬುದ್ಧಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

ಇನ್ನು ನಮ್ಮ ರಾಜ್ಯಪಾಲರವರು ಮಳೆ ಬೆಳೆಗಳ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪ ಮಾಡಿ ಮೈಸೂರು ಜಿಲ್ಲೆಯಲ್ಲಿ ಮಳೆಬೆಳೆಗಳು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ, ಪೀಡಿತ ಪ್ರದೇಶಗಳ ಜನರಿಗೆ ಉದ್ಯೋಗ ಕಲ್ಪಿಸಿಕೊಡುವುದಕ್ಕಾಗಿ ಪರಿಹಾರ ಕಾರ್ಯಕ್ರಮಗಳು, ತಕ್ಕಾವಿ ಮತ್ತು ಜಮೀನು ಆಬಾದಿನ ಸಾಲಗಳು, ಇತ್ಯಾದಿ ಸಹಾಯ ಕಾರ್ಯಗಳನ್ನೂ ಅವಶ್ಯವಿರುವ ಕಡೆ ಗಳಲ್ಲೆಲ್ಲಾ ಕೈಕೊಳ್ಳಲಾಗಿವೆ ಎಂದು ಹೇಳಿದ್ದಾರೆ. ಎಲ್ಲಿ ಪರಿಹಾರ ಕಾರ್ಯ ನಡೆದಿದೆ ಎಂದು ಕೇಳು ತ್ತೇನೆ. ತಕ್ಕಾವಿ ಸಾಲ ದೊರೆಯಬೇಕಾದರೆ 25 ಸಲ ಮೈಸೂರಿಗೆ ಹೋಗಿ ಬರಬೇಕಾಗುತ್ತದೆ. ಈ ಬಾಬಿಗೆ ಒದಗಿಸಿರುವ ಹಣ ಬಹಳ ಕಡಿಮೆ. ನಮ್ಮ ತಾಲ್ಲೂಕಿಗೆ ಮಂತ್ರಿಗಳು ಬಂದು ಪರಿಸ್ಥಿತಿ ನೋಡಬೇಕು. ನಮ್ಮ ತಾಲ್ಲೂಕಿಗೆ ಮಂತ್ರಿಗಳು ಯಾರೂ ಬರುವುದಿಲ್ಲ. ನೀವು ನಿಜವಾಗಿ ಬಂದು ಅಲ್ಲಿ ಸುಭಿಕ್ಷವಾಗಿದೆ ಎಂದು ಹೇಳಿ. ನಾವು ಹೇಳುವುದು ತಪ್ಪಿಹೋಗುತ್ತದೆ. ನೀವು ಪ್ರವಾಸ ಮಾಡುತ್ತಾ ಇಲ್ಲವೆ? ನಿಮ್ಮಿಂದ ಸ್ಟೆಂಟ್ ಎಕ್ಸ್‌ಚೆಕರಿಗೆ ಎಷ್ಟು ಖರ್ಚಾಗುತ್ತಾ ಇದೆ? ಪ್ರವಾಸ ಎಲ್ಲಿ ಮಾಡಬೇಕೋ, ಅಲ್ಲಿ, ಕಗೆದಕಡೆ, ಪ್ರವಾಸ ಮಾಡಬೇಕು. ಆದ್ದರಿಂದ ದಯೆಯಿಟ್ಟು ನಮ್ಮ ತಾಲ್ಲೂಕಿಗೆ ಬಂದುನೋಡಿ.

11-30 A.M.

ಕಲೆಕ್ಟರ್ ಆಫ್ ರೆವಿನ್ಯೂ ವಿಚಾರದಲ್ಲಿ ಈಗತಾನೇ ನಮಗೆ ಯಾರೋ ಸಮಾಚಾರ ಹೇಳಿದರು ಐದು ಆಣೆ ಬೆಳೆ ಪಹಣಿಯಲ್ಲಿ ಬೆಳೆದಿದ್ದಾರೆ ಎಂದು. ಮಳೆ ಆಗದೆ ಇರುವಾಗ, ಬೀಜ ಬಿತ್ತನೆ ಯಾಗದೆ ಇರುವಾಗ, 5 ಆಣೆ ಫಸಲು ಎಲ್ಲಿಂದ ಬಂತು? ವಿಚಿತ್ರವಾಗಿದೆ. ನೀವು ಯಾರಾದರೂ ಬಂದು ನೋಡಿ ನಿಜವಾಗಿಯೂ ಆಗಿದೆಯೆಂದು ಖಾತ್ರಿಮಾಡಿಕೊಳ್ಳದೆ, ಯಾರೋ ಹೇಳಿದ್ದು ಕೇಳುವುದೇ? ಅಯ್ಯೋ, ಯಾರೂ ಕೇಳುವವರೇ ಇಲ್ಲದಂದೆ ಆಗಿಹೋಗಿದೆ, ನಮ್ಮ ಗುಂಡ್ಲುಪೇಟೆ ತಾಲ್ಲೂಕು! Tell us "you are unwanted children, we do not want you." ಆ ತಾಲ್ಲೂಕು ಬಿಟ್ಟು, ನೀಲಗಿರಿ ತಪ್ಪಲಿಗೋ, ಕಾಫೀ ತೋಟಕ್ಕೋ ಹೋಗಿಬಿಡುತ್ತೇವೆ. ಈ ತರಹ ಅನ್ಯಾಯ, ಪಾರ್ಸಿಯಾಲಿಟಿ ಏಕೆ? ಗುಂಡ್ಲುಪೇಟೆ ತಾಲ್ಲೂಕಿನ ಬಗ್ಗೆ ಹೇಳುವವರು ಕೇಳುವವರು ಇಲ್ಲವೇ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೆಂಗಸರು ಹೊಲದಬದಿಯಲ್ಲಿ ಬೈಗಳನ್ನು ಹೇಗೆ ಬಯ್ಯುತ್ತಿರು ತ್ತಾರೋ ಹಾಗೆ ಬಯ್ಯುತ್ತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಹಳ್ಳಿಯವರು, ನೋಡಿ ಇಷ್ಟು ಹೊತ್ತಿನವರೆಗೂ ಹೇಳುತ್ತಾ ಇದ್ದೆ. ನಮ್ಮನ್ನು ಷೆಡ್ಯೂಲ್ಡ್ ಕ್ಯಾಸ್ಟ್, ಹಿಂದುಳಿದ ಜನಾಂಗವಾಗಿ ಮಾಡಿಬಿಡಿ. ಬಾಕಿಯವರ ಬೆನಿಫಿಟ್ಟುಗಳನ್ನು ತೆಗೆದು ಅವರಿಗೆ ಕೊಡುತ್ತಾ ಇದ್ದೀರಿ. ಅದರಂತೆಯೇ ನಮ್ಮ ತಾಲ್ಲೂಕನ್ನು "ಹರಿಜನ ತಾಲ್ಲೂಕು" ಎಂದು ಮಾಡಿಬಿಡಿ. ಹಾಗೆ ಆಯಿತು ಎಂದರೆ, ನಾಳೆ ದಿವಸ ಅದಕ್ಕೆ ಬೆನಿಫಿಟ್ ಸಿಕ್ಕುತ್ತದೆ ಎಂದು ನನಗನ್ನಿಸುತ್ತದೆ.

ಇನ್ನು ತೋಟಗಾರಿಕೆ ನಿರ್ಮಾಣ ಮಾಡುತ್ತಾರಂತೆ! ತೋಟಗಾರಿಕೆ ರೂಲ್ಸ್ ರಚನೆಯಾಗದೆ ಮೂರು ವರ್ಷಗಳಿಂದಲೇನು ಹಣ ಲ್ಯಾಪ್ಸ್ ಆಗಿದೆ. ಸರಕಾರ ರೂಲ್ಸ್ ಫ್ರೇಮ್ ಮಾಡದೆ ಇನ್ನು ಏನು ತೋಟಗಾರಿಕೆ ಮಾಡುವುದು? ಏನು ಹಣ್ಣುಗಳನ್ನು ಬೆಳೆಯುವುದು? ಏನು ವನ ನಿರ್ಮಾಣ ಮಾಡುವುದು? ಏನೂ ಕಾಣುತ್ತಾ ಇಲ್ಲ.

ಚಿಕ್ಕಪುಟ್ಟ ನೀರಾವರಿಗಳ ವಿಚಾರದಲ್ಲಿ ಹೇಳುವುದು ಎಂದರೆ, ನಿನ್ನೆ ದಿವಸ ನನ್ನ ಒಂದು ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಹೇಳಿದರು: New minor irrigation worksಗೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 99 ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆ, 10 ವರ್ಕ್ಸ್ ತೆಗೆದುಕೊಂಡಿದ್ದೇವೆ, ಎರಡು ವರ್ಷದಿಂದ ತೆಗೆದುಕೊಂಡಿದ್ದೇವೆ, ಒಟ್ಟು ಖರ್ಚು ಮಾಡಿರುವುದು 10 ಲಕ್ಷ ರೂಪಾಯಿ ಎಂದು ಅವರು ಹೇಳಿದರು. ಈ 99 ಲಕ್ಷ ರೂಪಾಯಿ ಕೆಲಸ ಮುಗಿಯುವುದು ಯಾವಾಗ? ನಾನು ಮುದುಕಿಯಾಗಿ ಸತ್ತಮೇಲೆ ಇರಬಹುದು.

ಮೂರು ವರ್ಷಗಳಲ್ಲಿ 40 ಸಾವಿರ ರೂಪಾಯಿಗೆ ಒಂದು ಪಿಕ್‌ಅಪ್ ಕನ್‌ಸ್ಟ್ರಕ್ಟ್ ಮಾಡಬೇಕೆಂದು ಅಂದಾಜಾಯಿತು. ಆ ಪಿಕ್‌ಅಪ್ ಕಿತ್ತುಹೋಗಿ ಮೂರು ವರ್ಷವಾಗಿದೆ ಇನ್ನೂ ಕಟ್ಟಿಲ್ಲ. ಹೊಸ ಕನ್‌ಸ್ಟ್ರಕ್ಷನ್ ಆಗಬೇಕು ಎಂದು 13½ ಸಾವಿರ ರೂಪಾಯಿಗೆ ಒಂದು ಪಿಕ್‌ಅಪ್ ಕಟ್ಟಿದರು; ಒಂದು

ತೊಟ್ಟು ನೀರೂ ಇಲ್ಲ, ಸೇತುವೆ ಇಲ್ಲ, ನೀರು ಹೋಗುತ್ತಿದೆ. ಸೂಪರಿಂಡೆಂಟಿಂಗ್ ಇಂಜನಿಯರು ಅದು ಆಗಕೂಡದು ಎಂದು ಹೇಳಿದರು, ಅವರಿಗೆ ವಿರೋಧವಾಗಿ 13½ ಸಾವಿರ ರೂಪಾಯಿ ಖರ್ಚು ಮಾಡಿದರು. ಯಾವ ಸುಖಕ್ಕೋಸ್ಕರ ? ನಾವು ಮಾಡುವ ಕೆಲಸದಲ್ಲಿ ಪುಣ್ಯ ಇರಬೇಕು, ಪುರುಷಾರ್ಥ ವಿರಬೇಕು, ಎರಡೂ ಇಲ್ಲದೆ ಖರ್ಚು ಮಾಡುತ್ತಾರೆ. ಖರ್ಚು ಮಾಡುವುದೇ ಪ್ರಾಧಾನ್ಯವಲ್ಲ. ಖರ್ಚು ಮಾಡಿದಕ್ಕೆ ಬೆಳೆ ಬರುವುದು ಪ್ರಾಧಾನ್ಯ. ಹೀಗಿರುವಾಗ ಚಿಕ್ಕಪುಟ್ಟ ನೀರಾವರಿಗೆ ಖರ್ಚು ಮಾಡಿದ್ದಾರಂತೆ !

ನಮ್ಮ ತಾಲ್ಲೂಕಿನಲ್ಲಿ ಸಾಲ ಇಲ್ಲದೆ ಇರುವವರು ಯಾರೂ ಇಲ್ಲ; ಮೂರು ಕಾಸು ಆಗಲಿ ಜಮೀನು ಸಾಲ ಇಲ್ಲದೆ ಇರುವ ರೈತರು ಇಲ್ಲ ; ಹೀಗಿರುವಾಗ ಬಾವಿಗೆ ಸಾಲ ತೆಗೆಯುವುದು ಹೇಗೆ ? ಡಿವಿಜನಲ್ ಕಮಿಷನರು ಸುಮ್ಮಸುಮ್ಮನೆ ರಿಲೀಫ್ ವರ್ಕ್ಸ್ ಕೇಳಬೇಡಿ ಎನ್ನುತ್ತಾರೆ. ಸಾವಿರಾರು ಸಾರಿ ಹೇಳಿದ್ದೇನೆ ಸಾಲಗಾರರಾಗಿಲ್ಲದೆ ಇರುವ ರೈತರೇ ಇಲ್ಲ, ಸರಕಾರದವರೇ ಬಾವಿ ತೆಗೆಸಿ, ಆ ಹಣವನ್ನು ಇನ್‌ಸ್ಟಾಲ್‌ಮೆಂಟ್ ಮೇಲೆ ವಾಪಸ್ಸು ತೆಗೆದುಕೊಳ್ಳಿ ಎಂದು. ಬೇರೇಕಡೆ 20—30 ಕೋಟಿ ರೂಪಾಯಿವರೆಗೆ ಪೋಲಾಗಿ ಹೋಗಿದೆ. ಈ ಬಡರೈತರಿಗೆ ನೀರಾವರಿ ಬಾವಿ ಕಟ್ಟಿಸುವುದಕ್ಕೋಸ್ಕರ ಖರ್ಚು ಮಾಡುವರು ಅದಕ್ಕಿಂತ ಅನ್ಯಾಯವಲ್ಲ. ಬಾವಿ ತೋಡಿಸಲು ಕೊಟ್ಟ ಸಾಲ ಹಾಳಾಗಿಹೋದರೂ ಹೋಗಲಿ, ಬಾವಿ ಕಾಂಗಾರಿಗೆ ಹಣ ಖರ್ಚು ಮಾಡಿ, ಧರ್ಮಕ್ಕೆ ರೈತರಿಗೆ ಬಾವಿ ಕಟ್ಟಿಸಿ ಕೊಡಿ. ಇಲ್ಲದೆ ಹೋದರೆ ನಿಜವಾಗಿ ಈ ತಾಲ್ಲೂಕು ಮುಂದೆಬರುವುದಿಲ್ಲ, ಜನಗಳೂ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ.

ಇನ್ನು ವಿದ್ಯುಚ್ಛಕ್ತಿಯ ವಿಚಾರ. ಶರಾವತಿ ಯೋಜನೆಯನ್ನು ಪೂರ್ತಿಮಾಡುತ್ತೇವೆ, ನಮ್ಮ ರಾಜ್ಯದ ಪವರ್ ಜನರೇಷನ್ ಹೆಚ್ಚಿಬಿಡುತ್ತದೆಂದು ಹೇಳಿದ್ದಾರೆ. ಇದು ನಮ್ಮ ಮಕ್ಕಳು, ಮರಿ ಮಕ್ಕಳ ಕಾಲಕ್ಕೆ ಈ ಸಾಧನ ಸಂಪತ್ತನ್ನು ಉಪಯೋಗಿಸಿಕೊಳ್ಳುತ್ತಾರೋ ಏನೋ. ಈ ಹೆಚ್ಚಾಗಿ ದೊರೆಯುವ ವಿದ್ಯುಚ್ಛಕ್ತಿಯನ್ನು ಹೇಗೆ, ಯಾವ ತರಹ ಉಪಯೋಗಿಸಕೊಳ್ಳಲಾಗುತ್ತದೆ ಎಂಬ ಬಗ್ಗೆ ಏನಾದರೂ ಕಾಂಕ್ರಿಟ್ ಪ್ರಪೋಸಲ್ಸ್ ಹಾಕಿದ್ದಾರೆಯೇ, ಆ ವಿಷಯದಲ್ಲಿ ನಮ್ಮ ರಾಜ್ಯಪಾಲರು ಹೇಳಲಿಲ್ಲ.

ಇನ್ನು ರಸ್ತೆ ಸಾರಿಗೆಯ ವಿಚಾರಕ್ಕೆ ಹೋದರೆ, ಶ್ರೀಮಾನ್ ಅಪ್ಪಣ್ಣನವರು ಬಹಳ ಚೆನ್ನಾಗಿ ಹೇಳಿದರು. ಯಾವ ಬಸ್ಸೂ, ಟೈಮಿನಲ್ಲಿ, ನಿಯಮಿತ ಸ್ಥಳ ಮುಟ್ಟುವುದಿಲ್ಲ. ನಾವು ಹೋಗ ಬೇಕೆಂದು ಉದ್ದೇಶಿಸಿರುವ ಸ್ಥಳವನ್ನು ಕಾಲಕ್ಕೆ ಸರಿಯಾಗಿ ಸೇರುವುದಿಲ್ಲ. ಶ್ರೀ ದೇವರಾಜ ಅರಸರಿಗೆ ಬಸ್ಸಿನಲ್ಲಿ ಹೋಗಿ, ಅದರ ಅನುಭವ ಕಡಮೆ ಇರಬೇಕು. ಆ ಬಸ್ಸು ಕೆಟ್ಟುಹೋಯಿತು ಅಂದರೆ, ಅದನ್ನು ಸರಿಮಾಡಲು ಸ್ಪ್ಯಾನರ್ ಸೆಟ್ಟು ಇರುವುದಿಲ್ಲ, ಬೆಲ್ಟ್ ಇರುವುದಿಲ್ಲ, ನಟ್ ಇರುವುದಿಲ್ಲ, ಪೈಪ್ ಇರುವುದಿಲ್ಲ. ಯಾವ ಡ್ರೈವರ್ ಕೈಯ್ಯಲ್ಲಿಯೂ ಸ್ಪ್ಯಾನರ್ ಇರುವುದಿಲ್ಲ. ಬಸ್ಸಿನಲ್ಲಿ ಕುಳಿತುಕೊಂಡರೆ, ಅದು ಎಲ್ಲಿ ನಿಂತರೆ ಅಲ್ಲೇ ನಿಂತುಬಿಡುತ್ತದೆ. ಜನಗಳ ತೊಂದರೆ ಹೇಳ ತೀರದು. ಇಂಥ ಕಾಲದಲ್ಲಿ ಇತರ ಭಾಗಗಳಲ್ಲಿಯೂ ಬಸ್ ಸರ್ವಿಸುಗಳನ್ನು ನ್ಯಾಷನಲೈಸ್ ಮಾಡುತ್ತಾರಂತೆ. ನಾನು ಹತ್ತಾರು ದೇಶವನ್ನು ನೋಡಿದ್ದೇವೆ. ಎಲ್ಲಿಯೂ ಈ ರೀತಿ ಟ್ರಾನ್ಸ್ ಪೋರ್ಟ್ ನ್ಯಾಷನಲೈಸ್ ಮಾಡಿಲ್ಲ. ಅಲ್ಲಿ ಏನು ಮಾಡಿದ್ದಾರೆಂದರೆ ಬಸ್ಸಿನಲ್ಲಿ ಮಿನಿಮಮ್ ರೇಟ್‌ಗಳನ್ನು ಫಿಕ್ಸ್‌ಮಾಡಿರುತ್ತಾರೆ, ಮ್ಯಾಕ್ಸಿಮಮ್ ಕಂಫರ್ಟ್ ಒದಗಿಸುತ್ತಾರೆ, ಬಸ್ಸಿನಲ್ಲಿ ಇಷ್ಟು ಸ್ಪ್ರಿಂಗುಗಳು ಹಾಕಿರಬೇಕು, ಇಷ್ಟು ಕನ್‌ವೀನಿಯನ್ಸ್ ಕೊಡಬೇಕು ಎಂದು ಜನಗಳಿಗೆ ಹೇಳಿರು ತ್ತಾರೆ. ಇಷ್ಟಾದಮೇಲೆ ಆಪರೇಟರುಗಳಲ್ಲಿ ಕಾಂಪಿಟಿಷನ್ ಇದ್ದು, ಒಬ್ಬರು ರೇಡಿಯೋ ಹಾಕುತ್ತೇ ವೆಂದು ಹೇಳುತ್ತಾರೆ, ಇನ್ನೊಬ್ಬರು ಡ್ರಿಂಕಿಂಗ್ ವಾಟರ್ ಸಪ್ಲೈ ಮಾಡುತ್ತೇವೆಂದು ಹೇಳುತ್ತಾರೆ. ಹೀಗೆ ಅಲ್ಲೆಲ್ಲಾ maximum comfort at minimum charges ಇರುತ್ತದೆ. ಇಲ್ಲಿ maximum charges andno comfort at all. ಅದೂ ಅಲ್ಲದೆ ನಮ್ಮ ಡೆಸ್ಟಿನೇಷನ್ನನ್ನೂ ನಾವು ಮುಟ್ಟುವುದಿಲ್ಲ. ಇಂಥ ರಾಷ್ಟ್ರೀಕರಣ ಮಾಡುತ್ತಾರೆ; ಇದನ್ನು ಏತಕ್ಕೋಸ್ಕರ ಮಾಡ ಬೇಕು ? ಬಸ್ಸಿನಲ್ಲಿ ಒಂದು ಊರಿಗೆ ಹೊರಟರೆ, ಪ್ರಯಾಣಿಕರು ಕೈಯ್ಯಲ್ಲಿ ಜೀವವನ್ನು ಹಿಡಿದು ಕೊಂಡಿರಬೇಕು, ಮಧ್ಯೇ ಅದು ಎಲ್ಲಿ ನಿಂತು ಹೋಗುತ್ತದೊ, ಊರನ್ನು ತಲಪುತ್ತೇವೋ ಇಲ್ಲವೋ ಎಂಬ ಚಿಂತೆ. ಹೀಗಿರುವಾಗ ನಮ್ಮ ರಸ್ತೆ ಸಾರಿಗೆ ರಾಷ್ಟ್ರೀಕರಣ ಮಾಡುವುದು ನಮ್ಮ ಕರ್ಮ ; ಇದಕ್ಕೆ ನಾವು ಥ್ಯಾಂಕ್ ಮಾಡಬೇಕು ?

ಇನ್ನು ಕೈಗಾರಿಕೆಯ ವಿಚಾರದಲ್ಲಿ ನಿತ್ಯ ಪೇಪರಿನಲ್ಲಿ ಓದುತ್ತೇವೆ, ಅಲ್ಯೂಮಿನಿಯಂ ಫ್ಯಾಕ್ಟರಿ, ಫರ್ಟಿಲೈಜರ್ ಫ್ಯಾಕ್ಟರಿ, ಸ್ಟೀಲ್ ಫ್ಯಾಕ್ಟರಿ ಆಗುತ್ತದೆಂದು. ಏನಾದರೂ ಅದರ ಒಂದು ಸುದ್ದಿ ನಮ್ಮ ರಾಜ್ಯಪಾಲರ ಭಾಷಣದಲ್ಲಿದೆಯೆ ? ನಮ್ಮ ಶರಾವತಿ ಯೋಜನೆಯಲ್ಲಿ ನಾವು ಸಂಪಾದಿಸ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ತಕ್ಕಂಥ ಎಲೆಕ್ಟ್ರಿಸಿಟಿ ಮುಂದಕ್ಕೆ ಎಲ್ಲಾ ಕನ್‌ಸ್ಯೂಮ್ ಮಾಡುವುದಕ್ಕೆ ಏನೇನು ಪ್ರಪೋಸಲ್ ಹಾಕಿದ್ದಾರೆ ? ಫ್ಯಾಕ್ಟರಿ ಮಾಡುತ್ತಾರೆನ್ನುವುದಕ್ಕೆ ಒಂದು ಚೂರು ಈ ವಿಚಾರದಲ್ಲಿ ಇಲ್ಲ, ಮಾಡುತ್ತಾರೆಂದರೆ ಏನಾದರೂ ಬೇಡವೆ ? ಹೇಳಿದ್ದರೆ ನಮ್ಮ ಮನಸ್ಸಿಗೆ ಸಮಾಧಾನವಾಗುತ್ತಿತ್ತು.

ನಮ್ಮ ತಾಲ್ಲೂಕು ತತ್ರಾಪಿ ನಮ್ಮ ಗವರ್ನಮೆಂಟನ್ನು ಥ್ಯಾಂಕ್ ಮಾಡಬೇಕು, ರೇಷ್ಮೆ ವ್ಯವಸಾಯ ಮಂತ್ರಿಗಳನ್ನು ಥ್ಯಾಂಕ್ ಮಾಡಬೇಕು. ಹಿಂದೆ ಹೇಳಿದ ತರಹ ಥ್ಯಾಂಕ್ಸ್ ಅಲ್ಲ, ಇದು ನಿಜವಾದ ಥ್ಯಾಂಕ್ಸ್. ಏಕೆಂದರೆ ಅವರು ಮಾರು ಕಟ್ಟೆ ಮಾಡಿ ರೇಷ್ಮೆ ವ್ಯವಸಾಯ ನಮ್ಮ ತಾಲ್ಲೂಕಿನಲ್ಲಿ ಸ್ವಲ್ಪ ಇಂಪ್ರೂವ್ ಮಾಡದೆ ಹೋಗಿದ್ದರೆ ಜನ ಹುಳುವಿನಂತೆ ಸತ್ತುಹೋಗುತ್ತಿದ್ದರು. ದೇವರು ಅವರಿಗೆ ನಿಜವಾಗಿ ಒಳ್ಳೆಯದು ಮಾಡಲಿ. ಈ ವಿಚಾರದಲ್ಲಿ ಜಾಸ್ತಿ ನಿಗ ತೆಗೆದುಕೊಳ್ಳಲಿ ಎಂದು ಹೇಳುತ್ತೇನೆ. ಇದರ ಜೊತೆಗೆ, ಸಿಲ್ಕ್ ಫಿಲೇಚರ್ಸ್ ಸ್ವಲ್ಪ ನಷ್ಟದಲ್ಲಿ ರನ್ ಆಗುತ್ತಾ ಇದೆ. ಜಪಾನೀಸ್ ಕೋಲಾಬರೇಷನ್ನಿನಿಂದ ಇವರು ಒಂದು ಫಿಲೇಚರ್ಸ್ ತೆಗೆದು ಅದು ಏನಾದರೂ ಇನ್ನೂ ಸ್ವಲ್ಪ ಮುಂದುವರಿಯುವಂತೆ ಮಾಡಲಿ ಎಂದು ನಾನು ಹೇಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಗ್ಗೆ ಒಂದು ಮಾತನ್ನಾಡಿ ನನ್ನ ಮಾತು ಮುಗಿಸುತ್ತೇನೆ. ನಮ್ಮ ದೇಶಕ್ಕೆ ಇದು ನಿಜವಾಗಿ curse, ಶಾಪ ಎಂದು ಹೇಳಬೇಕಾಗಿದೆ. ನಮ್ಮ ಸುವರ್ಣಗಾರರಿಗೆ ಸಹಾಯ ಮಾಡುವುದಕ್ಕೋಸ್ಕರ, ಮತ್ತು ಎಲ್ಲರಿಗೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮಾಡಿದೆ ಎಂದು ಇವರು ಹೇಳುತ್ತಿದ್ದರು. ಅಲ್ಲಿರತಕ್ಕಂಥ ಮೈಸೂರು ಆಫೀಸರಿಗೆ ನಮ್ಮ ಸರಕಾರ ಯಾವತರಹ ಶಿಕ್ಷೆ ಮಾಡಿದರೂ ಅದು ಕಡಮೆಯೇ ಎಂದು ಹೇಳಬೇಕಾಗಿದೆ. ಈಗಿರುವಂಥ ಸ್ಥಿತಿಯಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಇರುವುದಾದರೆ, ಅದು ಏಕೆ ಬೇಕೋ ಎನ್ನುವುದನ್ನು ಸರಕಾರದವರು ಗಮನಿಸಬೇಕು.

ಇಷ್ಟು ಎಲ್ಲಾ ಹೇಳಿದ ಗವರ್ನರಿಗೆ Many Many Thanks ಹೇಳಿ, ಇಷ್ಟರವರೆಗೆ ಮಾತನಾಡಲು ಅವಕಾಶ ಕೊಟ್ಟ ನಮ್ಮ ಅಧ್ಯಕ್ಷರಿಗೆ ವಂದನೆಯನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಡಿ. ದೇವೇಂದ್ರಪ್ಪ.—ಸಭಾಪತಿಯವರೇ, ರಾಜ್ಯಪಾಲರು ಅನೇಕ ವರ್ಷಗಳಿಂದ ಇಂಗ್ಲೀಷ್‌ನಲ್ಲಿ ಭಾಷಣ ಮಾಡತಕ್ಕ ಪದ್ಧತಿಯನ್ನು ಇಟ್ಟುಕೊಂಡು ಬಂದಿದ್ದರು. ಈ ಒಂದು ಕಾಲದಲ್ಲಿ ಅವರು ಇಡೀ ಕರ್ನಾಟಕದ ಜನತೆಗೆ ಬೇಕಾಗಿರತಕ್ಕ ಮತ್ತು ಅವರು ಅಪೇಕ್ಷೆ ಮಾಡತಕ್ಕ ಮಾತೃ ಭಾಷೆಯಾದ ಕನ್ನಡದಲ್ಲಿ ಭಾಷಣ ಮಾಡಿದ್ದಕ್ಕೆ ನಾನು ಇಡೀ ಕರ್ನಾಟಕದ ಜನತೆಯ ಪರವಾಗಿ ಅವರನ್ನು ವಂದಿಸುತ್ತೇನೆ. ಹಾಗೂ ನಮ್ಮ ರಾಜ್ಯಪಾಲರು ನಮ್ಮ ರಾಜ್ಯದಲ್ಲಿ ಹುಟ್ಟಿ ಬೆಳೆದು ಅನೇಕ ವರ್ಷಗಳಿಂದ ನಮ್ಮ ಮೈಸೂರು ರಾಜ್ಯದ ರಾಜರಾಗಿ ಆಳಿಕೊಂಡು ಬಂದು, ಸ್ವಾತಂತ್ರ್ಯ ಬಂದ ನಂತರವೂ ನಮ್ಮ ರಾಜ್ಯದ ರಾಜ್ಯಪಾಲರಾಗಿ ಮುಂದುವರಿದುಕೊಂಡು ಬಂದಿರುತ್ತಾರೆ. ಆದ್ದರಿಂದ ನಮ್ಮ ನೆಚ್ಚಿನ ರಾಜ್ಯಪಾಲರಾದ ಅವರನ್ನೇ ಖಾಯಂ ರಾಜ್ಯಪಾಲರಾಗಿ ಮುಂದುವರಿಸಬೇಕೆಂದು ರಾಜ್ಯ ಸರಕಾರವನ್ನೂ ಕೇಂದ್ರ ಸರಕಾರವನ್ನೂ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ರಾಜ್ಯಪಾಲರ ಭಾಷಣದಲ್ಲಿ ನಮ್ಮ ರಾಜ್ಯಕ್ಕೆ ಹೊಂದಿಕೊಳ್ಳುವ ಕೆಲವು ಅಭಿವೃದ್ಧಿ ಕೆಲಸಗಳ ವಿಷಯವಾಗಿ ಹೇಳಿರುವುದನ್ನು ನೋಡಿದರೆ ಅವರ ಭಾಷಣ ಬಹಳ ಅಮೂಲ್ಯವಾದ ಭಾಷಣವಾಗಿರುತ್ತದೆ. ಇನ್ನೂ ಅಭಿವೃದ್ಧಿ ಮಾಡತಕ್ಕ ಕೆಲಸ ಕಾರ್ಯಗಳು ಮುಂದೆ ಬೇಕಾದಷ್ಟು ಇವೆ. ರಾಜ್ಯಪಾಲರ ಭಾಷಣದಲ್ಲಿ ವ್ಯವಸಾಯ ಮತ್ತು ವ್ಯವಸಾಯದ ಉತ್ಪನ್ನಕ್ಕೆ ಅಧಿಕ ಹಣ ಖರ್ಚು ಮಾಡುತ್ತಾ ಇದ್ದೇವೆ ಎಂಬ ವಿಷಯವನ್ನು ಹೇಳಿದ್ದಾರೆ. ವ್ಯವಸಾಯದ ಅಭಿವೃದ್ಧಿಗೆ ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳು ಹೆಚ್ಚಿನ ಕೆಲಸವನ್ನು ಮಾಡುತ್ತವೆ ಎಂಬ ಮಾತನ್ನು ಹೇಳಿದ್ದಾರೆ. ಆಹಾರಧಾನ್ಯಕ್ಕೆ ಅಥವಾ ವ್ಯವಸಾಯಕ್ಕೆ ಹೆಚ್ಚು ಹಣ ಖರ್ಚು ಮಾಡಿದ್ದರೂ ಇನ್ನೂ ಹೆಚ್ಚು ಹಣವನ್ನು ಖರ್ಚು ಮಾಡಿ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕಾಗಿದೆ. ಒಂದು ವಿಷಯವನ್ನು ಈ ಸಂದರ್ಭದಲ್ಲಿ ನಾವು ಪ್ರಸ್ತಾಪ ಮಾಡಬೇಕಾಗಿದೆ. ಆಹಾರ ಧಾನ್ಯದ ಬೆಲೆ ಜಾಸ್ತಿಯಾಗಿದೆ, ಜಾಸ್ತಿಯಾಗಿದೆ, ಜಾಸ್ತಿಯಾಗಿದೆ ಎನ್ನತಕ್ಕ ಮಾತನ್ನು ಕೆಲವು ಸದಸ್ಯರು ಹೇಳುತ್ತಾರೆಯೇ ವಿನಾ ಅಷ್ಟೇ ಪ್ರಾಮುಖ್ಯವಾದ ದಿನ ನಿತ್ಯ ಬಳಸತಕ್ಕ ಪ್ರತಿಯೊಂದು ಸಾಮಾನಿನ ಬೆಲೆಯೂ ಕೂಡ ಜಾಸ್ತಿಯಾಗಿದೆ ಎಂಬುದನ್ನು ಹೇಳದೆ ನಾಲ್ಕಾರು ಆಹಾರ ಪದಾರ್ಥಗಳ ಬೆಲೆ ಮಾತ್ರ ಜಾಸ್ತಿಯಾಗಿದೆ ಎಂದು ಹೇಳುವುದು ಸರಿಯಲ್ಲ. ನಾನಾದರೂ ಹೇಳುತ್ತೇನೆ, ಇವತ್ತು ಕಬ್ಬಿಣದ ಧಾರಣೆ, ಸಿಮೆಂಟಿನ ಧಾರಣೆ ಹತ್ತಿ ಧಾರಣೆ ಅಥವಾ ಔಷಧಿ ಧಾರಣೆ ಯಾವುದನ್ನು ತೆಗೆದುಕೊಂಡರೂ ಕೂಡ ಗಗನ ಮುಟ್ಟುತ್ತಾ ಇದೆ. ಅದನ್ನು ಹೇಳುವುದನ್ನು ಬಿಟ್ಟು ಬರೀ ಆಹಾರ ಧಾನ್ಯದ ಬೆಲೆ ಜಾಸ್ತಿಯಾಗಿದೆ, ಎಂಬ ಕೂಗನ್ನು

ಹೇಳುತ್ತಾ ಇದ್ದಾರೆ. ಇದು ಬಹಳ ವ್ಯಸನಪಡತಕ್ಕ ವಿಚಾರ. ವ್ಯವಸಾಯದ ಉತ್ಪನ್ನ ಮಾಡತಕ್ಕ ರೈತರು ದೇಶದಲ್ಲಿ ಶೇಕಡ 80 ಭಾಗ ಇದ್ದಾರೆ. ಉಳಿದ ಕೊಂಡುಕೊಂಡು ತಿನ್ನತಕ್ಕ ಜನ ಶೇಕಡ 20 ಭಾಗ ಇದ್ದಾರೆ. ಶೇಕಡ 80 ಭಾಗದ ಜನರಿಗೆ ರಕ್ಷಣೆ ನೀಡುವುದು ಯೋಗ್ಯವೇ ಅಥವಾ ಶೇಕಡ 20 ಭಾಗದ ಜನ ಕೊಂಡುಕೊಂಡು ತಿನ್ನತಕ್ಕವರಿಗೆ ರಕ್ಷಣೆ ಕೊಡುವುದು ಯೋಗ್ಯವೇ ಎಂಬುದನ್ನು ನೋಡಬೇಕು. ವ್ಯವಸಾಯಗಾರರು ಬರೀ ವ್ಯವಸಾಯವನ್ನೇ ಮಾಡಿಕೊಂಡು ಇದಿದ್ದರೆ ಬಹುಶಃ ಈ ಮಾತನ್ನು ನಾನು ಇವತ್ತು ಹೇಳುತ್ತಾ ಇರಲಿಲ್ಲ. ಇವತ್ತಿನ ದಿವಸ ಜನಸಂಖ್ಯೆ ಜಾಸ್ತಿ ಯಾಗುತ್ತಾ ಇದೆ. ಹಿಂದೆ ಅನೇಕ ಸಂದರ್ಭಗಳಲ್ಲಿ ಜಮೀನು ಪಾಳು ಬಿದ್ದ ನಿದರ್ಶನಗಳು ಇವೆ. ಈಗ ಫಾರಸ್ಟ್ ಇಲಾಖೆಯವರೂ ಎಷ್ಟೋ ಜಮೀನುಗಳನ್ನು ಸಾಗಿಗೆ ಕೊಟ್ಟರೂ ಆಹಾರದ ಅಭಾವ ಕಾಣುತ್ತಾ ಇದೆ. ಈ ರೀತಿ ಏಕೆ ಆಗುತ್ತಾ ಇದೆ ಎಂಬುದನ್ನು ನಾವು ಇವತ್ತಿನ ದಿವಸ ಮುಖ್ಯ ವಾಗಿ ಪ್ರಸ್ತಾಪ ಮಾಡಬೇಕಾಗಿದೆ. ಈಗ ಅವರಿಗೆ ಸರಿಯಾದ ಧಾರಣೆ ಸಿಕ್ಕುತ್ತಾ ಇಲ್ಲ. ಈಗಿರತಕ್ಕ ಧಾರಣೆ ಇದ್ದದ್ದರಲ್ಲಿ ಸ್ವಲ್ಪ ಅನುಕೂಲವಾಗಿದ್ದರೂ ಅದು ಸಾಲದು ಎಂಬುದನ್ನು ನಾವು ಇವತ್ತಿನ ದಿವಸ ಹೇಳಲೇಬೇಕಾಗಿದೆ. ವ್ಯವಸಾಯದ ಇಲಾಖೆಯವರು ಹೇಳುತ್ತಾ ಇದ್ದಾರೆ, ಒಂದು ಎಕರೆಯಲ್ಲಿ ಬತ್ತ ಬೆಳೆಯಬೇಕಾದರೆ ಎಷ್ಟು ಖರ್ಚು ಬಂತು ಎಷ್ಟು ಉತ್ಪನ್ನ ಬಂತು ಎಂಬ ಬಗ್ಗೆ ಅವರಲ್ಲಿ ಲೆಕ್ಕ ಇದೆ ಎಂದು ಲೆಕ್ಕಾಚಾರ ಹಾಕಿ ನೋಡಿದರೆ ಈಗಿರತಕ್ಕ ಧಾರಣೆವಾಸಿ ಕಡಿಮೆ ಇನ್ನೂ ಕೂಡ ಜಾಸ್ತಿ ಮಾಡಬೇಕು, ಮಾಡದೇ ಹೋದ ಪಕ್ಷದಲ್ಲಿ ಆಹಾರದ ಕೊರತೆ ಇದ್ದೇ ಇರುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಅನೇಕ ಜನ ರೈತರು ಆಹಾರ ಧಾನ್ಯಗಳಿಗೆ ಧಾರಣೆವಾಸಿ ಕಡಿಮೆ ಬರುತ್ತದೆ ಎಂದು ಹೇಳಿ ಹೆಚ್ಚು ಧಾರಣೆವಾಸಿ ಬರತಕ್ಕ ಅಡಿಕೆ, ತೆಂಗು, ದ್ರಾಕ್ಷಿ ತೋಟ ಗಳನ್ನು ಮಾಡುತ್ತಾ ಇದ್ದಾರೆಯೇ ಹೊರತು ದಿನಂಪ್ರತಿ ಉಪಯೋಗ ಮಾಡತಕ್ಕ ಆಹಾರ ಧಾನ್ಯಗಳ ಬೆಳೆಯನ್ನು ಕಡಮೆ ಮಾಡುತ್ತಾ ಇದ್ದಾರೆ. ಇದನ್ನು ನಾವೆಲ್ಲರೂ ಯೋಚನೆ ಮಾಡ ಬೇಕಾಗಿದೆ. ಸರಕಾರದವರೂ ಇದರ ಬಗ್ಗೆ ಸೂಕ್ತವಾದ ಒಂದು ತೀರ್ಮಾನವನ್ನು ತೆಗೆದುಕೊಂಡು ಆಹಾರ ಧಾನ್ಯಗಳಿಗೆ ನ್ಯಾಯವಾದ ಒಂದು ದರವನ್ನು ನಿಗದಿ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಪಂಚಾಯಿತ್ತಿ ವ್ಯವಸಾಯೋತ್ಪಾದನೆ ಯೋಜನೆಗಳನ್ನು ಸಕಲ ಪಂಚಾಯತಿಗಳಲ್ಲೂ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ನ್ಯಾಯವಾದ ರೀತಿಯಲ್ಲಿ ನಡೆಯುತ್ತಾ ಇಲ್ಲ. ಈ ಯೋಜನೆಯ ಮೂಲಕ ಒದಗಿಸತಕ್ಕ ಸೌಲಭ್ಯಗಳನ್ನು ಗ್ರಾಮನೌಕರರ ಮೂಲಕ ಒದಗಿಸಲು ಏರ್ಪಾಡು ಮಾಡಿದ್ದೀರಿ ಆದರೆ ಅವರು ರಚನಾತ್ಮಕವಾಗಿ ಕೆಲಸ ಮಾಡುತ್ತಾ ಇಲ್ಲ. ಆದ್ದರಿಂದ ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡತಕ್ಕಂಥ ಏರ್ಪಾಡುಗಳನ್ನು ತಾವು ಮಾಡಬೇಕು ; ಎಂದು ಹೇಳಿ ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಮಳೆ ಬೆಳೆಗಳ ವಿಶೇಷ ಪರಿಸ್ಥಿತಿಯ ವಿಷಯವನ್ನು ಹೇಳಿದ್ದಾರೆ. ಸಾಮಾನ್ಯವಾಗಿ ಭಾರಿ ಮಳೆ ಬೀಳುವ ಪ್ರದೇಶಗಳಲ್ಲೂ ಭಾರೀ ಪ್ರಮಾಣದ ಪ್ರವಾಹಗಳೇನೂ ಇರಲಿಲ್ಲ, ಮಳೆ ಬಿದ್ದುದೇ ತಡವಾಗಿ, ಬಿದ್ದ ಮಳೆಯೂ ಕಡಿಮೆ, ಇದರಿಂದಾಗಿ ಪೂರ್ವ ಭಾಗದ ಕೆಲವು ಜಿಲ್ಲೆಗಳಲ್ಲಿ ಮುಖ್ಯ ವಾಗಿ ಚಿತ್ರದುರ್ಗ, ತುಮಕೂರು, ಕೋಲಾರ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಳೆ ಬೆಳೆಗಳು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ ಎಂದು ಹೇಳಿದ್ದಾರೆ ಇದು ವ್ಯಸನಕರವಾದ ಸಂಗತಿ. ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಮಳೆಯಾಗದೇ ಅನೇಕ ಕಡೆ ಫಸಲು ಆಗಿಲ್ಲ ಹಾಗೂ ನೀರಿನ ಆಶ್ರಯವಿರತಕ್ಕ ಕೆಲವು ಭಾಗಗಳಲ್ಲೂ ಅನೇಕ ರೋಗಗಳು ಬಂದು 20 ಪಲ್ಲ ಬೆಳೆಯುವ ಕಡೆ 10–12 ಪಲ್ಲಾ ಬೆಳೆಯಾಗಿದೆ. ಅದನ್ನೂ ತಾವು ವಿಚಾರ ಮಾಡಬೇಕಾಗಿದೆ ಎಂಬುದನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನೀರಿನ ಬಾವಿಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ತಮ್ಮ ಅಂಕಿಅಂಶಗಳ ಪ್ರಕಾರ ನೋಡಿದರೂ ಎಷ್ಟು ಮಟ್ಟಿಗೆ ತಮ್ಮ ಅಧಿಕಾರಿಗಳು ಕೆಲಸ ಮಾಡುತ್ತಾ ಇದ್ದಾರೆ ಎಂಬುದು ಅರ್ಥವಾಗುತ್ತದೆ. ಮಂಜೂರಾಗಿರತಕ್ಕ 27,500 ಬಾವಿಗಳ ಪೈಕಿ ಅರ್ಧ ಆಗಿವೆ, ಇನ್ನು ಅರ್ಧ ಆಗಿಲ್ಲ ಎಂದು ಅವರೇ ಹೇಳುತ್ತಾರೆ. ಆದ್ದರಿಂದ ಪಂಪ್‌ಸೆಟ್ಟುಗಳು ಇನ್ನೂ ಹೆಚ್ಚಾಗಿ ಕೆಲಸ ಮಾಡುವಂತಹ ಏರ್ಪಾಡನ್ನು ತಾವು ಮಾಡಬೇಕೆಂದು ಹೇಳುತ್ತೇನೆ.

ಕೈಗಾರಿಕೆಗಳಿಗೆ ಸಂಬಂಧಪಟ್ಟ ವಿಚಾರ. ಭದ್ರಾವತಿ ಕಾರ್ಖಾನೆಯಲ್ಲಿ 77,000 ಟನ್ನು ಗಳಷ್ಟು ವಿಶೇಷ ರೀತಿಯ ಉಕ್ಕನ್ನು ಉತ್ಪನ್ನ ಮಾಡುವ ಯೋಜನೆಯನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಇದು ಸಂತೋಷದ ಸಂಗತಿ. ಅಲ್ಲಿ ಕಾರ್ಮಿಕರಿಗೆ ವಸತಿ ಸೌಕರ್ಯದ ಬಗ್ಗೆ ಯಾವ ಒಂದು ವಿಚಾರವನ್ನೂ ಪ್ರಸ್ತಾಪ ಮಾಡಿಲ್ಲ. ಕೈಗಾರಿಕೆ ಎಲ್ಲಿ ಬೆಳೆಯುತ್ತದೆಯೋ ಅಲ್ಲಿ ಕಾರ್ಮಿಕರಿಗೆ ವಾಸಕ್ಕೆ ಸರಿಯಾದ ಮನೆ ಇಲ್ಲದೇ ಹೋದರೆ ಅವರು ಕಾರ್ಖಾನೆಯಲ್ಲಿ ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಎಲ್ಲಿ ಕೆಲಸ ಮಾಡುತ್ತಾರೆಯೋ ಅಲ್ಲಿ ಬಿಸಿಲು

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಮತ್ತು ಬೆಂಕಿಯು ಶಾಖ ವಿಪರೀತವಾಗಿರುತ್ತದೆ. ಅಂತಹವರು ಹುಲ್ಲು ಗುಡಿಸಿಲಿನಲ್ಲಿ ವಾಸ ಮಾಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಕಾರ್ಮಿಕರ ವಸತಿ ಸೌಕರ್ಯಕ್ಕೆ ಸ್ವಲ್ಪ ಹಣವನ್ನು ಒದಗಿಸಿದ್ದರೆ ಚೆನ್ನಾಗಿತ್ತು. ಆ ವಿಷಯವನ್ನು ಇವರಲ್ಲಿ ಪ್ರಸ್ತಾಪ ಮಾಡದೇ ಇರುವುದು ಅಷ್ಟು ಸಮಂಜಸವಾಗಿ ಕಾಣುತ್ತಾ ಇಲ್ಲ. ಮಾನ್ಯ ಹಣಕಾಸಿನ ಸಚಿವರು ಈ ಬಡ್ಜೆಟ್ಟಿನಲ್ಲೇ ವಸತಿಗೃಹಗಳ ರಚನೆಗೆ ಹಣ, ಒದಗಿಸುತ್ತಾರೆಂದು ನಂಬಿದ್ದೇನೆ. ರಾಜ್ಯಪಾಲರು ಕನ್ನಡದಲ್ಲೇ ಭಾಷಣ ಮಾಡಿರುವುದನ್ನು ಗಮನಿಸಿ ಅಧ್ಯಕ್ಷರೂ ಸಹ ಕನ್ನಡದಲ್ಲೇ ಉತ್ತರ ಕೊಡಬೇಕೆಂದು ಪ್ರಾರ್ಥನೆಮಾಡಿ ನಾನು ನನ್ನ ಭಾಷಣವನ್ನು ಪೂರೈಸುತ್ತೇನೆ.

ಅಧ್ಯಕ್ಷರು.—ನನಗೆ ಯಾರೂ ಆ ರೀತಿ ಪ್ರಶ್ನೆ ಹಾಕುವುದಿಲ್ಲ, ಹಾಕಿದರೆ ಕನ್ನಡದಲ್ಲೇ ಉತ್ತರ ಕೊಡಬಹುದು.

† ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ)—ಮೈಸೂರು ರಾಜ್ಯಪಾಲರು ತಾವು ಮಾಡಿದ ಭಾಷಣ ದಲ್ಲಿ ಒಂದು ಹೊಸ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಅವರು ನಮ್ಮ ರಾಜ್ಯದಲ್ಲಿ ಕನ್ನಡದಲ್ಲೇ ಭಾಷಣಮಾಡಿದ್ದು ಬಹಳ ಸಂತೋಷಕರ.

ನಮ್ಮ ಅನೇಕ ಸ್ನೇಹಿತರುಗಳು ಆಡಳಿತ ವಿಚಾರದಲ್ಲಿ ಮಾತನಾಡಿದ್ದಾರೆ, ನಾನೂ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎರಡು ಮಾತುಗಳನ್ನಾಡಲಿಚ್ಛಿಸುತ್ತೇನೆ. ಬೆಂಗಳೂರು ಕಾರ್ಪೊರೇಷನ್ ಪ್ರದೇಶದ ಕಷ್ಟನಷ್ಟಗಳನ್ನು ನೋಡಿ ಒಳ್ಳೆಯ ಉದ್ದೇಶದಿಂದ ಕಾವೇರಿ ನದಿಯ ನೀರನ್ನೊದಗಿಸಲು ತೀರ್ಮಾನಿಸಿದ್ದಾರೆ. ಅದಕ್ಕಾಗಿ ಬೇಕಾದ ಪೈಪುಗಳಿಗೆ ಆರ್ಡರು ಕೊಟ್ಟಿದ್ದಾರೆ. ಆದುದರಿಂದ ಕಾರ್ಪೊರೇಷನ್ನಿನ ಪರವಾಗಿ ವಿಧಾನಸಭೆಯ ಸದಸ್ಯರಿಗೆ ವಂದಿಸುತ್ತೇನೆ. ಇನ್ನೊಂದು ವಿಚಾರ ವೇನೆಂದರೆ ನಮ್ಮ ಕಾರ್ಪೊರೇಷನ್ ಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ಉಪನಗರಗಳ ನಿರ್ಮಾಣದ ವಿಚಾರವನ್ನು ಸಹ ನಮೂದಿಸಿದ್ದಾರೆ. ಹಾಗೆ ಮಾಡುವುದು ಹಿತಕರ. ಪ್ರತಿವರ್ಷವೂ ಕೊಳಕು ಪ್ರದೇಶಗಳನ್ನು ನಿರ್ಮೂಲ ಮಾಡುವುದಾಗಿ ಕಾರ್ಪೊರೇಷನವರು ಮತ್ತು ಸರ್ಕಾರ ದವರು ಹೇಳುತ್ತಿದ್ದಾರೆ. ಆದರೆ ಇದುವರೆಗೆ ಆ ಸಂಬಂಧದಲ್ಲಿ ಸರಿಯಾದ ಕೆಲಸವೇನೂ ಆಗಿಲ್ಲ. ದಿನೇ ದಿನೇ ಕೊಳಕುಪ್ರದೇಶ ಬೆಳೆಯುತ್ತಿದೆ. ನಮ್ಮಲ್ಲಿ ಅನೇಕ ಸರ್ಕಾರಿ ಕಾರ್ಖಾನೆಗಳಿವೆ, ಎಚ್. ಎಂ. ಟಿ., ಎಚ್. ಎ. ಎಲ್., ಐ. ಟಿ. ಐ. ಮುಂತಾದ ಅನೇಕ ಕಾರ್ಖಾನೆಗಳು ಕಾರ್ಪೊ ರೇಷನ್ ಪ್ರದೇಶಕ್ಕೆ ದೂರವಾಗಿ ಸ್ಥಾಪಿಸಲ್ಪಟ್ಟಿವೆ ಮತ್ತು ಅವುಗಳ ನೌಕರರಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ. ಆದರೂ ಕೂಡ ಸಾವಿರಾರು ಕೆಲಸಗಾರರು ಪಟ್ಟಣದಿಂದ ಕಾರ್ಖಾನೆಗಳಿಗೆ ಹೋಗಿ ಬರುತ್ತಿದ್ದಾರೆ. ಅವರಲ್ಲಿ ಕೆಲವರು ಸ್ಲಂಪ್ರದೇಶಗಳಲ್ಲಿದ್ದಾರೆ. ಅವರಿಗೆ ಮನೆಗಳನ್ನು ಕಟ್ಟಿಸಿ ಕೊಟ್ಟರೆ ಸ್ಲಂ ಕ್ಲಿಯರ್ ಆಗುವುದಲ್ಲದೆ ಬೆಂಗಳೂರು ನಗರದಲ್ಲಿ ಮನೆಗಳ ಅಭಾವವೂ ಕಡಮೆ ಯಾಗುತ್ತದೆ, ಸ್ಲಂ ಡೆವಲಪ್ ಆಗುವುದೂ ಕಡಮೆಯಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಕ್ರಮ ಕೈಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇಷ್ಟು ಮಾತ್ರವೇ ಅಲ್ಲದೆ, ಕಾರ್ಖಾನೆಗಳ ಬಳಿ ಕಟ್ಟಿಸಿದ ಮನೆಗಳಿಗೆ ಸ್ಲಂಪ್ರದೇಶದಲ್ಲಿರುವವರು ಹೋದಮೇಲೆ ಅವರಿದ್ದ ಗುಡಿಸಲುಗಳನ್ನು ಇನ್ನೊಬ್ಬರಿಗೆ ಕೊಡದ ಹಾಗೆ ನೋಡಿಕೊಳ್ಳಬೇಕಾದುದು ಕಾರ್ಪೊರೇಷನ್ ಮತ್ತು ಸರ್ಕಾರದ ಕರ್ತವ್ಯ.

ಇನ್ನೊಂದು ವಿಷಾದ ವಿಚಾರ. ಬೆಂಗಳೂರಿನಲ್ಲಿ ಆಹಾರ ಪದಾರ್ಥಗಳ ಬೆಲೆ ಇಡೀ ಭಾರತ ದಲ್ಲೇ ಹೆಚ್ಚಿನದು, ಜೀವನಮಟ್ಟ ಏರಿದೆ, ಏರಿದೆ ಎಂಬುದು ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ. ಕೆಲವು ತಿಂಗಳ ಹಿಂದೆ ಹುಡುಗರು ಉಪವಾಸ ಮಾಡಿದ ಮೇಲೆ 200 ರೂಪಾಯಿಗಳ ಮೇಲೆ ತಿಂಗಳಿಗೆ ಸಂಪಾದನೆ ಇರುವವರ ಮಕ್ಕಳಿಗೆ ಶುಲ್ಕದ ರಿಯಾಯಿತಿ ತೋರಿಸಿರುತ್ತಾರೆ. ಹಾಗಿರುವಾಗ 200 ರೂಪಾಯಿಗಳಿಗಿಂತ ಕಡಮೆ ವರಮಾನವಿರುವವರಿಗೆ ಜೀವನ ಎಷ್ಟು ಕಷ್ಟತರವಾಗಿರು ತ್ತದೆಂಬುದನ್ನು ನಾನು ಹೇಳಬೇಕಾಗಿಲ್ಲ. ಆ ದೃಷ್ಟಿಯಿಂದ ಹೇಳುವುದಾದರೆ ಕಾರ್ಪೊರೇಷನ್ 5 ವರ್ಷಗಳಿಗೊಮ್ಮೆ ಕಂದಾಯ ಹೆಚ್ಚಿಸುತ್ತಿದೆ, ಹೆಚ್ಚಿನ ಬಾಡಿಗೆ ಬಂದರೆ ಕಂದಾಯ ಜಾಸ್ತಿ ಮಾಡು ತ್ತಿದೆ. ಆ ನೆವದಿಂದ ಮನೆ ಮಾಲೀಕರು ಬಾಡಿಗೆದಾರರಿಂದ ಹೆಚ್ಚು ಬಾಡಿಗೆ ವಸೂಲು ಮಾಡುತ್ತಾರೆ ಮತ್ತು ಹೆಚ್ಚು ಕಿರುಕುಳ ಕೊಡುತ್ತಾರೆ. ಅಲ್ಲದೆ ಬಿಲ್ಡಿಂಗ್ ಟ್ಯಾಕ್ಸ್ ಅನ್ನು ಬೇರೆ ವಿಧಿಸಿದ್ದಾರೆ. ಇದನ್ನು ಉಪಯೋಗ ಮಾಡಿಕೊಂಡು ಮಾಲೀಕರು ಬಾಡಿಗೆಯನ್ನೂ ಇನ್ನೂ ಹೆಚ್ಚಿಸುವ ಪರಿಸ್ಥಿತಿ ಯಲ್ಲಿದ್ದಾರೆ. ಇದರಿಂದ ಬಡ ನೌಕರರ ಮಾತು ಜನರ ವಾಸದ ಮನೆಯ ವಿಚಾರ ಬಹಳ ಕಷ್ಟತರ ವಾಗಿದೆ. ಈ ದೃಷ್ಟಿಯಿಂದ ಸರ್ಕಾರದಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಮನೆ ಬಾಡಿಗೆ ಭತ್ಯ ಮತ್ತು ತುಟ್ಟಿ ಭತ್ಯ ಕೊಡುತ್ತಿರುವುದನ್ನು ಹೆಚ್ಚಿಸಿ ಯಾವ ಪಟ್ಟಣಗಳಲ್ಲಾಗಲಿ ಅದರಲ್ಲೂ ಬೆಂಗಳೂರಿ ನಲ್ಲಿರುವ ನೌಕರರಿಗೆ ಸೌಕರ್ಯ ಕಲ್ಪಿಸಿ ಕೊಡಬೇಕು. ಈ ವಿಚಾರದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿಲ್ಲ.

ಆಮೇಲೆ ಕಾರ್ಪೊರೇಷನ್ನಿಂದ 1954ನೆಯ ಇಸವಿಯ ಲಾಗಾಯ್ತು ಅನೇಕ ಬೇಡಿಕೆಗಳು, ಕಾನೂನಿನ ತಿದ್ದುಪಡಿಗಳು ಸರ್ಕಾರಕ್ಕೆ ಕಳುಹಿಸಲ್ಪಡುತ್ತಿವೆ. ಅವಕ್ಕೆ ಇಲ್ಲಿಯವರೆಗೂ ಹೆಚ್ಚಿನ ಬೆಲೆ ಬಂದಿಲ್ಲ. ಸುಮಾರು 14 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ ಇರುವ ಈ ನಗರದಲ್ಲಿರುವ ಕೌನ್ಸಿಲರುಗಳ ಕಷ್ಟದ ಕಡೆ ಗಮನ ಕೊಡಬೇಕು. ಅವರಿಗೆ ಬೇರೆ ರೀತಿಯ ಸಂಪಾದನೆಯಿದೆ, ಕಷ್ಟವಿಲ್ಲ ಎಂಬ ಭಾವನೆಯಿದೆ. ಆದರೆ ನಿಷ್ಠಾವಂತರಾಗಿ ಜನಸೇವೆ ಮಾಡುವ ಬಡವರಿಗೆ ಬಹಳ ಅನ್ಯಾಯವಾಗಿದೆ. ನಾನು ಈ ಸಭೆಗೆ ಇಂದು ಪ್ರಾತಃಕಾಲ 8½ ಗಂಟೆಗೆ ಬರಬೇಕಾಗಿತ್ತು. ಆದರೆ ಒಂದು ರಸ್ತೆ ನಿರ್ಮಾಣ ಕಾರ್ಯವನ್ನು ನೋಡಿಕೊಂಡು ತಕ್ಕ ವ್ಯವಸ್ಥೆ ಮಾಡಿ ಬರಬೇಕಾಗಿತ್ತು, ಅದರಿಂದ ತಡ ವಾಯಿತು. ಕಾರ್ಪೊರೇಷನ್ ಸದಸ್ಯರು ಹಗಲೂ ರಾತ್ರಿ ದುಡಿದು ಜನರಿಗೆ ಸೌಕರ್ಯ ಕಲ್ಪಿಸಬೇಕು. ಇಲ್ಲಿನ ಮೀಟಿಂಗ್‌ನ ಜೊತೆಗೆ ಕಾರ್ಪೊರೇಷನ್ನಿನ ಬಡ್ಜೆಟ್ ಮೀಟಿಂಗ್ ಸಹ ಇರುತ್ತದೆ. ಇಷ್ಟೆಲ್ಲಾ ನೋಡಿಕೊಂಡು ನಾವು ಬದುಕುವ ದಾರಿಯ ಕಡೆಗೂ ಗಮನ ಕೊಡಬೇಕಾಗುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ಅವರಿಗೆ ಒಂದು ಸಿಟಿಂಗ್ ಫೀಜನ್ನಾದರೂ ಕೊಡಬೇಕಾದುದು ನ್ಯಾಯವಾಗಿದೆ. ಅವರು ಕಷ್ಟದಿಂದ ಜೀವನ ಮಾಡಬೇಕಾಗಿದೆ. ನೀರಿನ ತೊಂದರೆ, ಸೊಳ್ಳೆಕಾಟ-ಇವುಗಳ ನಿವಾರಣೆಗೆ, ಬೆಂಗಳೂರಿನಲ್ಲಿ ಉದ್ಯಾನವನಗಳ ನಿರ್ಮಾಣ ಮುಂತಾದ ಕಾರ್ಯಗಳಿಗಾಗಿ ಬಹಳ ಗಮನ ಕೊಡ ಬೇಕು. ಈ ದೃಷ್ಟಿಯಿಂದ ಹೇಳುತ್ತಿದ್ದೇನೆ.

12-00 NOON

ಆಮೇಲೆ ವಿದ್ಯಾಭ್ಯಾಸದ ವಿಚಾರ ಬೆಂಗಳೂರು ಪಟ್ಟಣದಲ್ಲಿ ಪ್ರೈಮರಿ ಎಜುಕೇಷನ್ನನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಹೇಳುತ್ತಿದ್ದಾರೆ. ಬಡ ವಿದ್ಯಾರ್ಥಿಗಳು ಹಾಗೂ ಪ್ರೈಮರಿ ವಿದ್ಯಾಭ್ಯಾಸ ಪಡೆಯುವ ಹುಡುಗರು ಯಾವ ವಾತಾವರಣದಲ್ಲಿದ್ದಾರೆ, ಮತ್ತು ಶಾಲೆಗಳನ್ನು ಯಾವ ರೀತಿ ನಡೆಸಿಕೊಂಡು ಬರಲಾಗುತ್ತಿದೆ ಎಂದು ನೋಡಲು ಹೋದರೆ ಅದೆಲ್ಲ ಬಹು ಶೋಚನೀಯ ವಾಗಿದೆ. ಸಿಟಿಯಲ್ಲಿರುವ ಸ್ಲಾಟರ್ ಹೌಸುಗಳಲ್ಲಿ ಯಾವ ರೀತಿ ಕುರಿಗಳ ಕತ್ತುಗಳನ್ನು ಕತ್ತರಿಸು ತ್ತಿದ್ದಾರೋ ಹಾಗೆ ಈ ಶಾಲೆಗಳಲ್ಲಿ ಕುರಿಗಳಂತೆ ಹುಡುಗರನ್ನು ತುಂಬಿಕೊಂಡು ಪಾಠ ಹೇಳು ತ್ತಿದ್ದಾರೆ, ಹೀಗಾದರೆ ವಿದ್ಯೆ ಕಲಿಯಲು ಸಾಧ್ಯವೇ ? ಶಾಲೆಗಾಗಿ ಸರಿಯಾದ ಕಟ್ಟಡಗಳಿಲ್ಲ. ಖಾಸಗಿ ಯವರು ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಸರಕಾರದವರು ಹೇಳುತ್ತಾರೆ. ಈಗಿರುವ ವಾತಾ ವರಣದಲ್ಲಿ ಶಾಲೆಗಳಲ್ಲಿರುವ ಹುಡುಗರ ಆರೋಗ್ಯ ಕೆಡುತ್ತದೆ. ಸರಿಯಾಗಿ ಗಾಳಿ ಬೆಳಕು ಇಲ್ಲದಿರುವ ಕೊಠಡಿಗಳಲ್ಲಿ ಇಂದು ಶಾಲೆಗಳು ನಡೆಯುತ್ತಿವೆ. ನಿನ್ನೆ ದಿನ ನಾನು ಒಂದು ಶಾಲೆಯಲ್ಲಿ ಒಂದು ಉತ್ಸವದ ಅಧ್ಯಕ್ಷತೆಯನ್ನು ವಹಿಸಿದ ಸಂದರ್ಭದಲ್ಲಿ ಅಲ್ಲಿರುವ ಉಪಾಧ್ಯಾಯರುಗಳು ಹಾಗೂ ಶಾಲೆಯಲ್ಲಿನ ಹೆಣ್ಣುಮಕ್ಕಳು ಅಲ್ಲಿನ ಜಾಗಗಳನ್ನೆಲ್ಲಾ ತೋರಿಸಿದರು, ಅದನ್ನು ನೋಡಿದರೆ ಅಲ್ಲಿ ಕುಳಿತುಕೊಂಡು ಸರಿಯಾಗಿ ಪಾಠಗಳನ್ನು ಕಲಿಯಲೇ ಆಗುತ್ತಿಲ್ಲ. ಇದನ್ನೆಲ್ಲ ತಡೆಗಟ್ಟಬೇಕಾದುದು ಅಗತ್ಯ. ಸರಕಾರದವರು ಯಾವರೀತಿ ಕಾರ್ಪೊರೇಷನ್ನು ಏರಿಯಾದಲ್ಲಿ ಪೋಲೀಸು ಸ್ಟೇಷನ್ನು, ಆಸ್ಪತ್ರೆ ಮಾಡುತ್ತೀರೋ ಅದೇರೀತಿ ಮೂವ್ವತ್ತುಸಾವಿರ ಜನಸಂಖ್ಯೆಯುಳ್ಳ ಭಾಗದಲ್ಲಿ ವಿದ್ಯಾರ್ಥಿ ಗಳಿಗೆ ಅನುಕೂಲವಾಗುವಂತೆ ಸಾಕಷ್ಟು ಆಟದ ಮೈದಾನ ಪ್ರತಿಯೊಂದು ಶಾಲಾ ಸಂಸ್ಥೆಗಳಲ್ಲೂ ಇರಬೇಕು ಎಂದು ಕಡ್ಡಾಯ ಮಾಡುವುದು ಒಳ್ಳೆಯದು ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri V. S. PATIL.—Sir, though two days are over, only 30 minutes are given to us. We are now debating the Governor's Address and I do not understand how all these small matters regarding villages and taluks become relevant at all and why the Chair is not checking the members when they are going astray.

Mr. SPEAKER.—It is for the members to co-operate. I am willing to remind them that they should not go into details.

† **Sri GANJI VEERAPPA** (Harihar).—Mr. Speaker, Sir as is rightly pointed out by my frined Sri V. S. Patil, this is an occasion on which we should confine ourselves to matters of broad policy that are enunciated in the Address of the Gevernor. While expressing satisfaction at the Address wherein the progress so far made by the State has been mentioned, I am not one of those who are complascent or feel that every-hing the people of the State expects has been achieved. The achivement

(SRI GANJI VEERAPPA)

may not be to our expectation, but to a satisfactory limit progress has been made. Even in the Governor's Address it has been mentioned that though the plan outlay is Rs. 250 crores, the expenditure is only to the extent of Rs. 110 crores which amounts to 44 per cent. Now, only two years more remain and all our developmental activities and plan targets must be achieved within that short period. So the remaining two years is a period of great importance.

Sri B. D. JATTI (Minister for Finance).—The figure that has been given is not the latest figure. Some addition will have to be made.

Sri GANJI VEERAPPA.—Thank you. I do not know what else is in store when the budget is presented before this House within the course of two days by the Finance Minister. Let us not anticipate all that.

Mr. SPEAKER.—I think a large number of members desire to participate in the debate. I may also mention to the House that on Monday we will be sitting in the morning when the Budget will be presented so that it can get due publicity in the News papers without any delay. Now, the point is whether we should sit in the afternoon or not. If the members are willing to sit in the afternoon, I am also wiiling. That will give us extra time for the discussion of the Governor's Address. We will have this discussion on Tuesday also. Can we sit for a couple of hours in the afternoon on Monday to continue the debate ? Such of those as are willing can come. Anyway, we shall decide this matter on Monday after the Budget is presented.

Sri C. J. MUCKANNAPPA.—There is some sanctity attached to the budget and we should not take up any business after the presentation of the budget.

Mr. SPEAKER.—It does not lose any sanctity by our taking up some Business after the presentation of the Budget. The time is intended for the study of the Budget. The figures are voluminous and the schemes are multitudinos and the main object with which time is granted is to enable member to study them and participate in the Debate.

Sri C. J. MUCKANNAPPA.—In the midst of *rahukala* the budget will be presented.

Mr. SPEAKER.—The Hon'ble Member is fallacious as usual. The first hour will be devoted to the Question hour and the Budget will be presented at 9-30 a. m.

Sri GANJI VEERAPPA.—With regard to our plans what is happening is that the Planning Commission and the Government of India have not given us the same consideration which they have given to the neighbouring States. If we take into consideration the very big power projects which are being worked out in the neighbouring States, the Central Government is giving the entire amount to them out of their own funds. But in our State a big power project like the Sharavathy Project has to be financed from our own resources which are very meagre. We have to pay for every item of expenditure on the Sharavathy Project

from our own funds and it is a very big burden on us. If we are to repay this loan to the Centre every year, then perhaps payment of interest alone will be so huge that it will affect our resources very badly. Take for instance, the Tungabhadara Project. The entire money spent on these two projects will have to be borne by us. That is not correct. If you see the Neyvelli project in Madras that is not the position. We expect the Centre to give the same treatment to us as they are giving to others with regard to the execution of these huge projects which are of national importance. In such cases the State alone should not be made to meet the expenditure from its poor resources, but, unfortunately, that is what is happening in Mysore. Speaking about the Kundah Project in Madras the full cost is given as Central aid. So I make an appeal to our Government to bring pressure on the Central Government and tell tham that we should also be given similar assistance from the Centre and that for the big projects under excution we should not be asked to repay the loan given by them. In the case of the Upper Krishna project it is in a famine stricken area and it is not fair for the Central Government to ask us to bear the expenditure on the same from our own poor resources. If the Centre does not give assistance for that, we will have to think of fresh taxation measures to finance it when we are already overburdened with taxes. I hope the Finance Minister will impress upon the Planning Commission and the Central Government to consider these things more seriously.

Hon'ble members will agree with me that the prosperity of any country will depend upon its irrigation potentiality and its agricultural production. Our State is poor in irrigation and our percentage is only 7 to 8 per cent of land under irrigation whereas in the neighbouring States it is something like 40 to 46 per cent. Even then they are going on with gigantic projects and we are not progressing with our irrigation projects for want of funds. We must protest against this step-motherly treatment by the Centre. Some of the big irrigation and power projects must be taken up and worked up. Otherwise there will be no progres So we must press our case before the Centre for consideration at their hands.

Speaking about the Upper Krishna Project, a controversy seems to have been raised and we hear from press reports that the Union Irrigation Minister is going to come here. There is a controversy about the place where the dam is to be constructed, whether it should be in Almatti or in Narayanapura. Wherever it may be, the fact remains that our State is going to be benefited by it and it is a matter for our Engineers to decide where exactly the dam must be situated. I belong neither to Bijapur nor to Gulbarga. I hear that if the dam is constructed at Almatti it will take away the benefit that Gulbarga District will otherwise get. That is what, I think, the hon'ble Member Nomoshi made out in his speech. So far as we are concerned we feel that both Bijapur District and Gulbarga District should get the benefit and from that point of view it is said that Almatti will be more suitable. Anyway let us not leave the decision to any outsider and let us leave the decision to

(SRI GANJI VEERAPPA)

our Engineers to decide upon the more suitable place. If we leave the decision to the Central Government, the decision may not be quite favourable to us because if Narayanpur is taken up the surplus water will flow to the neighbouring State. That is why we should not leave the decision to the Central Government and let us not invite Dr. K. L. Rao to give a finding on this issue.

Sri G. V. GOWDA.—If we decide ourselves, and if the Central Government does not give technical clearance, what is to happen ?

Sri GANJI VEERAPPA.—I am told that the Centre has no objection to the construction of the dam at any of these two places. So let us not bother about technical clearance.

With regard to Cauvery waters, I am happy to learn that the Yagati project is to be taken up. I suggest that some more projects coming under the Cauvery basin also may be taken up. Otherwise we are likely to use the waters reserved for us under the 1924 Agreement. So some of these projects on the Cauvery basin must be given top priority. In this connection I may also mention that the Vedavati river has great potentialities and they can be further improved by diversion of the Yegachi to Vedavati. Sir, that will give an additional acreage of nearly 30,000 acres in Chitaldruga District and some more in the neighbouring District. In fact in Hassan District about 40,000 acres will be irrgiated if this project is taken up. I suggest that this project of diversion of water from Yagachi to Vedavathi may be seriously taken up so that with minimum expenditure, we will benefit a large area of two arid districts. The Government may kindly take up this question.

One other matter which is not found in the Governor's Address, as one my friends suggested, is with regard to prohibition. It is a very controversial matter and much can be said on both sides.

Sri B. D. JATTI.—So long as there is no change of policy, it cannot be mentioned in the Governor's address.

Sri GANJI VEERAPPA.—I can voice my feelings. I say that time has come for re-thinking, serious re-thinking and to take an immediate decision to continue it or to scrap it. If you want to continue it, what I suggest is, that the measures of enforcement must be very rigid. If you do not want to continue it, remove it so that there may not be any *via media* between the two, because it affects the State's resources very much. With regard to another matter regarding which I want to give my expression is this : It has been agitating the minds of the Members of this House that the reorganisation of the districts should be done on a rational basis. In fact, I am eager to have Davangere and Bagalkot as two new Districts.

Sri B. D. JATTI.—We can understand what are your feeling even if you are not eager.

Sri GANJI VEERAPPA.—Even from the point of view of administration, there are very small and huge districts; some districts have a population of 18 to 20 lakhs of people. So, with regard to these things, it is better that a decision is taken and I for one would feel that some of these places like Bagalkot and Davangere deserve to be converted into new districts. If there are other places which are conveniently fit for location of district headquarters, make them by all means also as districts. The question may be analysed and decision taken.

With regard to scarcity conditions prevailing in the State, it is very unfortunate that nature has been so unkind to us. Speaking from my personal knowledge, in Chitradruga, Devendra was not kind to us, and many of the Taluk in Chitaldrug have been terribly affected. Sir, it is time for the Government come to the rescue of the people who are in distress because a friend in need is a friend indeed. Some more relief measures in famine-stricken areas are necessary. I may even suggest that land revenue surcharge collections may be postponed for some time; not there must be remission because the agriculturist never bothers or hesitates to pay. He is the only honest person to pay. If he gets good crop, he will pay gladly. The Government may consider some of these questions of giving relief to famine-stricken areas because they are under very hard times.

The other thing which I would like to dwell upon is education. Sri Krishna was speaking about education. As a member of the Syndicate, if I do not express my feelings, I will be failing in my duty. The accusation was made that the Government in general and the Education Minister in particular had made discrimination bewteen the Karnatak University and the Mysore University in the matter of allocation of grants. Let us not hereafter think of Karnatak area, old Mysore area and Hyderbad Karnatak. After all, since 1956 we have all come together. This feeling of oneness must be there somehow. To my knowledge, of course, they have made no discrimination.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಸದಸ್ಯರು ಹರಿಹರ ಕ್ಷೇತ್ರದಿಂದ ಬಂದಿದ್ದಾರೆ. ಅವರು ಹರಿಹರ ಒಂದು ಮಾಡುವುದಕ್ಕೆ ಏನಾದರೂ ಸ್ವಲ್ಪ ತ್ಯಾಗ ಮಾಡಲಿ.

Sri GANJI VEERAPPA.—Even in matters of administration, there will be feelings between old Mysore Officers and integrated area officers. Some of us who are in the borders know that; people come us and tell us that there was discrimination in their case. To my knowledge so far as the university affairs are concerned in the matter of grants, as the Education Minister was pleased to announce here, at a meeting of the two Heads of Universities, they had come to an agreement with regard to grants. So I do not agree with Sri Krishna when he says that there has been discrimination in the matter of distribution of funds between the Karnata University and Mysore University. There are other matters like common syllabi where uniformity has to be brought about and they must receive our attention and as soon as possible, let us attain

(SRI GANJI VEERAPPA)

uniformity. Let there be no difference between Karnatak and Mysore Universities in regard to admissions to technical colleges. Unfortunately, in the matter of fee concessions and fee structure, there is a feeling especially among the students that certain areas are favoured whereas other areas are neglected. I congratulate the Government on there having appointed a Committee consisting of educationists to go into this question. Standards are falling. The general trend in India, let alone in Mysore, is that standards are lowering. There are many Failures. We must find out the real cause of this disease as to why there should be so much failure. There is no uniformity even in the teacher-pupil ratio. If you take one college, there the teacher-pupul ratio is 1 : 15. Take any college in Bangalore, Arts or Science college ; the ratio is 1 : 35 ; whereas in Mysore the ratio is 1 : 12 or 13. These things should be corrected. So how to improve the standards and how to eliminate the disease of so many failures should be a matter of reference to this Committee. They should go into this question and suggest ways and means of remedying them I think Sir time has come for the Govt. to rethink about our educational policy. It is very necessary for us to seriously think about this matter and improve standards whether it is with reference to the Karnatak University or Mysore University. After 10 years we must forget these differences and Mysore should be really integrated emotionally. I do not think there is need for me to dilate upon it any more. On the whole, the Address placed befor us is satisfactory and we have to agree with Sri Siddiah who has so able moved the Motion of Thanks.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರಕ್ಕಂಥ ಈ ರಾಜ್ಯಪಾಲರ ಭಾಷಣವನ್ನು ನೋಡಿದರೆ ಸರ್ಕಾರದವರು ಆಗಾಗ ನಮಗೆ ಕೊಡತಕ್ಕ ಅಡ್ಮಿನಿಸ್ಟ್ರೇಷನ್ ರಿಪೋರ್ಟ್‌ಗಳ ಹಾಗೆ ಇದೆ. ಅದೇ ರೀತಿ ಈಗಲೂ ಮಾಡದೆ, ಅಂತಹ ದೊಡ್ಡ ವ್ಯಕ್ತಿಗಳಾದ ರಾಜ್ಯಪಾಲರನ್ನು ಇಲ್ಲಿಗೆ ಕರೆದುಕೊಂಡು ಬಂದು ಅವರಿಂದ ಒಂದು ಘಂಟೆ ಕಾಲ ಭಾಷಣ ಮಾಡಿಸಿ ಈ ಸಭೆಯಲ್ಲಿ ಅಂತಹ ದೊಡ್ಡ ವ್ಯಕ್ತಿಗಳ ಬಗ್ಗೆ ಈಗ ಸಿಕ್ಕಾಪಟ್ಟೆ ಕೆಲವು ಸದಸ್ಯರು ಮಾತನಾಡತಕ್ಕ ಒಂದು ಅವಕಾಶವನ್ನು ಈ ಸರ್ಕಾರ ಏಕೆ ಕಲ್ಪನೆ ಮಾಡುತ್ತಿದಿಯೋ ಎಂದು ನನಗನ್ನಿಸುತ್ತದೆ. ಇದರಲ್ಲಿ ಹೇಳಿರತಕ್ಕಂಥಾದ್ದು ನಮಗೇನೂ ಹೊಸದೇನೂ ಅಲ್ಲ. ಈ ಮಾನ್ಯ ಸಭೆಯ ಸದಸ್ಯರೆಲ್ಲರಿಗೂ ಗೊತ್ತಿರುವ ವಿಚಾರಗಳನ್ನೆಲ್ಲಾ ಇದರಲ್ಲಿ ಹೇಳಿದ್ದಾರೆ. ಹೊಸದಾಗಿ ನಾವು ಈಗ ಏನು ಮಾಡುತ್ತಿದ್ದೇವೆ. ಮುಂದೆ ಏನೇನು ಮಾಡಬೇಕಾಗಿದೆ ಎಂಬುದನ್ನೆಲ್ಲಾ ಇಲ್ಲಿ ಹೇಳದೆ ಇರತಕ್ಕ ವಿಚಾರಗಳನ್ನು ಪದೇ ಪದೇ ಪ್ರಸ್ತಾಪಿಸುತ್ತಿರುವುದನ್ನು ಮಾತ್ರ ಇಲ್ಲಿ ನೋಡುತ್ತಿದ್ದೇವೆ. ಇದರಲ್ಲಿ ಇವರು ಬಿಟ್ಟಿರತಕ್ಕಂಥ ಮುಖ್ಯ ವಿಚಾರ ಒಂದಿದೆ. ಅದೇನೆಂದರೆ ಕೇಂದ್ರ ಮತ್ತು ನಮ್ಮ ರಾಜ್ಯ ಸರ್ಕಾರದಲ್ಲಿ ಕೆಲಸಮಾಡುತ್ತಿರುವ ಅಧಿಕಾರಿಗಳ ಮತ್ತು ನೌಕರರುಗಳ ಸಂಬಳ ಸಾರಿಗೆಗಳ ವಿಚಾರ. ಆ ವಿಚಾರದಲ್ಲಿ ರಾಜ್ಯಪಾಲರು ಯಾವ ಒಂದು ಮಾತನ್ನು ತಮ್ಮ ಭಾಷಣದಲ್ಲಿ ಆಡಲಿಲ್ಲ. ವಿಧಾನ ಸೌಧದ ಪಕ್ಕದಲ್ಲಿರತಕ್ಕ ಅಕೌಂಟೆಂಟ್ ಜನರಲ್ ಅವರ ಆಫೀಸಿನಲ್ಲಿ ಕೆಲಸಮಾಡತಕ್ಕವರಿಗೇ ಒಂದು ರೀತಿಯ ವೇತನ, ಈ ವಿಧಾನ ಸೌಧದಲ್ಲಿ ಕೆಲಸಮಾಡುತ್ತಿರುವವರಿಗೇ ಒಂದು ರೀತಿಯ ವೇತನ ಈಗ ಇದೆ. ಹೀಗಾದರೆ ಇಲ್ಲಿ ಕೆಲಸಮಾಡುವವರಿಗೆ ನಿಜವಾಗಿ ಆಷ್ಟಾಗಿ ಉತ್ಸಾಹ ಇರುವುದಿಲ್ಲ. ಅವರಿಗೆ ಬಹಳವಾಗಿ ಜಿಗುಪ್ಸೆಯುಂಟಾಗಿ ಸರ್ಕಾರೀ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯದಿರುವುದಕ್ಕೆ ಇದು ಮೂಲ ಕಾರಣವಾಗಿದೆ. ಏಕೆಂದರೆ ಈಗಾಗಲೇ ಎಷ್ಟೋ ಸರ್ಕಾರೀ ಕೆಲಸಕಾರ್ಯಗಳು ಕೆಟ್ಟುಹೋಗಿವೆ. ಬಹಳ ನಿಧಾನವಾಗಿ ಈಗಿನ ಸರ್ಕಾರೀ ಕೆಲಸಕ್ಯಾರಗಳು ನಡೆಯುತ್ತಾ ಇವೆ.

Mr. SPEAKER.—The House will now rise to meet again at 8-30 A.M. on Monday, the 2nd March 1964.

The House adjourned at Thirty Minutes past Twelve of the Clock to meet again at Thirty Minutes past Eight of the Clock on Monday, the 2nd March 1964.

WD 2374—GPB—900—14-4-64